

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ), ಶಿಕಾರಿಪುರ

# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾಲಯಕ್ಕೆ ಶಾಶ್ವತ ಸಂಯೋಜಿತ ಮತ್ತು ಎನ್.ಸಿ.ಟಿ.ಇ, ಮಾನ್ಯತೆಯೊಂದಿಗೆ ಯು.ಜಿ.ಸಿ ಅಧಿನಿಯಮ 2(f), ಸೆಕ್ಷನ್ 12(B) ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿದೆ B ಗ್ರೇಡ್ ಮನ್ನಣೆ ಹೊಂದಿದೆ.
ಶಿವಮೊಗ್ಗ ರಸ್ತೆ, ಶಿಕಾರಿಪುರ – 577 427, ಶಿವಮೊಗ್ಗ ಜಿಲ್ಲೆ

☎: 08187 – 222383, 222067 ಮಿಂಚಂಚೆ: kumadvathibed@gmail.com


## ಭಾಷಾ ಸಂಘ 2019-20




## ವಾರ್ಷಿಕ ಸಂಚಿಕೆ

ಸಂಪುಟ : 01 ಸಂಚಿಕೆ : 04 ಡಿಸೆಂಬರ್, 2019

# ಲೇಖನಗಳ ಸಂಗ್ರಹ



**ಅರ್ಪಣೆ**

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿಗೆ

## ಭಾಷಾ ಸಂಘದ ಸದಸ್ಯರುಗಳು


ಅಕ್ಷತಾ ಸಿ. ಗೌಡ


ಅಶ್ವಿನಿ.ಹೆಚ್


ದೀಪಿಕಾ.ಡಿ


ದ್ರಾಕ್ಷಾಯಿಣಿ ಕಾಗೇರ್


ಗಿರೀಶ್ ಕೆ.ಆರ್


ಲತಾ ಮಾಕನೂರ


ಮಹಮ್ಮದ್ ಸಾಬ್


ಮಲ್ಲಿಕಾರ್ಜುನ


ನಳಿನಾ ಬಿ.ಹೆಚ್


ನವೀನ್ ಕುಮಾರ್ .ವಿ


ಶಿವಕುಮಾರ್ ಎಂ.ಹೆಚ್


ಸುಮಿತ್ರ ಡಿ.ಹೆಚ್


ಚೈತ್ರ ಬಿ.ಕೆ


ಗಂಗಮ್ಮ


ಹನುಮಗೌಡ


ಕಲಾಶ್ರೀ ಎಸ್.ಬಿ


ಕನ್ನಿಕಾ ಎಂ.ಎಸ್


ಕಾವ್ಯ ವಿ


ಕಿರಣ್ ಕುಮಾರ್


ಸಲ್ಮಾಬಾನು


ಸಂಗೀತ


ಶಶಿಕುಮಾರ ಕೆ.ಸಿ


ಸೌಮ್ಯ ಬಿ


ವಿಜಯ ಕುಮಾರ

**ಚಿಗುರು**
ವಾರ್ಷಿಕ ಸಂಚಿಕೆ
ಡಿಸೆಂಬರ್ 2019,
ಸಂಪುಟ : 01 ಸಂಚಿಕೆ : 04

# ಪರಿವಿಡಿ


| ಕ್ರಮ ಸಂಖ್ಯೆ | ಸಂಗತಿಗಳು | ಪುಟ ಸಂಖ್ಯೆ |
|---|---|---|
| 01 | 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಎಚ್.ಎಸ್.ವೆಂಕಟೇಶಮೂರ್ತಿ | 1-5 |
| 02 | ಆದಿಕವಿ ಪಂಪನ ಕಾವ್ಯದಲ್ಲಿನ ಪಾತ್ರಗಳ ವೈಶಿಷ್ಟ್ಯತೆ | 6-10 |
| 03 | ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ | 10-12 |
| 04 | ಸ್ವಚ್ಛತೆ ನನಸಾಗಲಿರುವ ಒಂದು ಕನಸು | 12-16 |
| 05 | ಕನ್ನಡ ರಾಜ್ಯೋತ್ಸವದ ಇತಿಹಾಸ | 16-17 |
| 06 | ನಮ್ಮ ಕರ್ನಾಟಕ ಇತಿಹಾಸ | 18 |
| 07 | ಬುದ್ಧಿ ಹಾಗೂ ಅನುಭವ ಜೀವನದ ಎರಡು ಸೂತ್ರಗಳು | 19 |
| 08 | ಜನಸಂಖ್ಯೆ ಶಾಪವಲ್ಲ! ಅದು ವರವಾಗಲಿ | 20-21 |
| 09 | ಭೈರಪ್ಪನವರ ಬಾಲ್ಯದಲ್ಲಿನ ಪ್ರಾಮಾಣಿಕತೆ | 21 |
| 10 | ವರನಟ ಡಾ. ರಾಜ್‌ಕುಮಾರ್‌ರವರ ನಟನೆಯೊಂದಿಗೆ ಮಾಡಿದ ಇತರ ಸಾಧನೆಗಳು | 22-24 |
| 11 | ಅನುಭವ ಎನ್ನುವುದು ಗುರುವಿಗೂ ಗುರುವಿದ್ದಂತೆ | 24-26 |
| 12 | ಗೋಕಾಕ್ ಚಳುವಳಿ | 26-29 |
| 13 | ಕಲ್ಲಂಗಡಿ ಹಣ್ಣಿನ ಉಪಯೋಗ | 29-30 |
| 14 | ಕನ್ನಡ ಸಾಹಿತ್ಯ ಸಮ್ಮೇಳನ | 30-31 |
| 16 | ಕನ್ನಡದ ಹಾಡುಗಬ್ಬಗಳು | 31-32 |
| 17 | ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆ | 32-37 |
| 18 | ಬ್ರಾಹ್ಮಿ- ಪ್ರಾಕೃತವನ್ನು ಹಿಮ್ಮೆಟ್ಟಿಸಿದ ಸಂಸ್ಕೃತ ಕನ್ನಡ | 38-41 |
| 19 | ನೆನಪು ನೆನಪು ಸಿಹಿ ನೆನಪು | 41 |


**ಅಧ್ಯಕ್ಷರು**

**ಡಾ. ಜಯಶ್ರೀ ವಿ. ಆರ್**
ಪ್ರಾಚಾರ್ಯರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಪ್ರಧಾನ ಸಂಪಾದಕರು :**

**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಡಾ. ರವಿ ಹೆಚ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಸಹ ಸಂಪಾದಕರು :**

ಭಾಷಾ ಸಂಘದ ಸರ್ವಸದಸ್ಯರು.

**ಚಿಗುರು**
**ವಾರ್ಷಿಕ ಸಂಚಿಕೆ**
**ಭಾಷಾ ಸಂಘ**
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ,
ಶಿಕಾರಿಪುರ 577427
ಫೋನ್ : 08187 – 222067
Email :
kumadvathibed@gmail.com

**ಸಿರಿಗನ್ನಡಂಗೆಲ್ಗೆ ಸಿರಿಗನ್ನಡಂಬಾಳ್ಗೆ**



# 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಎಚ್.ಎಸ್.ವೆಂಕಟೇಶಮೂರ್ತಿ

ಎಚ್.ಎಸ್. ವೆಂಕಟೇಶಮೂರ್ತಿಯವರು ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ಮೊದಲಾದ ಪ್ರಕಾರಗಳಲ್ಲಿ ತಮ್ಮ ಕೊಡುಗೆಯನ್ನು ಕೊಟ್ಟು ಕನ್ನಡ ಸಾಹಿತ್ಯ ಕ್ಷೇತ್ರವನ್ನು, ಹಳೆಯ ಸಂಪ್ರದಾಯದಲ್ಲಿ ಕೃಷಿಮಾಡಿ, ಆಧುನಿಕ ಸಾಹಿತ್ಯದ ಕೃತಿಗಳನ್ನು ಸಾಹಿತ್ಯ ಪ್ರಿಯರಿಗೆ ಕೊಟ್ಟ ಮಹತ್ವದ ಲೇಖಕರಲ್ಲೊಬ್ಬರು. ಈಗ ಮಕ್ಕಳ, ಯುವಕರ, ಮತ್ತು ಮಹಿಳೆಯರಿಗೆ ಬೇಕಾದ ಗೀತೆಗಳನ್ನು ರಚಿಸಿ, ಕವಿಯಾಗಿ ಗುರುತಿಸಿಕೊಂಡಿದ್ದಾರೆ. ಇವರು ಫೆಬ್ರುವರಿ 2020ರಲ್ಲಿ ನಡೆಯುವ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅಯ್ಕೆಯಾಗಿರುವುದು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಬಹುದೊಡ್ಡ ಕೊಡುಗೆ ಎನ್ನಬಹುದು.

**ಇವರ ಜನನ, ಜೀವನ :**

ಬಾಲ್ಯದ ಹೆಸರು 'ಶ್ರೀನಿವಾಸ' ಎಂದು. 'ವೆಂಕಟೇಶಮೂರ್ತಿಯವರು', 1944 ಜೂನ್ 23ರಂದು ಶಿವಮೊಗ್ಗ ಜಿಲ್ಲೆಯ 'ಹೊದಿಗ್ಗೆರೆ' ಗ್ರಾಮದಲ್ಲಿ ಜನಿಸಿದರು. ತಂದೆ ನಾರಾಯಣ ಭಟ್ಟರು ಮತ್ತು ತಾಯಿ ನಾಗರತ್ನಮ್ಮ. ಅವರು ಶಿಕ್ಷಕಿಯಾಗಿದ್ದರು. ಅಲ್ಲಿಯ ಕನ್ನಡ ಅಧ್ಯಾಪಕರಾಗಿದ್ದ ನರಸಿಂಹ ಶಾಸ್ತ್ರಿಗಳು ಮೂರ್ತಿಯವರ ಸೃಜನಶೀಲ ಶಕ್ತಿಗೆ ಒಂದು ಮೂರ್ತ ರೂಪ ನೀಡಿದಂಥವರು. ತಮ್ಮ ಬಳಿಯಿದ್ದ ಕುವೆಂಪು, ಬೇಂದ್ರೆ, ಗೋರೂರು, ಮಾಸ್ತಿ, ಕಾರಂತ ಮೊದಲಾದವರ ಕೃತಿಗಳನ್ನು ಮೂರ್ತಿಯವರಿಗೆ ಪರಿಚಯಿಸಿದರು. ತಮ್ಮ ಚಿಂತನಾ ಕ್ರಮವನ್ನೇ ಬದಲಾಯಿಸಿಕೊಂಡು ಮೂರ್ತಿಯವರು ಹೋದಿಗ್ಗೆರೆಯ ಜಗತ್ತಿನಿಂದ ಹೊಸ ವಿಸ್ತಾರ ಪ್ರಪಂಚಕ್ಕೆ ಪ್ರವೇಶ ಪಡೆದರು.

ವೆಂಕಟೇಶ ಮೂರ್ತಿಯವರು ತಮ್ಮ ಮೊದಲ ಕವನ ಸಂಕಲನ" 'ಪರಿವೃತ್ತ'ವನ್ನು ನರಸಿಂಹ ಶಾಸ್ತ್ರಿಗಳಿಗೇ ಅರ್ಪಿಸಿದ್ದಾರೆ. ಇಲ್ಲಿಯೇ ಅವರ ಸಾಹಿತ್ಯಾಸಕ್ತ ಮನಸ್ಸು ಕೋಟೆ, ಬೆಟ್ಟ, ಪೇಟೆ, ಇವುಗಳ ಅಲೆದಾಟದಲ್ಲಿ ಪ್ರಕೃತಿಯ ಸೊಬಗಿನಲ್ಲಿ ಮುದನೀಡತೊಡಗಿ ಮುಂದಿನ ಕಾವ್ಯದಲ್ಲಿ ನಿಸಾರ್ ಅಹಮದ್ ರವರ ಗಮನಕ್ಕೆ ಬಿದ್ದರು. ಅವರ ಒಡನಾಟ ಪ್ರೀತಿಯ ಪ್ರೋತ್ಸಾಹ ಮೂರ್ತಿಯವರಲ್ಲಿ ಒಂದು ಬಗೆಯ ವಿಶ್ವಾಸ ಮೂಡಿಸಿತು. ನಿಸಾರ್ ತಮ್ಮ ಮೊದಲ ಕಾವ್ಯ ಗುರು ಎಂದು ಈಗಲೂ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ವ್ಯಾಸಂಗದ ಆಸಕ್ತಿಯಿಂದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ., ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ. "ಕನ್ನಡದಲ್ಲಿ ಕಥನ ಕವನಗಳು" ಮಹಾಪ್ರಬಂಧ ಮಂಡಿಸಿ, ಪಿಎಚ್.ಡಿ. ಪದವಿ. ಸುಮಾರು ಮೂವತ್ತು ವರ್ಷ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದಾರೆ.

ಮೂರ್ತಿಯವರು ಮಲ್ಲಾಡಿಹಳ್ಳಿಯ ಶಾಲೆಯಲ್ಲಿ ಬಹು ಬೇಗ ಜನಪ್ರಿಯರಾದರು. ಇಲ್ಲಿಯೇ ಅವರ ಸಾಹಿತ್ಯದ ಓದಿಗೂ ರಚನೆಗೂ ಉತ್ತಮ ಪರಿಸರವಿತ್ತು. ರಾಮಚಂದ್ರಮೂರ್ತಿಯವರ ಆಸಕ್ತಿಯಿಂದಾಗಿ ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳೆಲ್ಲವೂ ಅಲ್ಲಿಯ ಲೈಬ್ರೆರಿಯಲ್ಲಿ ಸಿಗುತ್ತಿದ್ದವು. ಹಾಗೂ ಹಿರಿಯ ಅಧ್ಯಾಪಕರಾಗಿದ್ದ ಜಿ.ಎಲ್.ರಾಮಪ್ಪನವರು ಕಥೆಗಾರ ಎನ್.ಎಸ್.ಚಿದಂಬರ ರಾವ್ ಅವರೂ ಗಂಭೀರ ಸಾಹಿತ್ಯ ಚರ್ಚೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಷ್ಟು ಅಧ್ಯಯನಶೀಲರಾಗಿದ್ದರು. ಎಚ್.ಎಸ್.ವಿ. ರಚಿಸುತ್ತಿದ್ದ ರಚನೆಗಳನ್ನು ಪ್ರೀತಿಯಿಂದ ಓದಿ ಪ್ರೋತ್ಸಾಹಿಸುತ್ತಿದ್ದರು. ಈ ಹಂತದಲ್ಲಿಯೆ ಮೂರ್ತಿಯವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ ಎ ಪಡೆದದ್ದು. ಇದೊಂದು ರೀತಿ ಇವರ ಬದುಕಿನಲ್ಲೊಂದು ತಿರುವು ನೀಡಿತು. ತಾಂತ್ರಿಕ ಶಿಕ್ಷಣದಿಂದ ಇವರು ಕಲಾ ವಿಭಾಗಕ್ಕೆ ತನಗೆ ಪ್ರಿಯವಾದ ವಿಷಯದ ಕಡೆಗೆ ಹೊರಳುವ ಗಂಭೀರ ಪ್ರಯತ್ನ ಮಾಡಿದರು. ಇದೇ ವೇಳೆಗೆ ಮೂರ್ತಿಯವರು 'ಪರಿವೃತ್ತ' ಸಂಕಲನ ಪ್ರಕಟಿಸಿ ಕವಿಯಾಗಿ ತಮ್ಮನು ಸಾಹಿತ್ಯ ಜಗತ್ತಿನಲ್ಲಿ ಗುರುತಿಸಿಕೊಂಡರು. ಎಮ್.ಎ. ಮಾಡಬೇಕೆಂಬ ಅವರ ತುಡಿತ ಬಲವಾಗುತ್ತಲೇ ಇತ್ತು.

ಒಮ್ಮೆ ಜಿ ಎಲ್ ರಾಮಪ್ಪನವರು ಬೆಂಗಳೂರಿಗೆ ಬಂದಿದ್ದಾಗ ತಮ್ಮ ಶಿಷ್ಯ, ಕೆ.ಮರುಳ ಸಿದ್ದಪ್ಪನವನ್ನು ಕಾಣಲು ಕನ್ನಡ ಅಧ್ಯಯನ ಕೇಂದ್ರಕ್ಕೆ ಹೋಗಿದ್ದರು. ಪ್ರಾಸಂಗಿಕವಾಗಿ ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರೊಂದಿಗೆ ಪ್ರಸ್ತಾಪಿಸಿದಾಗ, ಭಟ್ಟರು ಪರಿವೃತ್ತ ಸಂಕಲನವನ್ನು ಓದಿರುವುದಾಗಿಯೂ ಒಳ್ಳೆಯ ಕವಿಯಾದ ಮೂರ್ತಿಗೆ, ಎಮ್.ಎ. ಓದಲು ತೊಂದರೆಯಾಗಬಾರದು; ತಾವು ಶಿವರುದ್ರಪ್ಪನವರಿಗೆ ಹೇಳಿ ಸೀಟು ಕೊಡಿಸಲು ಪ್ರಯತ್ನಿಸುವುದಾಗಿಯೂ ಆಶ್ವಾಸನೆ ನೀಡಿ ಅದರಂತೆಯೇ ಮೂರ್ತಿಯವರಿಗೆ ಸೀಟು ದೊರಕಿಸಿಕೊಟ್ಟರು.

ಹೋದಿಗೆರೆಯ ಹಳ್ಳಿಯ ಪರಿಸರವೇ ಇವರ ವ್ಯಕ್ತಿತ್ವವನ್ನು ರೂಪಿಸಿ, ಅವರ ಸೃಜನ ಶೀಲತೆಯ ಸ್ವರೂಪದ ಮೇಲೆ ಗಾಢವಾದ ಪ್ರಭಾವ ಬೀರಿದೆ. ಹೊದಿಗೆರೆಯ ಕೆರೆ, ಕೆರೆಕೋಡಿ, ಅದರಾಚೆಯ ಈಚಲುವನ, ನಂತರದ ಜೋಳದಹಾಳು ಕಾಡು, ಕಂತರಂಗಮಟ್ಟಿ ಇವೆಲ್ಲಾ ವೆಂಕಟೇಶ ಮೂರ್ತಿಯವರ ಚಿಕ್ಕಂದಿನ ದಿನಗಳಲ್ಲಿ ಗಾಢಪ್ರಭಾವ ಬೀರಿದಂಥವು.

ಊರಿನ ಜನರ ಬದುಕನ್ನೇ ಅವರಿಸಿರುವ ಉತ್ಸವಗಳು ಬದುಕಿನ ಉಲ್ಲಾಸವನ್ನು ಸಹಬಾಳ್ವೆಯ ಪರಿಕಲ್ಪನೆಯನ್ನು ಜೀವಂತವಾಗಿರಿಸುವ ಸಾಧನೆಗಳಾಗಿದ್ದುವೆಂದು ಮೂರ್ತಿಯವರು ನೆನಪಿಸಿಕೊಳ್ಳುತ್ತಾರೆ. ಇವರ ಕಥನ ಕಾವ್ಯದಲ್ಲಿ ನಾವು ಕಣುವ ಜೀವೋಲ್ಲಾಸದ ಅನೇಕ ಅಂಶಗಳ ಬೇರುಗಳು ಈ ಉತ್ಸವಗಳಲ್ಲಿವೆ. ಮೂರ್ತಿಯವರ ಮುತ್ತಜ್ಜ ಕೆಲ್ಲೋಡು ಪುಟ್ಟಪ್ಪ ಪ್ರಸಿದ್ಧ ಗಮಕಿಗಳಾಗಿದ್ದರಂತೆ. ಅಲ್ಲದೆ ಅಜ್ಜ ಭೀಮರಾಯರು ಮೃದಂಗ ವಾದಕರಾಗಿದ್ದು ನಾಟಕದಲ್ಲಿ ಅವರಿಗೆ ವಿಶೇಷ ಆಸಕ್ತಿ ಇದ್ದಿತಂತೆ. ಈ ಎಲ್ಲವೂ ಅವರನ್ನು ಪ್ರಭಾವಿಸಿವೆ. ಅಲ್ಲಿನ ಭಜನೆ, ನಾಟಕ, ಗಮಕ ವಾಚನ, ಯಕ್ಷಗಾನ, ಬೊಂಬೆಯಾಟ ಇವೆಲ್ಲವುಗಳ ಧಾರ್ಮಿಕ ಸ್ಪರ್ಷವೂ ಕೂಡಾ ಕಾವ್ಯ ಸಂಸ್ಕಾರದ ಅವರ ವ್ಯಕ್ತಿತ್ವದ ಅಂಶವೇ ಅಗಿ

ಬಿಡುತ್ತಿತ್ತು. ಶ್ಯಾನುಭೋಗರಾಗಿದ್ದ ಭೀಮರಾಯರು ಊರವರ ಕಣ್ಣಲ್ಲಿ ಧರ್ಮಾತ್ಮರು. ತಮಗಿದ್ದ ತಿಳುವಳಿಕೆ ಅಧಿಕಾರಗಳನ್ನು ಜನರಿಗೆ ಉಪಕಾರ ಮಾಡುವುದಕ್ಕೇ ಬಳಸುತ್ತಿದ್ದರಂತೆ. ಇವರ ಪ್ರಭಾವವೂ ಮೂರ್ತಿಯವರ ಮೇಲೆ ಬೀರಿದೆ. ಹಾಗೂ ತಾಯಿಯ ತೌರುಮನೆಯಲ್ಲಿ ನಡೆಯುತ್ತಿದ್ದ ಗಮಕವಾಚನ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸ್ಸಿನ ಮೇಲೆ ಮಾಡಿದ ಪ್ರಭಾವದಿಂದ ಕವನ ಬರೆಯಲು ಪ್ರೇರಣೆ. ಹೆಚ್ ಎಸ್ ವಿಯರಿಗೆ ನಾಲ್ಕುಜನ ಗಂಡುಮಕ್ಕಳು. 1. ಸುಮಂತ್ 2.ಸುಧೀರ್ 3. ಸುಹಾಸ್ 4. ಸಂಜಯ್.

## ಇವರ ವೃತ್ತಿ ಬದುಕು :

1. ಭದ್ರಾವತಿಯಲ್ಲಿ ಡಿಪ್ಲೊಮ ಪಡೆದು ಮಲ್ಲಾಡಿಹಳ್ಳಿಯ ಪ್ರೌಢಶಾಲೆಯ ಕ್ರಾಫ್ಟ್ ಟೀಚರಾಗಿ ಉದ್ಯೋಗ ಪ್ರಾರಂಭ. 2. 1966ರಿಂದ 1971ರ ವರೆಗೆ ಮಲ್ಲಾಡಿಹಳ್ಳಿಯ ಪ್ರೌಢಶಾಲೆಯಲ್ಲಿ ಅಧ್ಯಾಪಕ ವೃತ್ತಿ. 3. 1971ರಿಂದ 1973–ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ಅಧ್ಯಯನ. 4. 1973ರಿಂದ 2000ದ ವರೆಗೆ ಬೆಂಗಳೂರಿನ ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ, ಅಲ್ಲೇ ಪ್ರಾಧ್ಯಾಪಕನಾಗಿ ನಿವೃತ್ತಿಯಾದರು. ನಂತರ 2000ದಿಂದ ಬೆಂಗಳೂರಿನಲ್ಲಿ ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ.

### ಇವರಿಗೆ ಸಂದ ಡಾ. ಡಿ.ಎಸ್.ಕರ್ಕಿ ಕಾವ್ಯ ಪುರಸ್ಕಾರ :

ಡಾ. ಎಚ್. ಎಸ್. ವೆಂಕಟೇಶ ಮೂರ್ತಿಯವರಿಗೆ, ಸನ್.2012 ರ, ನವೆಂಬರ್, 18 ರಂದು, 'ಡಾ. ಡಿ.ಎಸ್.ಕರ್ಕಿಯವರ ಜನ್ಮ ಶತಮಾನೋತ್ಸವದ ಶುಭಸಮಾರಂಭ'ದಂದು ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ 'ಚಂದ್ರವದನ ದೇಸಾಯಿ ಸಭಾಗೃಹ'ದಲ್ಲಿ ಡಾ. ಕರ್ಕಿ ಸಾಹಿತ್ಯ ವೇದಿಕೆಯ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಡಾ. ಕರ್ಕಿಯವರ ಸಮಗ್ರ ಸಾಹಿತ್ಯ ಸಂಪುಟಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಪ್ರಶಸ್ತಿ ಪ್ರದಾನ ಮಾಡಿದರು. ಈ ಪುರಸ್ಕಾರ, ಎಚ್ಚೆಸ್ವಿಯವರಿಗೆ ಅವರು ಬರೆದ 'ಕನ್ನಡಿಯ ಸೂರ್ಯ' ಎಂಬ ಕೃತಿಗೆ ಲಭಿಸಿದೆ.

## ಇವರ ಸಾಹಿತ್ಯ ಕೃಷಿ :

## ಕವನ ಸಂಕಲನಗಳು

'ಪರಿವೃತ್ತ'(1968), 'ಬಾಗಿಲು ಬಡಿವ ಜನಗಳು'(1971), 'ಮೊಖ್ತಾ'(1974), 'ಸಿಂದಬಾದನ ಆತ್ಮಕಥೆ' (1977), 'ಒಣ ಮರದ ಗಿಳಿಗಳು' (1981), 'ಮರೆತ ಸಾಲುಗಳು'(1983), 'ಸೌಗಂಧಿಕ'(1984), 'ಇಂದುಮುಖಿ'(1985), 'ಹರಿಗೋಲು'(1985), 'ವಿಸರ್ಗ'(1988), 'ಎಲೆಗಳು ನೂರಾರು'(1989), 'ಅಗ್ನಿಸ್ತಂಭ'(1990), 'ಎಷ್ಟೊಂದು ಮುಖ'(1990), 'ಅಮೆರಿಕದಲ್ಲಿ ಬಿಲ್ಲುಹಬ್ಬ'(1997), 'ವಿಮುಕ್ತಿ'(1998), 'ಭೂಮಿಯೂ ಒಂದು ಆಕಾಶ'(2000) 'ಮೂವತ್ತು ಮಳೆಗಾಲ'(2001).

## ಕಥಾ ಸಂಕಲನಗಳು:

• 'ಬಾನಸವಾಡಿಯ ಬೆಂಕಿ'(1980) • 'ಪುಟ್ಟಾರಿಯ ಮತಾಂತರ'(1990);

**ಕಾದಂಬರಿಗಳು:**

• 'ತಾಪಿ'(1978) • 'ಅಮಾನುಷರು'(1980) • 'ಕದಿರನ ಕೋಟೆ'(1985) • 'ಅಗ್ನಿಮುಖಿ'(1986)

**ಸಾಹಿತ್ಯಚರಿತ್ರೆ :** - 'ಕೀರ್ತನಕಾರರು'(1975)

**ಸಾಹಿತ್ಯ ವಿಮರ್ಶೆ:**

• 'ನೂರು ಮರ, ನೂರು ಸ್ವರ'(1983) • 'ಮೇಘದೂತ'(1989)

• 'ಕಥನ ಕವನ'(1990) • 'ಆಕಾಶದ ಹಕ್ಕು'(2001)

**ಅನುಭವ ಕಥನ :** - 'ಕ್ರಿಸ್ಮಸ್ ಮರ'(2000)

**ಸಂಪಾದನೆ :** - 'ಶತಮಾನದ ಕಾವ್ಯ'(2001)

**ನಾಟಕಗಳು:**

'ಹೆಜ್ಜೆಗಳು'(1981), 'ಒಂದು ಸೈನಿಕ ವೃತ್ತಾಂತ'(1993), 'ಕತ್ತಲೆಗೆ ಎಷ್ಟು ಮುಖ'(1999), 'ಚಿತ್ರಪಟ'(1999), 'ಉರಿಯ ಉಯ್ಯಾಲೆ'(1999), 'ಅಗ್ನಿವರ್ಣ'(1999), 'ಸ್ವಯಂವರ'(ಅಪ್ರಕಟಿತ).

**ಅನುವಾದ :** 'ಋತುವಿಲಾಸ' (ಕಾಳಿದಾಸನ ಋತುಸಂಹಾರದ ಅನುವಾದ: 1988)

**ಸಂಶೋಧನ ಪ್ರಬಂಧ :** • 'ಕನ್ನಡದಲ್ಲಿ ಕಥನ ಕವನಗಳು'('ಪಿ.ಎಚ್.ಡಿ'ಗಾಗಿ ಪ್ರಬಂಧ:1987)

**ಮಕ್ಕಳ ಸಾಹಿತ್ಯ:**

• ಹಕ್ಕಿಸಾಲು.(1987). • ಹೂವಿನ ಶಾಲೆ (1997). • ಸೋನಿ ಪದ್ಯಗಳು (2001). • ಉತ್ತರಾಯಣ ಮತ್ತು.....(2008).

**ಜೀವನ ಚರಿತ್ರೆ:**

• 'ಸಿ.ವಿ.ರಾಮನ್'(1974) • 'ಹೋಮಿ ಜಹಾಂಗೀರ ಭಾಭಾ'(1975)

• 'ಸೋದರಿ ನಿವೇದಿತಾ'(1995) • 'ಬಾಹುಬಲಿ'(2000) • 'ಎಚ್ಚೆಸ್ವಿ ಅನಾತ್ಮ ಕಥನ' (2010)

**ಚಲನಚಿತ್ರ ಮತ್ತು ರಂಗಭೂಮಿ:**

ಇವರಿಗೆ ಬಿಡುವಿಲ್ಲದ ಬರವಣಿಗೆಯ ನಡುವೆ ಚಲನಚಿತ್ರ ಮತ್ತು ರಂಗಭೂಮಿಯೊಡನೆ ನಿರಂತರ ಸಂಪರ್ಕವಿತ್ತು. ಚಿನ್ನಾರಿಮುತ್ತ, ಕೊಟ್ರೇಶಿಯ ಕನಸು, ಕ್ರೌರ್ಯ, ಕೊಟ್ಟ, ಮತದಾನ ಚಲನಚಿತ್ರಗಳಿಗೆ ರಚಿಸಿದ ಹಾಡುಗಳು, ಕೆಲವಕ್ಕೆ ಸಂಭಾಷಣೆ. ದೂರದರ್ಶನ ಧಾರಾವಾಹಿಗಳಾದ ಯಾವ ಜನ್ಮದ ಮೈತ್ರಿ, ಸವಿಗಾನ, ಮುಕ್ತಗಳಿಗೆ ಶೀರ್ಷಿಕೆ ಗೀತೆ. ಬಣ್ಣದ ಹಕ್ಕಿ, ಮಕ್ಕಳ ಗೀತೆಗಳು, ಅನಂತ ನಮನ, ತೂಗುಮಂಚ, ಸುಳಿಮಿಂಚು, ಅಪೂರ್ವ ರತ್ನ, ಭಾವಭೃಂಗ–ಭಾವಗೀತೆಗಳ ಧ್ವನಿ ಸುರಳಿಗಳನ್ನು ಹೊರತಂದಿದ್ದಾರೆ.

**ಯಶಸ್ವೀ ಅಧ್ಯಾಪಕರಾಗಿ ಹೆಚ್ ಎಸ್ ವಿ:**

ಸುಮಾರು ಮೂರು ದಶಕಗಳ ಕಾಲ ಎಚ್ ಎಸ್ ವಿ ಅತ್ಯಂತ ಯಶಸ್ವೀ ಅಧ್ಯಾಪಕರಾಗಿ ವಿದ್ಯಾರ್ಥಿಗಳ ಅಪಾರ ಪ್ರೀತಿಗೆ ಪಾತ್ರರಾಗಿ ಅನೇಕ ಪ್ರತಿಭೆಗಳು ಅರಳಲು ಕಾರಣವಾದದ್ದು ಈಗ ಇತಿಹಾಸ. ಅಧ್ಯಾಪಕರಾಗಿ ಮೂರ್ತಿಯವರು ರೂಪಿಸಿದ ಅನುಷ್ಠಾನಕ್ಕೆ ತಂದ ಅನೇಕ ಯೋಜನೆಗಳು ಯಾವ ಅಧ್ಯಾಪಕರಿಗೂ ಮಾದರಿಯಾಗಬಲ್ಲಂತಹವು. ಕಾಮರ್ಸ್ ಕಾಲೆಜೊಂದರಲ್ಲಿ ಇವರು ಹಮ್ಮಿಕೊಂಡ ಕಾರ್ಯಕ್ರಮಗಳು ನಾಡಿನಾದ್ಯಂತ ಮೆಚ್ಚುಗೆಗೆ ಪಾತ್ರವಾದುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದೆನ್ನುತ್ತಾರೆ ನರಹಳ್ಳಿಯವರು.

**ಇವರಿಗೆ ಸಂದ ಪ್ರಶಸ್ತಿಗಳು:**

1. 1977: 'ಸಿಂದಬಾದನ ಆತ್ಮಕಥೆ'–'ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ'
2. 1978: 'ತಾಪಿ'–'ದೇವರಾಜ ಬಹಾದ್ದೂರ ಪ್ರಶಸ್ತಿ'
3. 1980: 'ಅಮಾನುಷರು'–"ಸುಧಾ ಬಹುಮಾನ"
4. 1981: 'ಹೆಜ್ಜೆಗಳು'–" ರಂಗಸಂಪದ" ಬಹುಮಾನ
5. 1985: 'ಇಂದುಮುಖಿ'–'ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿ'
6. 1985: 'ಹರಿಗೋಲು'–'ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ'
7. 1986: 'ಅಗ್ನಿಮುಖಿ'–'ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ'
8. 1988: 'ಋತುವಿಲಾಸ': 'ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ'
9. 1990: 'ಎಷ್ಟೊಂದು ಮುಗಿಲು': 'ಬಿ.ಎಚ್.ಶ್ರೀಧರ ಪ್ರಶಸ್ತಿ'
10. 1993: 'ಒಂದು ಸೈನಿಕ ವೃತ್ತಾಂತ'–'ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ'
11. 1997: 'ಹೂವಿನ ಶಾಲೆ'–'ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ'
12. 'ಸ್ವಯಂವರ'(ಅಪ್ರಕಟಿತ)–"ಉಡುಪಿ ರಂಗಭೂಮಿ ಪುರಸ್ಕಾರ".
13. 2013: ಬಾಲ ಸಾಹಿತ್ಯ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾದೆಮಿ
14. 2014: "ಅನಕೃ ನಿರ್ಮಾಣ್ ಪ್ರಶಸ್ತಿ"
15. 2019; ಕಲ್ಬುರ್ಗಿ 85ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ.

ಹೀಗೆ ಸಾಹಿತ್ಯಿಕವಾಗಿ ಅಪಾರ ಸಾಧನೆ ಮಾಡಿದ ಹೆಚ್. ಎಸ್. ವೆಂಕಟೇಶಮೂರ್ತಿಯವರು ಯುವ ಪೀಳಿಗೆಗೆ ಆದರ್ಶಪ್ರಾಯರಾದ ಸಾಧಕರಲ್ಲಿ ಒಬ್ಬರಾಗಿದ್ದಾರೆ.

**ಡಾ. ರವಿ ಹೆಚ್.**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ,
ಶಿಕಾರಿಪುರ.

# ಆದಿಕವಿ ಪಂಪನ ಕಾವ್ಯದಲ್ಲಿನ ಪಾತ್ರಗಳ ವೈಶಿಷ್ಟ್ಯತೆ

ಪಂಪನನ್ನು ಕನ್ನಡದ ಆದಿಕವಿ ಎಂದು ಕರೆಯುತ್ತಾರೆ. ಆದಿಕವಿ ಎಂದರೆ ಮೊಟ್ಟಮೊದಲು ಕಾವ್ಯ ರಚನೆ ಮಾಡಿದವನು ಎಂದು ಅರ್ಥ. ಹಾಗೆಂದರೆ ಪಂಪನಿಗಿಂತ ಮೊದಲು ಕನ್ನಡದಲ್ಲಿ ಯಾರೂ ಕಾವ್ಯಗಳನ್ನು ಬರದೇ ಇರಲಿಲ್ಲವೆಂದು ಈ ಮಾತಿನ ಅರ್ಥವಲ್ಲ. ಪಂಪನಿಗಿಂತ ಹಿಂದೆ ಅನೇಕ ಕವಿಗಳು ಕನ್ನಡದಲ್ಲಿ ಇದ್ದರು; ಇವರೂ ಅನೇಕ ಕಾವ್ಯಗಳನ್ನು ಬರೆದಿದ್ದರು ಎಂಬ ವಿಷಯ "ಕವಿರಾಜಮಾರ್ಗ" ಎಂಬ ಗ್ರಂಥದಲ್ಲಿ ಉಲ್ಲೇಖಿತವಾಗಿದೆ. ಆದರೆ ಅವು ಯಾವುವೂ ಸಿಕ್ಕಿಲ್ಲ; ಸಿಕ್ಕಿರುವ ಕಾವ್ಯಗಳಲ್ಲಿ ಪಂಪನು ಬರೆದ "ವಿಕ್ರಮಾರ್ಜುನ ವಿಜಯ" ಮತ್ತು "ಆದಿಪುರಾಣ"ಗಳೇ ಮೊದಲನೆಯವು. ಆದ ಕಾರಣ ಪಂಪನನ್ನು ಕನ್ನಡದ ಆದಿಕವಿ ಎಂದು ಕರೆಯುತ್ತಾರೆ.

ಪಂಪ ತನ್ನ ಎರಡೂ ಕಾವ್ಯಗಳನ್ನು ಕೇವಲ ಆರು ತಿಂಗಳ ಅವಧಿಯಲ್ಲೇ ಮುಗಿಸಿದೆನೆಂದು ಹೇಳಿಕೊಂಡಿದ್ದಾನೆ. ಇಷ್ಟು ದೊಡ್ಡ ಎರಡು ಕೃತಿಗಳನ್ನು ಇಷ್ಟು ಸ್ವಲ್ಪ ಕಾಲದಲ್ಲಿ ಬರೆದು ಮುಗಿಸಬೇಕಾದರೆ, ಅವನ ಕಾವ್ಯನಿರ್ಮಾಣ ಸಾಮರ್ಥ್ಯ ಎಷ್ಟು ಮಹತ್ತಾದದ್ದಿರಬೇಕು!

ಪಂಪನಿಗೆ ತನ್ನ ರಾಜನಾದ ಅರಿಕೇಸರಿಯಿಂದ ಕೀರ್ತಿ, ಪೂಜೆ, ಲಾಭ ಈ ಮೂರೂ ಸಮೃದ್ಧವಾಗಿ ದೊರೆತವು. ಪಂಪನ ಕಾವ್ಯಗಳು ಹಿಂದಿನ ಕಾವ್ಯಗಳನ್ನು ಮೀರಿಸಿದವು. ಇವನ ಹಾಗೆ ಯಾರೂ ಬರೆಯಲಿಲ್ಲ ಎಂದು ಆ ಕಾಲದ ವಿದ್ವಾಂಸರು ಹೊಗಳಿದ್ದಲ್ಲದೆ, ಆತ "ನಾಡೋಜ" ಎಂದು ಹೆಸರಾದ. "ನಾಡೋಜ" ಎಂದರೆ ಇಡೀ ನಾಡಿಗೆ ಗುರು ಎಂದರ್ಥ. ಅರಿಕೇಸರಿ ಪಂಪನಿಗೆ "ಕವಿತಾ ಗುಣಾರ್ಣವ" ಎಂಬ ಬಿರುದನ್ನು ಕೊಟ್ಟದ್ದಲ್ಲದೆ, ಧರ್ಮಪುರ ಎಂಬ ಊರನ್ನು ಪಂಪನ ಹೆಸರಿಗೆ ಬರೆದುಕೊಟ್ಟನು. ಆದರೆ ಪಂಪ ಈ ಬಗೆಯ ಪ್ರಯೋಜನಗಳು ದೊಡ್ಡವೆಂದು ತಿಳಿದವನಲ್ಲ, ಅಲ್ಲದೆ ರಾಜರುಗಳ ಸ್ವಭಾವ ಏನು ಎಂಬುದನ್ನೂ ಬಲ್ಲವನಾಗಿದ್ದ. ಆದ್ದರಿಂದಲೇ ಇತರರನ್ನು ಆಶ್ರಯಿಸಿ ತನಗೆ ಆಗಬೇಕಾದ್ದು ಏನು ಎಂಬ ಅಭಿಮಾನ ಆತನದು. "ಬೇರೆಯವರು ಏನು ಕೊಟ್ಟಾರು, ಬೇರೆಯವರಿಂದ ಆಗುವುದೇನು" ಎಂದು ಆತನೇ ಒಂದೆಡೆ ಹೇಳಿಕೊಂಡಿದ್ದಾನೆ.

"ವಿಕ್ರಮಾರ್ಜುನ ವಿಜಯ" ದಲ್ಲಿ ಪಂಪ ಬರೆದಿರುವುದು ಮಹಾಭಾರತದ ಕತೆಯನ್ನೇ. ಸಂಸ್ಕೃತದಲ್ಲಿ ಮಹರ್ಷಿ ವ್ಯಾಸರು ಬರೆದ ಭಾರತ ಪ್ರಸಿದ್ಧವಾಗಿದೆ. ಪಂಪ ತನ್ನ "ವಿಕ್ರಮಾರ್ಜುನ ವಿಜಯ" ವನ್ನು ಬರೆಯುವಾಗ ವ್ಯಾಸ ಭಾರತವನ್ನು ಎದುರಿಗೆ ಇರಿಸಿಕೊಂಡು, ಅದನ್ನು ಕನ್ನಡದಲ್ಲಿ ಹೇಳಿದ್ದಾನೆ. ಹಾಗೆಂದರೆ ಮೂಲ ಸಂಸ್ಕೃತ ಭಾರತವನ್ನು ಹೇಗಿತ್ತೋ ಹಾಗೆ ಕನ್ನಡದಲ್ಲಿ ಇಳಿಸಿದ್ದಾನೆ ಎಂದು ಅರ್ಥವಲ್ಲ. ವ್ಯಾಸಭಾರತದ ಹರಹು ದೊಡ್ಡದು. ಅಷ್ಟು ವಿಸ್ತಾರವಾದ ಕತೆಯನ್ನು ಪಂಪ ಸಂಗ್ರಹಿಸಿ ಕನ್ನಡದಲ್ಲಿ ಹೇಳಿದ್ದಾನೆ. ಪಂಪನಿಗೆ ಗೊತ್ತು, ವ್ಯಾಸಭಾರತ ಒಂದು ವಿಸ್ತಾರವಾದ ಸಮುದ್ರದ ಹಾಗಿದೆ ಎಂದು. "ಈ ಸಮುದ್ರವನ್ನು ನಾನು ಈಜಿ ಮುಗಿಸುತ್ತೇನೆ, ನಾನೂ ಒಬ್ಬ ವ್ಯಾಸನೇ ಎಂಬ

ಗರ್ವ ನನಗಿಲ್ಲ" ಎಂದು ಹೇಳಿಕೊಂಡ ಪಂಪ. ಈ ದೊಡ್ಡ ಕತೆಯನ್ನು ಕೆಡಿಸದೇ ಹೇಳುತ್ತೇನೆ ಎಂದು ಬರೆಯಲು ಕೂತಿದ್ದಾನೆ. ಮೂಲ ಮಹಾಭಾರತದ ಕತೆಯ ಚೌಕಟ್ಟನ್ನು ಇರಿಸಿಕೊಂಡು, ಅಲ್ಲಲ್ಲಿ ತನ್ನದೇ ಆಗ ಬದಲಾವಣೆಗಳನ್ನು ಮಾಡಿಕೊಂಡು, ಹೊಸ ಹೊಸ ಸನ್ನಿವೇಶಗಳನ್ನು ನಿರ್ಮಿಸುತ್ತ, ಇದು ಕನ್ನಡದಲ್ಲಿ ಮೂಡಿದ ಬೇರೆ ಒಂದು ಸ್ವತಂತ್ರ ಕೃತಿ ಎನ್ನಿಸುವಂತೆ ಬರೆದಿದ್ದಾನೆ ಪಂಪ.

ಮುಖ್ಯವಾಗಿ ಅವನು ಹೇಳಲು ಹೊರಟದ್ದು ಅರ್ಜುನನ ವಿಕ್ರಮವನ್ನು ಅಥವಾ ತನ್ನ ರಾಜನಾದ ಅರಿಕೇಸರಿಯ ಪಾತ್ರದಲ್ಲಿ ಕೂಡಿಸುವುದರ ಮೂಲಕ ತನ್ನ ರಾಜನ ಮಹಿಮಾತಿಶಯಗಳನ್ನು. ಹೀಗಾಗಿ ಪಂಪನ ಗಮನವೆಲ್ಲಾ ಅರ್ಜುನನ ಪಾತ್ರವನ್ನು ಮೆರೆಯಿಸುವುದರಲ್ಲಿ ಆಸಕ್ತವಾಗಿದೆ. ಆ ಕಾರಣದಿಂದ ಉಳಿದ ಪಾತ್ರಗಳ ನಡವಳಿಕೆಗಳನ್ನು ಚಿತ್ರಿಸುವಲ್ಲಿ ಅವನು ಉದಾಸೀನನಾಗಿಲ್ಲ. ಅದರಲ್ಲೂ ಭೀಷ್ಮ, ದುರ್ಯೋಧನ ಮತ್ತು ಕರ್ಣ ಇವರುಗಳ ಚಿತ್ರಣವಂತೂ ವಿಶೇಷವಾದದ್ದಾಗಿದೆ.

**"ಇವರ್ಗಳಿನೀ ಭಾರತಂ ಲೋಕಪೂಜ್ಯಂ"**

ತನ್ನ ಕಾವ್ಯದ ಕಡೆಯಲ್ಲಿ ತಾನು ಬರೆದ ಭಾರತದಲ್ಲಿ ಯಾವ ಯಾವ ಪಾತ್ರ ಯಾವ ಯಾವ ಗುಣವಿಶೇಷಗಳಿಗೆ ಹೆಸರಾದವರು ಎಂಬುದನ್ನು ಕುರಿತು ಹೀಗೆ ಹೇಳುತ್ತಾನೆ; "ಛಲದಲ್ಲಿ ದುರ್ಯೋಧನ, ಕೊಟ್ಟ ಮಾತನ್ನು ನಡೆಯಿಸುವುದರಲ್ಲಿ ಕರ್ಣ, ಗಂಡುತನದಲ್ಲಿ ಭೀಮಸೇನ, ಪರಾಕ್ಷಮದಲ್ಲಿ ಶಲ್ಯ, ಅತ್ಯುನ್ನತಿಯಲ್ಲಿ ಭೀರ್ಷ್ಮರು, ಬಿಲ್ಲು ವಿದ್ಯೆಯಲ್ಲಿ ಆಚಾರ್ಯ ದ್ರೋಣ, ಸಾಹಸದ ಮಹಿಮೆಯಲ್ಲಿ ಅರ್ಜುನ, ಧರ್ಮದಲ್ಲಿ ನಿರ್ಮಲ ಮನಸ್ಸಿನ ಧರ್ಮರಾಜ– ಇವರುಗಳಿಂದ ಮಹಾಭಾರತ ಲೋಕಪೂಜ್ಯವಾಗಿದೆ." ಪಂಪ ಕೊಡುವ ಈ ಪಟ್ಟಿಯಲ್ಲಿ ಶ್ರೀ ಕೃಷ್ಣನ ಹೆಸರೇ ಬಿಟ್ಟು ಹೋಗಿದೆ! ಮಹಾಭಾರತದ ಕತೆಯಲ್ಲಿ ಶ್ರೀ ಕೃಷ್ಣ ಬಹುಮುಖ್ಯವಾದ ವ್ಯಕ್ತಿ. ಹೀಗಿದ್ದೂ ಪಂಪ ಶ್ರೀಕೃಷ್ಣನ ಹೆಸರನ್ನು ಹೇಳಿಲ್ಲವಲ್ಲ, ಯಾಕೆ? ಈ ಬಗ್ಗೆ ವಿದ್ವಾಂಸರು ಅನೇಕ ರೀತಿ ಊಹಿಸಿದ್ದಾರೆ."ಪಂಪ ಜೈನ ಮತದವನು. ಜೈನ ಮತದವರಿಗೆ ಶ್ರೀ ಕೃಷ್ಣನ ವಿಚಾರದಲ್ಲಿ ಅಷ್ಟು ಭಕ್ತಿಯಿಲ್ಲ. ಯಾಕೆಂದರೆ ಅವನು ಪಾಂಡವರಿಗೆ ಬೆಂಬಲವಾಗಿ ನಿಂತು, ಕುರುಕ್ಷೇತ್ರದಂಥ ಯುದ್ಧಕ್ಕೆ ಪ್ರೋತ್ಸಾಹ ನೀಡಿ ಹಿಂಸೆಗೆ, ರಕ್ತಪಾತಕ್ಕೆ ಕಾರಣನಾದವನು. ಅಹಿಂಸೆಯಲ್ಲಿ ನಿಷ್ಠೆಯುಳ್ಳ ಜೈನ ಮತಕ್ಕೆ ಸೇರಿದ ಪಂಪ, ಅದೇ ಕಾರಣಕ್ಕಾಗಿ ಕೃಷ್ಣನ ಪಾತ್ರಕ್ಕೆ ಅಷ್ಟು ಪ್ರಾಧಾನ್ಯವನ್ನು ಕೊಟ್ಟಿಲ್ಲ" ಎಂದು ಕೆಲವರು ಭಾವಿಸುತ್ತಾರೆ. ಆದರೆ ಈ ಭಾವನೆ ಅಷ್ಟು ಸರಿಯಾದುದಲ್ಲ. ಏಕೆಂದರೆ ಪಂಪ ಕೃಷ್ಣ ಪಾತ್ರಕ್ಕೆ ಕುಂದು ಬರದಂತೆ ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾನೆ. ಆದರೆ ಉಳಿದ ಒಬ್ಬೊಬ್ಬ ವ್ಯಕ್ತಿಗಳನ್ನು ಹೆಸರಿಸುವಾಗ, ಅವರವರನ್ನು ಯಾವುದೋ ಒಂದು ನಿರ್ದಿಷ್ಟವಾದ ಗುಣಗಳಿಗೆ ಪ್ರತಿನಿಧಿಗಳೆಂದು ಹೇಳಲು ಸಾಧ್ಯವಿರುವಂತೆ, ಶ್ರೀ ಕೃಷ್ಣನನ್ನು ಯಾವುದೇ ಒಂದು ಲಕ್ಷಣಕ್ಕೆ ಒಳಪಡಿಸಲು ಬರುವುದಿಲ್ಲ; ಅವನದು ಅಷ್ಟು ವ್ಯಾಪಕವಾದ ವ್ಯಕ್ತಿತ್ವ. ಈ ಕಾರಣದಿಂದ ಪಂಪ ಶ್ರೀಕೃಷ್ಣನ ಹೆಸರನ್ನು ಹೇಳಿಲ್ಲ– ಎಂದು ಭಾವಿಸುವುದು ಸರಿ ಎಂದು ಕಾಣುತ್ತದೆ.

**ಪಂಪನ ದುರ್ಯೋಧನ**

ಪಂಪ ತನ್ನ ಭಾರತವನ್ನು ಬರೆಯುವಲ್ಲಿ ದುರ್ಯೋಧನ ಮತ್ತು ಕರ್ಣ ಇವರ ಪಾತ್ರಗಳ್ನನು ಹೊಸ ರೀತಿಯಲ್ಲಿ ಚಿತ್ರಿಸಿದ್ದಾನೆ. ಪಂಪನ ದುರ್ಯೋಧನ ಉದಾತ್ತನಾದವನು; ಹಿಡಿದ ಛಲವನ್ನು ಕಡೆ ತನಕ ಸಾಧಿಸಿದವನು; ಮಹಾವೀರ; ಸ್ನೇಹಪರ. ಅದರಲ್ಲೂ ಕರ್ಣ ದುರ್ಯೋಧನ ಇವರ ಅಪೂರ್ವವಾದ ಸ್ನೇಹವನ್ನು ಪಂಪ ಮನಸ್ಸು ತುಂಬಿ ವರ್ಣಿಸಿದ್ದಾನೆ. ಅವರ ಸ್ನೇಹದ ಅಧಿಕ್ಯವನ್ನು ಸೂಚಿಸುವ ಒಂದು ಪ್ರಸಂಗ, ಪಂಪನೇ ಸ್ವಂತವಾಗಿ ಕಲ್ಪಿಸಿದ್ದು ಹೀಗಿದೆ;

ಒಂದು ದಿನ ದುರ್ಯೋಧನ ಕರ್ಣನನ್ನು ತನ್ನ ಅಂತಃಪುರಕ್ಕೆ ಕರೆದುಕೊಂಡು ಹೋದ. ಅಂತಃಪುರವೆಂದರೆ ರಾಣಿಯರೂ, ವಿಶೇಷವಾಗಿ ಸ್ತ್ರೀಯರೂ ಇರುವ ಸ್ಥಳ. ಇಲ್ಲಿಗೆ ರಾಜನಾದವನೊಬ್ಬನೇ ಹೋಗುತ್ತಾನೆ. ಉಳಿದ ಯಾರಿಗೂ ಪ್ರವೇಶವಿರುವುದಿಲ್ಲ. ಆದರೆ ರಾಜನಾದ ದುರ್ಯೋಧನ ಕರ್ಣನನ್ನು ಮಾತ್ರ ಅಲ್ಲಿಗೆ ಕರೆದುಕೊಂಡು ಹೋಗುವಷ್ಟು ಕರ್ಣನ ಬಗೆಗೆ ಸ್ನೇಹ.

ಒಂದು ದಿನ ದುರ್ಯೋಧನ ಅಂತಃಪುರಕ್ಕೆ ಕರ್ಣನನ್ನು ಕರೆದೊಯ್ದು. ಅಲ್ಲಿ ದುರ್ಯೋಧನನ ರಾಣಿಸ ಭಾನುಮತಿ ಇದ್ದಳು. ಬೇಸರ ಪರಿಹಾರಕ್ಕೆ ದುರ್ಯೋಧನನಿಗೆ ಪಗಡೆ ಆಡೋಣ ಅನ್ನಿಸಿತು. ಕರ್ಣನಿಗೆ ಹೇಳಿದ. "ನೀನೂ, ನನ್ನ ರಾಣಿ ಭಾನುಮತಿಯೂ ಪಗಡೆ ಆಡಿರಿ; ನಾನು ಕೂತು ನೋಡುತ್ತೇನೆ." ಸರಿ, ಪಗಡೆ ಆಟ ಶುರುವಾಯಿತು. ಅದಕ್ಕೆ ಮೊದಲು ಸಲ ಕರ್ಣ ಮತ್ತು ಬಾನುಮತಿಯರು ಮಾತಾಡಿಕೊಂಡರು. ಪಗಡೆಯಲ್ಲಿ ಸೋತವರು ಗೆದ್ದವರಿಗೆ ಏನಾದರೂ "ಪಣ" ಕೊಡಬೇಕು. ಭಾನುಮತಿ ತಾನು ಸೋತರೆ ತನ್ನ ಕೊರಳೊಳಗಿನ ಮುತ್ತಿನ ಹಾರವನ್ನು ಕರ್ಣನಿಗೆ ಪಣವಾಗಿ ಕೊಡುತ್ತೇನೆಂದು ಹೇಳಿದಳು. ಆಟ ಮೊದಲಾಯಿತು. ಸ್ನೇಹಿತನಾದ ಕರ್ಣ ಮತ್ತು ತನ್ನ ಪಟ್ಟದ ರಾಣಿ ಭಾನುಮತಿ ಪಗಡೆ ಆಡುತ್ತಿದ್ದಾರೆ. ದುರ್ಯೋಧನ ನೋಡುತ್ತಾ ಕೂತಿದ್ದಾನೆ. ಆಟ ಮುಂದುವರಿದಂತೆ, ಕರ್ಣನೇ ಗೆದ್ದ; ಭಾನುಮತಿ ಸೋತಳು.

ಗೆದ್ದ ಸಂಭ್ರಮದಲ್ಲಿ, ಎದುರಿಗೆ ಕೂತವಳು ತನ್ನ ರಾಜನಾದ ದುರ್ಯೋಧನನ ಹೆಂಡತಿ ಎಂಬುದಾಗಲಿ, ರಾಜ ದುರ್ಯೋಧನ ಎದುರಿಗೆ ಕೂತಿದ್ದಾನೆಂದಾಗಲಿ ಕರ್ಣನಿಗೆ ಎಚ್ಚರಕ್ಕೆ ಬರಲಿಲ್ಲ. ನೇರವಾಗಿ ಭಾನುಮತಿಯ ಕೊರಳ ಮುತ್ತಿನ ಹಾರಕ್ಕೆ ಕೈಹಾಕಿ, "ಕೊಡು ನನ್ನ ಪಣವನ್ನು" ಎಂದು ಜಗ್ಗಿದ. ಭಾನುಮತಿಯ ಕೊರಳಹಾರ ಹರಿದು, ಅದರಲ್ಲಿದ್ದ ಮುತ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಚದುರಿಹೋದವು.

ಹೀಗಾದೊಡನೆಯೆ ಕರ್ಣನಿಗೆ ಎಚ್ಚರ ಬಂತು. "ಅಯ್ಯೋ, ನಾನೆಂಥ ಕೆಲಸ ಮಾಡಿದೆನಲ್ಲ, ಚಕ್ರವರ್ತಿಯಾದ ದುರ್ಯೋಧನನ ಎದುರಿಗೇ ಅವನ ಹೆಂಡತಿಯ ಕೊರಳಿಗೆ ಕೈಹಾಕಿ ಮುತ್ತಿನ ಹಾರವನ್ನು ಎಳೆದೆನಲ್ಲಾ" ಎಂದು ಭಯವಾಯಿತು. ಗಾಬರಿಯಿಂದ ಮಂಕಾದ ಕರ್ಣನನ್ನು ನೋಡಿ,

ದುರ್ಯೋಧನ ನಸುನಕ್ಕು, "ಏನಯ್ಯಾ, ನಿನಗೆ ಪಣವಾಗಿ ಬರಬೇಕಾದ ಮುತ್ತಿನ ಹಾರದ ಮುತ್ತುಗಳೆಲ್ಲಾ ಚದುರಿ ಹೋದುವಲ್ಲಾ, ಆರಿಸಿ ಕೊಡಲೇನು?" ಎಂದ ದುರ್ಯೋಧನ.

ಎಂಥ ಸಂದರ್ಭದಲ್ಲೂ ಕರ್ಣನನ್ನು ತಪ್ಪು ತಿಳಿಯದೆ ಸ್ನೇಹವನ್ನೇ ದೊಡ್ಡದು ಮಾಡಿಕೊಂಡು ಬದುಕಿದ ದುರ್ಯೋಧನನ ದೊಡ್ಡತನಕ್ಕೆ ಈ ಒಂದು ಪ್ರಸಂಗ ಸಾಕ್ಷಿಯಾಗಿದೆ.

**ಭೀಷ್ಮ– ಕರ್ಣ**

ಇದೇ ಕರ್ಣ ಒಂದು ಸಲ ಭೀಷ್ಮಾಚಾರ್ಯರನ್ನು ಮೂದಲಿಸಿದ. ಕುರುಕ್ಷೇತ್ರದ ಯುದ್ಧ ನಿಶ್ಚಯವಾಗಿದೆ. ಕೌರವರ ಕಡೆ ಯಾರಿಗೆ ಸೇನಾಧಿಪತಿಯ ಪಟ್ಟ ಕಟ್ಟೋಣ ಎಂದು ಆಲೋಚಿಸುವ ಸಲುವಾಗಿ ಸಭೆ ಸೇರಿದೆ. ಭೀಷ್ಮ, ದ್ರೋಣ, ಕೃಪ, ಶಲ್ಯ, ಅಶ್ವತ್ಥಾಮ ಮೊದಲಾದವರು ಸಭೆಯಲ್ಲಿದ್ದಾರೆ. ಕುಲಕ್ಕೆ ಹಿರಿಯರಾದ ಭೀಷ್ಮರಿಗೆ ಪಟ್ಟಕಟ್ಟೋಣ ಎಂದು ದ್ರೋಣಾಚಾರ್ಯರು ಸೂಚನೆ ಮಾಡಿದರು. ಈ ಸಲಹೆಗೆ ಕರ್ಣನೊಬ್ಬನ ಹೊರತು ಉಳಿದವರೆಲ್ಲ ಒಪ್ಪಿದರು. ಕರ್ಣ ಮಾತ್ರ ಅಸಮಾಧಾನದಿಂದ ಹಾರಾಡಿದ. "ಈ ಭೀಷ್ಮರು ಮುಪ್ಪಿನ ಮುದುಕರು. ಅವರ ಪರಾಕ್ರಮವೇನಿದ್ದರೂ ಗತಕಾಲಕ್ಕೆ ಸೇರಿದ್ದು. ಅದನ್ನು ನಂಬಿ ಈ ಹೊತ್ತೂ ಯುದ್ಧ ಮಾಡುತ್ತಾರೆಂದು ಪಟ್ಟ ಕಟ್ಟುವುದು ಸರಿಯಲ್ಲ. ಕಣ್ಣು ಕಾಣದ ಈ ಮುದುಕರ ಸೇನಾಧಿಪತ್ಯದಲ್ಲಿ ಯುದ್ಧಕ್ಕೆ ಹೋದರೆ ಶತ್ರುಗಳು ನಗುತ್ತಾರೆ. ಶತ್ರುಗಳನ್ನು ಬಗ್ಗುಬಡಿಯಬೇಕೆಂದು ಮನಸ್ಸಿದ್ದರೆ ನನಗೆ ಪಟ್ಟಕಟ್ಟಿ". ಹೀಗೆಂದು ಭೀಷ್ಮರನ್ನು ತುಂಬಿದ ಸಭೆಯಲ್ಲಿ ಕರ್ಣ ಜರಿದು ನುಡಿದ. ದ್ರೋಣಾದಿಗಳು ಕರ್ಣನನ್ನು ಪ್ರತಿಯಾಗಿ ಮೂದಲಿಸಿದರು. ಮಾತಿಗೆ ಮಾತು ಮಸೆದಾಡ ಮನಸ್ಸು ಕದಡಿತು.

ಆ ಸಂದರ್ಭದಲ್ಲಿ ಅವರೆಲ್ಲರ ಮಾತಿನ ಮಸೆದಾಟವನ್ನು ಸದ್ದಿಲ್ಲದೆ ಗಂಭೀರವಾಗಿ ನೋಡುತ್ತಿದ್ದ ಭೀಷ್ಮರು ಹೇಳಿದರು: "ಅಪ್ಪಾ ಕರ್ಣ, ನೀನಿನ್ನೂ ಸ ಹರೆಯದವನು. ನಾವೇನೋ ಮುದುಕರು ನಿಜ. ಪರಾಕ್ರಮದ ಆಧಿಕ್ಯ, ಯೌವನದ ದೊಕ್ಕು, ನಿನ್ನ ಒಡೆಯನಾದ ದುರ್ಯೋಧನನು ನಿನ್ನ ಮೇಲಿರಿಸಿಕೊಂಡಿರುವ ನಂಬಿಕೆ ಮತ್ತು ಇನ್ನುಳಿದ ಬಾಹುಬಲದ ವಿಶೇಷತೆ– ತರುಣನಾದ ನಿನಗಿರುವಷ್ಟು ನನಗೆ ಎಲ್ಲಿಂದ ಬರಬೇಕು! ಆರೆ ಒಂದು ಮಾತನ್ನು ಹೇಳುತ್ತೇನೆ ಕೇಳು, ಈಗ ಮೊದಲಾಗುತ್ತಿರುವುದು ಯುದ್ಧ; ಮಹಾಯುದ್ಧ. ಎದುರಿಸುವವನು ವಿಕ್ರಮಾರ್ಜುನ. ಹೀಗಿರುವಾಗ ನನ್ನದಾದ ಮೇಲೆ ನಿನಗೂ ಸದರಿ ಬರುತ್ತದೆ. ಕಾಯುವುದನ್ನು ಕಲಿತುಕೋ".

ಭೀಷ್ಮರ ಮಾತಿನಂತೆ ಮುಂದೆ ಕರ್ಣನಿಗೂ ಹೋರಾಡುವ ಸರದಿ ಬಂತು. ಕರ್ಣ ಸೇನಾಪತಿಯಾಗುವ ಮುನ್ನ ಭೀಷ್ಮರ ಪಾದಕ್ಕೆ ನಮಸ್ಕರಿಸಿ, "ಅಜ್ಜ, ಮಾತಾಡಲು ತಿಳಿಯದೇ ನಿಮಗೆ ನೋಯಿಸಿದೆ, ಕ್ಷಮಿಸಿ" ಎಂದು ಬೇಡಿದ. "ಭೀಷ್ಮರು ಅವನನ್ನು "ನೀನು ನನ್ನ ಮೊಮ್ಮಗನೇ" ಎಂದು ಸಂತೈಸಿಸ ಕಳುಹಿಸಿದರು.

**"ಕರ್ಣರಸಾಯನ"**

ಕರ್ಣ ತನ್ನ ಸ್ವಾಮಿಗಾಗಿ ಹೋರಾಡಿ ಮಡಿದ. ಆ ಸಂದರ್ಭದಲ್ಲಿ ಪಂಪ ಹೇಳುತ್ತಾನೆ." ಮಹಾಭಾರತದ ಕತೆಯಲ್ಲಿ ಬೇರೆ ಯಾರನ್ನಾದರೂ ನೆನೆಯಿರಿ, ಅಥವಾ ನೆನೆಯದೆ ಇರಿ. ಆದರೆ ಕರ್ಣನನ್ನು ಮಾತ್ರ ನೆನೆಯದೆ ಇರಬೇಡವಣ್ಣ. ಕರ್ಣ ಮಾಡಿದಂಥ ಹೋರಾಟ, ಕರ್ಣನ ಸತ್ಯಸಂಧತೆ, ಕರ್ಣನ ತ್ಯಾಗ, ಕರ್ಣನ ವೀರ ಇವುಗಳಿಂದ ತುಂಬಿ ಮಹಾಭಾರತದ ಕತೆ ಕರ್ಣ ರಸಾಯನ ವಾಗಿದೆಯಲ್ಲವೆ?" ಕರ್ಣನ ಪಾತ್ರ ವಿಷಯಕ್ಕೆ ಪಂಪನಿಗೆ ಒಂದು ರೀತಿಯ ಪ್ರೀತಿ. ಕರ್ಣನ ದಾನಗುಣ, ಅವನ ವೀರ, ಅವನ ಸ್ವಾಮಿಭಕ್ತಿ ಪಂಪನ ಮನಸ್ಸನ್ನು ಸೂರೆಗೊಂಡಂತೆ ಕಾಣುತ್ತದೆ. ಆದ್ದರಿಂದ ತನ್ನ ಮುಖ್ಯ ಪಾತ್ರವಾದ ಅರ್ಜುನನ್ನೂ ಕೊಂಚ ಕಾಲ ಮರೆತು, ಮಹಾಭಾರತವೇ ಕರ್ಣನ ಕೀರ್ತಿಯಿಂದ, ಅವನನ್ನು ಕುರಿತ ಮಾತುಕತೆಗಳಿಂದ ಕರ್ಣರಸಾಯನವಾಗಿದೆಯಲ್ಲವೆ- ಎಂದು ಮೆಚ್ಚುಗೆಯನ್ನು ಘೋಷಿಸಿದ್ದಾನೆ.

**ಡಾ. ವೀರೇಂದ್ರ ಕುಮಾರ ವಾಲಿ. ಎಸ್**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ,**
**ಶಿಕಾರಿಪುರ.**

## ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ

ಆಧುನಿಕ ಕನ್ನಡದ ಪ್ರಸಿದ್ಧ ಕವಿ, ವಿಮರ್ಶಕರಾದ ಜಿ.ಎಸ್.ಶಿವರುದ್ರಪ್ಪನವರು ಹುಟ್ಟಿದ್ದು 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಈಸೂರಿನಲ್ಲಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ ಮತ್ತು ಪಿ.ಎಚ್.ಡಿ ಪದವಿಗಳನ್ನು ಪಡೆದ ಇವರು ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು ಅನಂತರದಲ್ಲಿ (1966) ಬೆಂಗಳೂರು ವಿಶ್ವವಿದ್ಯಾಲಯ ಸೇರಿ, 1970 ರಿಂದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದರು ಎದೆ ತುಂಬಿ ಹಾಡಿದೆನು ಅಂದು ನಾನು,ಮನವಿಟ್ಟು ಕೇಳಿದಿರಿ ಅಲ್ಲಿ ನೀವು. ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು ಕೇಳುವಿರಿ ಸಾಕೆನಗೆ ಅದುವೆ ಬಹುಮಾನ. ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನು ಎಂದು ಹಾಡಿದ ಜಿ.ಎಸ್.ಎಸ್ ಮೊದಲಿಗೆ ಕವಿಯಾಗಿ ಪ್ರಸಿದ್ಧರಾದರು.

ಇವರ 12 ಕ್ಕೂ ಹೆಚ್ಚು ಕವನ ಸಂಕಲನಗಳು ಪ್ರಕಟಗೊಂಡಿವೆ, ಸಾಮಗಾನ, ಚೆಲುವು-ಒಲವು, ಕಾರ್ತಿಕ, ದೇವರಶಿಲ್ಪ, ದೀಪದ ಹೆಜ್ಜೆ, ಅನಾವರಣ, ಪ್ರೀತಿ ಇಲ್ಲದ ಮೇಲೆ, ತೀರ್ಥವಾಣಿ-ಕೆಲವು ಪ್ರಮುಖ ಸಂಕಲನಗಳು. ಜಿ.ಎಸ್.ಎಸ್ ಸುಮಾರು 50 ವರ್ಷಗಳಿಂದ ಬರೆಯುತ್ತಿರುವ ಕವಿ (ಮೊದಲ ಕವನ ಸಂಕಲನ ಸಾಮಗಾನ ಪ್ರಕಟವಾದದ್ದು 1951 ರಲ್ಲಿ). ಇವರ ಕಾವ್ಯವನ್ನು ನವೋದಯ, ನವ್ಯ, ಬಂಡಾಯ-ದಲಿತ ಮಾರ್ಗಗಳು ಪ್ರಭಾವಿಸಿವೆ. ನವೋದಯ ಮತ್ತು ನವ್ಯ ಮಾರ್ಗಗಳ ಲಕ್ಷಣಗಳನ್ನು ಒಗ್ಗೂಡಿಸಲು ಯತ್ನಿಸಿದರು ಎಂಬ ಸರಳ ಅರ್ಥದಲ್ಲಿ ವಿಮರ್ಶಕರು ಇವರನ್ನು ಸಮನ್ವಯ ಕವಿ ಎಂದು

ಕರೆದಿರುವುದಿದೆ. ಆದರೂ ಇವರದು ನಂಬುಗೆಯ ಹಾದಿ ಎಲ್ಲ ಪಂಥಗಳಿಂದಲೂ ದೂರವನ್ನು ಕಾಯುಟ್ಟುಕೊಂಡು ಬರೆದರು. ಕನ್ನಡ ಅಧ್ಯಯನ ಕೇಂದ್ರ(ಬೆಂಗಳೂರು ವಿಶ್ವವಿದ್ಯಾಲಯ)ದಲ್ಲಿ ಎರಡು ದಶಕಗಳ ಕಾಲ ಜಿ.ಎಸ್.ಎಸ್ ಪಾಠ ಹೇಳಿದರು. ಹಲವು ವಿಮರ್ಶಾ ಲೇಖನಗಳ ಚೌಕಟ್ಟುಗಳು ಆಕಾರ ಪಡೆದದ್ದು ಈ ತರಗತಿಗಳಲ್ಲಿಯೆ.

ಪರಿಶೀಲನ, ಗತಿಬಿಂಬ, ನವೋದಯ, ಅನುರಣನ, ಪ್ರತಿಕ್ರಿಯೆ, ಬೆಡಗು– ಇವರ ವಿಮರ್ಶಾಗ್ರಂಥಗಳು. ಪ್ರಾಚೀನ, ಮಧ್ಯಕಾಲೀನ, ಹಾಗೂ ಆಧುನಿಕ ಸಾಹಿತ್ಯ ಕೃತಿಗಳ ಬಗೆಗೆ ಸಮರ್ಥ ಒಳನೋಟಗಳನ್ನು ನೀಡುತ್ತವೆ. ಸೌಂದರ್ಯ ಸಮೀಕ್ಷೆ, ಪಿ.ಎಚ್.ಡಿ ಪದವಿಗಾಗಿ ಬರೆದ ಮಹಾಪ್ರಬಂಧ. ತಾತ್ವಿಕವಾಗಿ ಕನ್ನಡ ಕಾವ್ಯವನ್ನು ವ್ಯಾಖ್ಯಾನಿಸುವ ಇವರ ಇನ್ನೆರಡು ಕೃತಿಗಳು ಕನ್ನಡ ಸಾಹಿತ್ಯ ಸಮೀಕ್ಷೆ, ಮತ್ತು ಕನ್ನಡ ಕವಿಗಳ ಕಾವ್ಯ ಕಲ್ಪನೆ. ಸಾಹಿತ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಜಿ.ಎಸ್.ಎಸ್ ತೌಲನಿಕ ಅಧ್ಯಯನದ ಮಾದರಿಗಳನ್ನು ಬಳಸಿದರು. ಮಹಾಕಾವ್ಯ ಸಮೀಕ್ಷೆ, ವಿಮರ್ಶೆಯ ಪೂರ್ವ–ಪಶ್ಚಿಮ, ಕಾವ್ಯಾರ್ಥ ಚಿಂತನ, ಈ ಬಗೆಯ ಕೃತಿಗಳಾಗಿವೆ. ಕಾವ್ಯಾರ್ಥ ಚಿಂತನ ವು ಜಿ.ಎಸ್.ಎಸ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ತಂದುಕೊಟ್ಟ ಕೃತಿ.

ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಗಂಗೆಯ ಶಿಖರಗಳಲ್ಲಿ, ಅಮೆರಿಕದಲ್ಲಿ ಕನ್ನಡಿಗ–ಪ್ರವಾಸ ಕಥನಗಳು. ಇವುಗಳ ಜೊತೆಗೆ, ಕರ್ಮಯೋಗಿ, ಎಂಬ ಜೀವನ ಚರಿತ್ರೆಯನ್ನು ಪ್ರವಾಸ ಕಥನಗಳು. ಎಂಬ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಚತುರಂಗ ಎಂಬ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಕರ್ಮಯೋಗಿ ಯು 12 ನೇ ಶತಮಾನದ ವಚನಕಾರ ಸಿದ್ಧರಾಮನನ್ನು ಕುರಿತ ಜೀವನಚಿತ್ರ, ಚತುರಂಗ ವು ಜಿ.ಎಸ್.ಎಸ್ ಅವರ ಜೀವನದ ಮುಖ್ಯ ವಿವರಗಳನ್ನು ಕೊಡುವ ಆತ್ಮಕಥಾನಕ.

ಜಿ.ಎಸ್.ಎಸ್ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿ ಮಾಡಿದ ಸಾಹಿತ್ಯ ಸಂಬಂಧದ ಚಟುವಟಿಕೆಗಳು ಗಮನಾರ್ಹವಾದುವು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ(6 ಸಂಪುಟ), ಸಾಮಾನ್ಯನಿಗೆ ಸಾಹಿತ್ಯಚರಿತ್ರೆ(10 ಸಂಪುಟ) ಮತ್ತು ಸಾಹಿತ್ಯ ವಾರ್ಷಿಕ ದ ಯೋಜನೆಗಳನ್ನು ಜಿ.ಎಸ್.ಎಸ್ ಕಾರ್ಯಗತಗೊಳಿಸಿದರು. ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಕನ್ನಡ ವಿಮರ್ಶೆಯ ಬೆಳವಣಿಗೆಗೆ ಕಾರಣರಾದರು. ಇವರು ಏರ್ಪಡಿಸಿದ ವಿಚಾರಸಂಕೀರ್ಣಗಳು ಸಮಕಾಲೀನ ಸಾಹಿತ್ಯಕ ವಾಗ್ವಾದಗಳಿಗೆ ಅನುವು ಮಾಡಿಕೊಟ್ಟವು. ಮಹಾತಾಳ್ಮೆಯ ಮತ್ತು ಅಷ್ಟೇ ಕ್ರಿಯಾಶಾಲಿಯಾದ ಈ ವ್ಯಕ್ತಿ ಬಿನ್ನ ಮನೋಧರ್ಮದವರನ್ನೆಲ್ಲ ಒಂದೆಡೆ ಸೇರಿಸುತ್ತಿದ್ದರು. ಮತ್ತು ಚರ್ಚೆಯಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ತಂದರು.

ಶ್ರೀಕುವೆಂಪು, ಪಂಪ; ಒಂದು ಅಧ್ಯಯನ: ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು; ಟಿ.ಎಸ್.ಎಲಿಯಟ್ ಮತ್ತು ಕನ್ನಡ ಸಾಹಿತ್ಯ, ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕನ್ನಡ

ಸಾಹಿತ್ಯದಲ್ಲಿ ಕಾಳಿದಾಸ, ಭಾರತೀಯ ಸಾಹಿತ್ಯ ಸಮೀಕ್ಷೆ (ಎರಡು ಬೃಹತ್ ಸಂಪುಟಗಳು), ಸಾಲು ದೀಪಗಳು – ಇವು ಜಿ.ಎಸ್.ಎಸ್ ಪ್ರಯತ್ನದಿಂದ ಬಂದ ಹಲವು ಪುಸ್ತಕಗಳಲ್ಲಿ ಕೆಲವು.

**ಇವರಿಗೆ ಸಲ್ಲಿಸಲಾಗಿರುವ ಗೌರವ-ಪ್ರಶಸ್ತಿಗಳು ಹೀಗಿವೆ:**

1. 1992 ರಲ್ಲಿ ದಾವಣಗೆರೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
2. ಕನ್ನಡ ರಾಜ್ಯೋತ್ಸವ ಪ್ರಶಸ್ತಿ
3. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ
4. 1984 ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ
5. 1997 ನೇ ಸಾಲಿನ ಪ್ರತಿಷ್ಠಿತ ಪಂಪ ಪ್ರಶಸ್ತಿ.
6. ಕರ್ನಾಟಕ ಸರ್ಕಾರದಿಂದ ರಾಷ್ಟ್ರಕವಿ ಪುರಸ್ಕಾರವನ್ನು ಪಡೆದ ಮೂರನೆ ಕವಿ ಇವರಾಗಿದ್ದಾರೆ.

**ಹನುಮಗೌಡ**
ತೃತೀಯ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ಸ್ವಚ್ಛತೆ ನನಸಾಗಲಿರುವ ಒಂದು ಕನಸು

ನಾವೀಗ ದೇಶದಾದ್ಯಂತ ಪ್ಲಾಸ್ಟಿಕ್ ನಿರ್ಮೂಲನೆ ಮತ್ತು ಸ್ವಚ್ಛ ಭಾರತ ಅಭಿಯಾನದಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಕಳೆದ ನಾಲ್ಕು ವರ್ಷಗಳಿಂದ ಮಾಡುತ್ತಿರುವ ಸಾಹಸದ ಪರಿಣಾಮ ನಿರೀಕ್ಷಿಸಿದಷ್ಟು ಯಶಕಂಡಿಲ್ಲ. ಹಾಗಿದ್ದರೆ ಇಡೀ ಸಾಗರವನ್ನು ಸ್ವಚ್ಛಗೊಳಿಸುವ ಒಂದು ಪ್ರಯತ್ನ ನಡೆದಿದೆ ಎಂದರೆ ನಂಬುವುದೇ ಕಷ್ಟ. ಸಾಗರ ವಿಶಾಲವಾಗಿದ್ದು ಅಲ್ಲಿರುವ ಕಸವನ್ನೆಲ್ಲ ಬಲೆಯಿಂದ ತೆಗೆಯುವುದು ರಸ್ತೆಯ ಮೇಲಿನ ಕಸ ಗುಡಿಸಿದಂತೆ ಸುಲಭವಲ್ಲ. ಒಂದು ವೇಳೆ ಬಲೆಯನ್ನು ಬಳಸಿ ಕಸವನ್ನು ಎತ್ತಲು ಆರಂಭಿಸಿದರೆ ಇದನ್ನು ಮುಕ್ತಾಯ ಮಾಡಲು ಸಾವಿರಾರು ವರ್ಷಗಳು ಮತ್ತು ಬಿಲಿಯನ್‌ಗಟ್ಟಲೇ ಡಾಲರ್ ಹಣ ವ್ಯಯಮಾಡ ಬೇಕಾಗುತ್ತದೆ. ಇದಲ್ಲದೇ ಈ ಕಾರ್ಯದಲ್ಲಿ ಅನೇಕ ಸಮುದ್ರ ಜೀವಿಗಳಾದ ಕಡಲಾಮೆ, ಡಾಲ್ಫಿನ್, ನೀರು ನಾಯಿ, ಸಮುದ್ರ ಹಾವು, ಮೀನುಗಳು ಇತ್ಯಾದಿ ಬಲೆಯಲ್ಲಿ ಸಿಕ್ಕಿ ಸಾಯುವ ಸಾಧ್ಯತೆಇರುತ್ತದೆ.

ಸಾಗರದ ತುಂಬೆಲ್ಲ ಅಪಾರ ಪ್ರಮಾಣದಲ್ಲಿ ಪ್ಲಾಸ್ಟಿಕ್ ಹರಡಿಕೊಂಡಿದ್ದು ಅವು ಹರಿದು ಚೂರಾಗಿ ಸೂಕ್ಷ್ಮ ಕಣಗಳಾಗಿ ಸಮುದ್ರದ ನೀರಿನಲ್ಲಿ ಸೇರಿಕೊಂಡು ಮಾನವನ ಮತ್ತು ಸಮುದ್ರದಲ್ಲಿರುವ ಜೀವಿಗಳನ್ನು ಅಪಾಯಕ್ಕೆ ಸಿಲುಕಿಸುತ್ತಿವೆ. ಅವೇ ಮೈಕ್ರೋಪ್ಲಾಸ್ಟಿಕ್ ಕಣಗಳು. ಈಗಿರುವ ಈ ಸೂಕ್ಷ್ಮ ಪ್ಲಾಸ್ಟಿಕ್ ಪ್ರಮಾಣ ತೂಕದಲ್ಲಿ ಕೇವಲ ಪ್ರತಿಶತ 3 ರಷ್ಟು ಇದ್ದು ಇನ್ನುಳಿದ ಪ್ಲಾಸ್ಟಿಕ್ ಭೂಮಿಯ ಮೇಲಿನ ಚಿತೆ ದೊಡ್ಡ ದೊಡ್ಡ ತುಕಡಿಗಳಾಗಿವೆ. ಭೂಮಿಯ ಮೇಲಿಂದ ದಿನ ನಿತ್ಯ ಸಾವಿರಾರು ಟನ್ ಪ್ಲಾಸ್ಟಿಕ್ ಸಾಗರ ಸೇರುತ್ತಿವೆ. ಇವು ಪುಡಿ ಪುಡಿಯಾದರೆ ಕೇವಲ ಸಾಗರ ಜೀವಿಗಳಿಗಷ್ಟೇ ಅಲ್ಲ ಮನುಕುಲಕ್ಕೂ ಅಪಾಯವಿದೆ. ಈಗ ನಮ್ಮ ಮುಂದಿರುವ ಆಯ್ಕೆಯೆಂದರೆ ವಿಶ್ವದಾದ್ಯಂತ ಪ್ಲಾಸ್ಟಿಕ್ ಬಳಕೆ ನಿಲ್ಲಿಸುವುದು

ಮತ್ತು ಈಗಾಗಲೇ ಸಾಗರ ಸೇರಿರುವ ಪ್ಲಾಸ್ಟಿಕ್ ಸಂಗ್ರಹಿಸಿ ಸಮುದ್ರ ಸ್ವಚ್ಛತಾ ಅಭಿಯಾನ ಆರಂಭಿಸುವುದು. ಸಾಗರ ಸ್ವಚ್ಛತೆಯ ಬಗ್ಗೆ ಅನೇಕ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದ್ದು ಅನೇಕ ಬಾರಿ ಇವು ಸಾಂಕೇತಿಕವೆನ್ನುವಂತಾಗಿವೆ. ತ್ಯಾಜ್ಯ ಪ್ರಮಾಣ ನಿರಂತರ ಹೆಚ್ಚುತ್ತಿದೆ.

ಭೂಮಿಯ ಮೇಲೆ ನಾವು ಚೆಲ್ಲುವ ಪ್ಲಾಸ್ಟಿಕ್ ಇನ್ನುಳಿದ ತ್ಯಾಜ್ಯದ ಜೊತೆಗೆ ಹರಿಯುವ ನೀರಿನೊಂದಿಗೆ ಸಾಗರಕ್ಕೆ ಸೇರುತ್ತದೆ. ಇವುಗಳಲ್ಲಿ ಕೆಲ ಭಾಗ ತೇಲುತ್ತಾ ಸಮುದ್ರತೀರದ ದಡ ಸೇರುತ್ತದೆ. ಹೀಗೆ ಸಂಗ್ರಹವಾದ ತ್ಯಾಜ್ಯವನ್ನು ವಿದ್ಯಾರ್ಥಿ ಸಮುದಾಯ ಮತ್ತು ಸಾರ್ವಜನಿಕರ ನೆರವಿನಿಂದ ಸಂಗ್ರಹಿಸಿ ನಾವು ವಿಲೇವಾರಿ ಮಾಡುತ್ತಿರುತ್ತೇವೆ. ಆದರೆ ಹೆಚ್ಚಿನ ಪ್ರಮಾಣದ ಪ್ಲಾಸ್ಟಿಕ್ ರಾಡಿಯ ಜೊತೆ ಸೇರಿ ಸಮುದ್ರದಾಳದಲ್ಲಿ ನಿರಂತರ ಹರಿಯುತ್ತಿರುವ ಪ್ರವಾಹದಲ್ಲಿ ಸಾಗಿ ಪ್ರವಾಹಗಳು ಸೇರುವಲ್ಲಿ ಉಂಟಾಗುವ ಸುಳಿಯಲ್ಲಿ ಸಂಗ್ರಹವಾಗುತ್ತವೆ. ವಿಶ್ವದ ಮಹಾಸಾಗರಗಳಲ್ಲಿ ಇಂಥ 5 ಸುಳಿಗಳಲ್ಲಿ ಅಪಾರ ಪ್ರಮಾಣದಲ್ಲಿ ಪ್ಲಾಸ್ಟಿಕ್ ಸಂಗ್ರಹವಾಗಿರುವುದನ್ನು ಗುರುತಿಸಲಾಗಿದ್ದು, ಇವುಗಳಲ್ಲಿ ಅತೀ ಹೆಚ್ಚಿನ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗಿರುವುದು ಪೆಸಿಫಿಕ್ ಮಹಾಸಾಗರದಲ್ಲಿರುವ ಕಸದ ರಾಶಿ (Great Pacific garbage patch) ಎಂದು ಕರೆಯಲಾಗುತ್ತಿದೆ. ಇದು ಹವಾಯಿ ಮತ್ತು ಕೆಲಿಫೋರ್ನಿಯಾ ನಡುವೆ ಕರಾವಳಿ ತೀರದಿಂದ ಸುಮಾರು 1400 ಕಿ.ಮೀ ದೂರದಲ್ಲಿದೆ. ಉಪಗ್ರಹದಿಂದ ಈ ರಾಶಿಯ ವಿಸ್ತೀರ್ಣವನ್ನು ಅಳೆಯಲಾಗಿದೆ. ಅದು ಎಷ್ಟು ವಿಶಾಲವಾಗಿದೆಯೆಂದರೆ, ಜರ್ಮನ್‌ರಾಷ್ಟ್ರದ ಎರಡು ಪಟ್ಟು ವಿಸ್ತಾರ ಪ್ರದೇಶವನ್ನು ಆಕ್ರಮಿಸಿದೆ. ಇದು ಸುಮಾರು 1.6 ಮಿಲಿಯನ್ ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ಇಲ್ಲಿ ಸುಮಾರು 5 ಟ್ರಿಲಿಯನ್ ನಮೂನೆಯ ವಿವಿಧ ಪ್ಲಾಸ್ಟಿಕ್ ತುಕಡಿಗಳು ಇದ್ದು ತೂಕ ಸುಮಾರು 79000 ಮೆಟ್ರಿಕ್‌ಟನ್ ಆಗಬಹುದೆಂದು ಅಂದಾಜಿಸಲಾಗಿದೆ. ವಿಶೇಷವೆಂದರೆ ಸುಳಿಯಿರುವ ಕಾರಣ ಈ ಪ್ಲಾಸ್ಟಿಕ್ ಈ ಪ್ರದೇಶದಿಂದ ಹೊರಗೆ ಹೋಗುತ್ತಿಲ್ಲ. ಸಾಗರದ ಆರೋಗ್ಯದ ದೃಷ್ಟಿಯಿಂದ ಈ ಪ್ಲಾಸ್ಟಿಕ್ ಹರಿದು ಸೂಕ್ಷ್ಮ ತುಕಡಿಗಳಾಗುವ (ಮೈಕ್ರೋಪ್ಲಾಸ್ಟಿಕ್) ಮೊದಲೇ ಅದನ್ನು ಸಾಗರದಿಂದ ತೆಗೆಯುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಿದೆ. ಇದೊಂದು ಭಗೀರಥ ಪ್ರಯತ್ನವಾಗಿದೆ. ಇದಕ್ಕಾಗಿ ವಿಶ್ವದ ವಿಜ್ಞಾನಿಗಳ ತಾಂತ್ರಿಕ ಮಾಹಿತಿ ಹಾಗೂ ವಿಶ್ವ ಸಮುದಾಯದ ಉದಾರ ದೇಣಿಗೆಯ ಅವಶ್ಯಕತೆಇದೆ. ಹಲವಾರು ಯತ್ನಗಳು ಫಲಿಸದಿರುವಾಗ ಭಗೀರಥನಂತೆ ಸಾಗರ ಸ್ವಚ್ಛತೆಯ ಕನಸು ಕಂಡವನು ಒಬ್ಬ ಶಾಲಾ ಬಾಲಕ ಬೋಯನ್ ಸ್ಲಾಟ್.

'ಬೋಯನ್ ಸ್ಲಾಟ್' ಡಚ್ ರಾಷ್ಟ್ರದ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ತನ್ನ ಸಹಪಾಠಿಗಳೊಂದಿಗೆ ಗ್ರೀಸ್ ದೇಶಕ್ಕೆ ಪ್ರವಾಸಕ್ಕೆ ಹೋಗಿ ಸಾಗರದಾಳದಲ್ಲಿ ಜೀವಿಗಳನ್ನು ಅಧ್ಯಯನ ಮಾಡಲು ಡೈವಿಂಗ್ ಮಾಡುತ್ತಿರುವಾಗ ಮೀನುಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ತುಕಡಿಗಳು ಸಮುದ್ರದಲ್ಲಿ ತೇಲುವುದನ್ನು ಕಂಡು ಚಕಿತನಾದನಂತೆ. ಇದು ನಡೆದಿದ್ದು 2011 ರಲ್ಲಿ. ಅವನೇ ಮಾತುಗಳಲಿ ಹೇಳುವುದಾದರೆ, 'ನಾನು ಸಮುದ್ರದಾಳದಲ್ಲಿ ಜೀವಿಗಳನ್ನು ಅಧ್ಯಯನ ಮಾಡಲು

ನೀರಿಗಿಳಿದಾಗ ನನಗೆ ಅಲ್ಲಿ ಮೀನುಗಳಿಗಿಂತ ಹೆಚ್ಚು ಪ್ಲಾಸ್ಟಿಕ್ ತುಕಡಿಗಳು ಕಂಡುಬಂದವು. ಆಗ ನನಗನಿಸಿದ್ದೆಂದರೆ, ಇದೊಂದು ಮುಂದಿನ ನಮ್ಮ ಜೀವಿತಾವಧಿಯಲ್ಲಿ ಎದುರಿಸಬೇಕಾದ ಬೃಹತ್ ಸಮಸ್ಯೆಯಾಗಲಿದೆ. ಆದ್ದರಿಂದ ಈಗಲೇ ಈ ಅಧ್ಯಯನ ನಡೆಸಿರುವ ಅನೇಕ ಜನರಂತೆ ಈ ಸಮಸ್ಯೆ ಎದುರಿಸಲು ನಾನೂ ಪ್ರಯತ್ನ ಮಾಡಬೇಕು' ಅವನು ಪ್ರವಾಸ ಮುಗಿಸಿ ಬಂದ ಕೂಡಲೇ ವಿಶ್ವದ ಯಾವ ಭಾಗದಲ್ಲಿ ಈ ಸಮಸ್ಯೆಗೆ ಪರಿಹಾರ ಹುಡುಕಲಾಗುತ್ತಿದೆ ಎನ್ನುವ ಬಗ್ಗೆ ಅಧ್ಯಯನ ನಡೆಸಿದನು. ಈ ಅಧ್ಯಯನದಿಂದ ಕಂಡುಬಂದುದೇನೆಂದರೆ ಈ ಸಮಸ್ಯೆಯ ಅರಿವು ಅನೇಕರಿಗಿದ್ದು ಹಲವು ಪ್ರಯತ್ನ ನಡೆಸಿದರೂ ಇಲ್ಲಿಯವರೆಗೆ ಯಾವುದೇ ಸಕಾರಾತ್ಮಕ ಪರಿಹಾರ ಕಂಡುಬಂದಿರಲಿಲ್ಲ. ವಿವಿಧ ಸಂಗ್ರಹ ತಂತ್ರಜ್ಞಾನ ಬಳಸಿದರೂ ಪ್ಲಾಸ್ಟಿಕ್ ಜೊತೆಗೆ ಅನೇಕ ಸಮುದ್ರ ಜೀವಿಗಳು ಬಲೆಯಲ್ಲಿ ಸಿಲುಕಿ ಪ್ರಾಣ ಕಳೆದುಕೊಳ್ಳಬೇಕಾಯಿತು. ಇದರಿಂದಾಗಿ ಇಂಥ ಪ್ರಯತ್ನಗಳನ್ನು ಕೈಬಿಡಲಾಯಿತು.

ಬೋಯನ್ ಪರಿಣಿತರ ಜೊತೆ ಚರ್ಚಿಸಿ ಮತ್ತು ಸಂಶೋಧನೆಗಳ ಮೂಲಕ ತನ್ನದೇಆದ ಮಾದರಿ ಸಿದ್ದಪಡಿಸುವಲ್ಲಿ ಯಶಸ್ವಿಯಾದನು. ಇದಕ್ಕೆ ಅವನು ತನ್ನ ಜೀವನದ ಅತಿ ಮಹತ್ವದ 7 ವರ್ಷಗಳನ್ನು ವ್ಯಯಿಸಿದನು. ಅವನ ಸತತ ಪ್ರಯತ್ನದ ಫಲವಾಗಿ ಅಕ್ಟೋಬರ್ 16 2018 ರಂದು ಬೋಯನ್ ಸ್ಲಾಟ್ ಸಿದ್ಧಪಡಿಸಿದ ವೈಜ್ಞಾನಿಕ ತೇಲುವ ಗುಡಿಸುವ ಕೊಳವೆ (Floting Boom System) ಬೃಹತ್ ಫೆಸಿಫಿಕ್ ಕಸದ ರಾಶಿಯನ್ನು ಗುಡಿಸಲು ಆರಂಭಿಸಿದೆ. ಇಂಥ 49 ಗುಡಿಸುವ ಕೊಳವೆಗಳನ್ನು 2020 ರವರೆಗೆ ಈ ರಾಶಿ ಗುಡಿಸಲು ಸೇರಿಸುವುದು ಅವನ ಯೋಜನೆಯಾಗಿದೆ. ಈ ಪುಟ್ಟ ಬಾಲಕ ತನ್ನ ಅತೀ ಮಹತ್ವದ ಆಟವಾಡುವ ಮತ್ತು ಸಂತೋಷದಿಂದ ಕಳೆಯಬೇಕಾದ ದಿನಗಳನ್ನು ಸಂಶೋಧನೆಯಲ್ಲಿ ತೊಡಗಿಸಿಕೊಂಡ. ಅವನದೇ ಮಾತುಗಳಲ್ಲಿ ಹೇಳಬೇಕಾದರೆ, 'ನಾನು ನನ್ನ ವಿಶ್ವವಿದ್ಯಾಲಯದ ಅಧ್ಯಯನ ಹಾಗೂ ಸಾಮಾಜಿಕ ಜೀವನವನ್ನು ಬದಿಗಿಟ್ಟು ಸಾಗರ ಸ್ವಚ್ಛತೆಯ ನನ್ನ ಪರಿಕಲ್ಪನೆಯ ಮಾದರಿಯನ್ನು ಸಿದ್ಧಪಡಿಸಲು ನಿರ್ಧರಿಸಿದೆ. ಈಗ ನಾನು ಯಶಸ್ವಿಯಾಗುವೆನೆಂದು ಅನಿಸಿರಲಿಲ್ಲ. ಆದರೆ ವಿಶ್ವಎದುರಿಸುವ ಈ ಸಮಸ್ಯೆಗೆ ಯಾರಾದರೂ ಪರಿಹಾರ ಹುಡುಕಲೇ ಬೇಕಾಗಿರುವುದರಿಂದ ನಾನೇ ಏಕೆ ಪ್ರಯತ್ನಿಸಬಾರದು ಎಂದು ನಿರ್ಧರಿಸಿ ಕಾರ್ಯೋನ್ಮುಖನಾದೆ'.

ಈ ದಿಶೆಯಲ್ಲಿ ಕಾರ್ಯೋನ್ಮುಖವಾದ ಅವನು ಸಾರ್ವಜನಿಕರ ಗಮನ ಸೆಳೆಯಲು ಮತ್ತು ಧನ ಹಾಗೂ ಜನ ಸಹಾಯಕ್ಕೆ ತನ್ನ 18ನೇ ವಯಸ್ಸಿನಲ್ಲಿ ಅಂದರೆ 2013 ರಲ್ಲಿ 'ಸಾಗರ ಸ್ವಚ್ಛಗೊಳಿಸುವಿಕೆ' (The ocean Cleanup) ಎಂಬ ಸ್ವ ಸಹಾಯ ಸಂಘವನ್ನು ಸಾಗರವನ್ನು ಪ್ಲಾಸ್ಟಿಕ್ ರಹಿತವನ್ನಾಗಿ ಮಾಡಲಿಕ್ಕೋಸ್ಕರ ನೆದರ್‌ಲ್ಯಾಂಡ್‌ನಲ್ಲಿ ಸ್ಥಾಪಿಸಿದನು. ಮತ್ತು ಅದರ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಅವನು ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದಾನೆ. ಈ ವಿಷಯ ಮತ್ತು ಕಾರ್ಯ

ಯೋಜನೆಯನ್ನು ಅಸಾಧ್ಯವಾದ ಕೆಲಸವೆಂದು ಕೆಲವು ವಿಜ್ಞಾನಿಗಳು ಕಹಿಯಾಗಿ ಸ್ವೀಕರಿಸಿದರೆ, ಅನೇಕ ಜನರು ಮತ್ತು ವಿಜ್ಞಾನಿಗಳು ಆ ಬಾಲಕಿ ನಗೆ ಎಲ್ಲಾ ವಿಧದ ಪ್ರೋತ್ಸಾಹ ನೀಡಿದರು.

ಈ ಸಾಗರ ಕಸ ಗುಡಿಸುವ ಉಪಕರಣ ಹೇಗೆ ಕೆಲಸ ಮಾಡುತ್ತದೆ ನೋಡೋಣ. ಇದೊಂದು ಸುಮಾರು 600 ಮೀ ಉದ್ದನೆಯ ತೇಲುವ ಕೊಳವೆಯಾಕಾರದ, ಸುಲಭದಲ್ಲಿ ನೀರಿನ ಅಲೆಗಳಿಗೆ ಹೊಂದಿಕೊಳ್ಳಬಹುದಾದ ಸಾಧನವಾಗಿದೆ. ಇದು ಅಳವಡಿಸಿದ ವ್ಯವಸ್ಥೆಯನ್ನು ನಿರಂತರ ತೇಲುತ್ತಿರುವಂತೆ ನೋಡಿಕೊಳ್ಳುತ್ತದೆ. ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಹೊರಚೆಲ್ಲದಂತೆ ಸಾಗರ ತೀರದ ದಡದಂತೆ ವರ್ತಿಸುತ್ತದೆ. ಇದರ ಕೆಲಭಾಗದಲ್ಲಿ ನೀರಿನಲ್ಲಿ ಮುಳುಗುವ ಸುಮಾರು 3 ಮೀಟರ್ ಉದ್ದನೆಯ ಪರದೆಯನ್ನು (ಸ್ಕರ್ಟ್) ಅಳವಡಿಸಲಾಗಿದ್ದು, ಇದು ನೀರಿನೊಳಗೆ ಇರುವ ಪ್ಲಾಸ್ಟಿಕ್ ಹೊರ ಹೋಗದಂತೆ ತಡೆಯುತ್ತದೆ. ಇಂಥ ಒಂದು ಸಾಧನ ಒಂದು ವರ್ಷಕ್ಕೆ 1,50,000/– ಪೌಂಡ್ ಪ್ಲಾಸ್ಟಿಕ್ ಸಂಗ್ರಹಿಸಬಲ್ಲುದಾಗಿದೆ. ಇಲ್ಲಿ ಸಂಗ್ರಹವಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ಕಾಲಾನುಕ್ರಮದಲ್ಲಿ (15 ದಿನದಿಂದ 1 ತಿಂಗಳಿಗೊಮ್ಮೆ) ಹಡಗಿನ ಮೂಲಕ ಸಂಗ್ರಹಿಸಿ ವಿಂಗಡಿಸಿ ವಿಲೇವಾರಿ ಮಾಡುವ ಯೋಜನೆ ಇದಾಗಿದೆ. ಈ ಪ್ಲಾಸ್ಟಿಕ್ ಮರು ಬಳಕೆಗಾಗಿ ಈಗಾಗಲೇ ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

ಈ ಪ್ಲಾಸ್ಟಿಕ್ ಗುಡಿಸುವ ಪ್ರದೇಶ, ಬೃಹತ್ ಫೆಸಿಫಿಕ್ ಸುಳಿಯಲ್ಲಿ ಹಡಗುಗಳ ಸಂಚಾರ ತೀರಾಕಡಿಮೆ ಇದೆ. ಹೀಗಿದ್ದರೂ ಹಡಗುಗಳು ಅಲ್ಲಿ ಸಂಚಾರ ಮಾಡಿದರೆ ಕಸ ಗುಡಿಸುವ ಸಾಧನಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ತೇಲುವ ಲಾಟೀನು (ಲೆಂಪ್), ರಡಾರ ಪ್ರತಿಫಲನಗಳು, ಹಡಗು ಸಂಚಾರ ಸಂಜ್ಞೆಗಳು, ಜಿಪಿಎಸ್ ಹಾಗೂ ಘರ್ಷಣೆ ವಿರೋಧಿ ಸಂಕೇತಗಳನ್ನು ಅಳವಡಿಸಲಾಗಿದೆ. ಈ ಸಂಕೇತಗಳು ನಿರಂತರ ಸಂಚರಿಸುವ ಹಡಗುಗಳಿಗೆ ತಲುಪುತ್ತಿರುತ್ತವೆ. ಅಮೇರಿಕಾದ ಕರಾವಳಿ ರಕ್ಷಣಾ ದಳವು ಈ ಸಾಧನ ಸಾಗರದಲ್ಲಿ ಅಳವಡಿಸಿರುವ ಬಗ್ಗೆ ಮಾಹಿತಿ ಸಂದೇಶ ನೀಡುತ್ತಿರುತ್ತವೆ. ಹೊಸದಾಗಿ ಕಂಡುಬರಬಹುದಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ನಿರಂತರ ಸುಧಾರಿತ ಬೂಮ್ ನಿರ್ಮಿಸಿ ಅಳವಡಿಸುವುದು ಕಾರ್ಯಯೋಜನೆಯ ಅಂಗವಾಗಿದೆ.

ಇನ್ನು ಸಾಗರ ಜೀವಿಗಳ ರಕ್ಷಣೆಗೆ ಈ ಸಾಧನದಲ್ಲಿ ನಾಲ್ಕು ಪ್ರಮುಖ ವ್ಯವಸ್ಥೆಗಳಿವೆ ಅವೆಂದರೆ,

1. ಈ ಸಾಧನ ಅಲೆಗಳ ಜೊತೆಗೆ ತುಂಬಾ ನಿಧಾನವಾಗಿ ಚಲಿಸುತ್ತಿರುತ್ತದೆ. ಇದರಿಂದಾಗಿ ಎಲ್ಲಾ ಜೀವಿಗಳು ಇಲ್ಲಿಂದ ತಪ್ಪಿಸಿಕೊಂಡು ಹೋಗಬಹುದು.
2. ಅಳವಡಿಸಿದ ಪರದೆ (ಸ್ಕರ್ಟ್) ಯಾವುದೇ ಜಾಳಿಗೆಗಳನ್ನು ಹೊಂದದಿರುವುದರಿಂದ ಪರದೆಯ ಕೆಳಗೆ ಹರಿವು ಉಂಟಾಗುತ್ತದೆ. ಪ್ರಾಣಿಗಳು ಈ ಹರವಿನ ಗುಂಟ ಪರದೆಯ ಕೆಳಗಿನಿಂದ ಹೊರಗೆ ಹೋಗಬಹುದು ಮತ್ತು ಪ್ಲಾಸ್ಟಿಕ್ ತುಕಡಿಗಳು ಮಾತ್ರ ಒಳಗೆ ಬಂಧಿಸಲ್ಪಟ್ಟಿರುತ್ತದೆ.
3. ಈ ಪರದೆಗೆ ಬಲೆಯಂತೆ ತೂತುಗಳಿಲ್ಲದ ಕಾರಣ ಯಾವುದೇ ಮೀನುಗಳು ಮತ್ತು ಇನ್ನಿತರೆ ಜೀವಿಗಳು ಪರದೆಯಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡಿ ಸಾಯುವ ಚಿಂತೆ ಇರುವುದಿಲ್ಲ.

ಸಂಗ್ರಹವಾದ ಪ್ಲಾಸ್ಟಿಕ್‌ನ್ನು ನಿಯತವಾಗಿ ಸಂಗ್ರಹಿಸಿ ವಿಲೇವಾರಿ ಮಾಡುವುದರಿಂದ ಸಾಗರದ ಜೀವಿಗಳಿಗೆ, ಪರಿಸರಕ್ಕೆ ಯಾವುದೇ ಅಪಾಯವಾಗುವ ಸಾಧ್ಯತೆ ಇರುವುದಿಲ್ಲ. ಅಲ್ಲದೇ ಪ್ರತಿ ದಿನ ಪರಿಸರದ ಬಗೆಗೆ ಕಾಳಜಿಯನ್ನು ಹೊಂದಬೇಕು. ನಮ್ಮ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಜೀವಿಸುತ್ತಿರುವ ಪ್ರತಿಯೊಬ್ಬರೂ ಇಂದು ಪರಿಸರ ಕುರಿತು ಯೋಚಿಸುವ ಸ್ಥಿತಿ ಬಂದೊದಗಿದೆ. ನೆರೆಹಾವಳಿ, ಭೂಕಂಪ, ಚಂಡಮಾರುತಗಳು ಇತ್ಯಾದಿ ಘಟನೆಗಳು ನಡೆಯುತ್ತಿರುವುದನ್ನು ನೋಡಿದರೆ ಮುಂದಿನ ದಿನಗಳಲ್ಲಿ, ಏನೆಲ್ಲ ಸಂಪತ್ತು ಇದ್ದರೂ ಬದುಕಲು ಶುದ್ಧ ಗಾಳಿ, ಬೆಳಕು ದೊರೆಯದ ದಯನೀಯ ಸ್ಥಿತಿ ಬರುವ ಕ್ಷಣಗಳು ಕೆಲವೇ ದಿನಗಳಲ್ಲಿದೆ. ಆದ್ದರಿಂದ, ಪ್ರತಿಯೊಬ್ಬರು ಈ ನಿಟ್ಟಿನಲ್ಲಿ ಆಲೋಚಿಸಿ ವಿವಿಧ ಕ್ರೀಯಾತ್ಮಕ/ಸೃಜನಾತ್ಮಕ ಚಟುವಟಿಕೆಗಳನ್ನು ಕೈಗೊಂಡು ಪರಿಸರವನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೂ ಹೌದು. ಆಗ ಮಾತ್ರ ಪರಿಸರವನ್ನು ಉಳಿಸಿಕೊಳ್ಳಲು ಸಾಧ್ಯ.

(ಸಂಗ್ರಹ)
**ಅಕ್ಷತಾ ಸಿ ಗೌಡ**
ಚತುರ್ಥ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ

## ಕನ್ನಡ ರಾಜ್ಯೋತ್ಸವದ ಇತಿಹಾಸ

ಸ್ವಾತಂತ್ರದ ನಂತರ ಒಡೆಯರ್ ಮಹಾರಾಜ ಭಾರತದ ಭಾಗವಾಗಲು ಸಮ್ಮತಿಸಿದರು. 1950 ರಲ್ಲಿ ಮೈಸೂರು ಭಾರತದ ರಾಜ್ಯವಾಯಿತು. ಹಾಗೂ ಪೂರ್ವ ಮಹಾರಾಜ 1957 ರವರೆಗೆ ರಾಜ್ಯಪಾಲರಾದರು. "ಏಕೀಕರಣ ಚಳುವಳಿ 19ನೇಯ ಶತಮಾನದ ಎರಡನೇ ಭಾಗದಲ್ಲಿ ಪ್ರಾರಂಭವಾಗಿ 1956 ರಾಜ್ಯ ಪುನರ್ ಸಂಘಟನೆ ಕಾಯಿದೆಯೊಂದಿಗೆ ಮುಕ್ತಾಯವಾಯಿತು. ಇದರಿಂದ ಕೂರ್ಗ, ಮದ್ರಾಸ್, ಹೈದರಾಬಾದ್, ಹಾಗೂ ಬಾಂಬೆ ರಾಜ್ಯದ ಭಾಗಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡಿಸಲಾಯಿತು. 'ಮೈಸೂರು' ರಾಜ್ಯವನ್ನು 'ಕರ್ನಾಟಕ' ಎಂದು ಪುನರ್ ನಾಮಕರಣ ಮಾಡಲಾಯಿತು. ಕರ್ನಾಟಕ ರಾಜ್ಯ ರೂಪುಗೊಂಡಾಗ ಒಟ್ಟು 19 ಜಿಲ್ಲೆಗಳನ್ನು ಒಳಗೊಂಡಿತ್ತು. ಅಂದಿನಿಂದ ನವೆಂಬರ್ 1 ನೇ ದಿನಾಂಕದಂದು ಕನ್ನಡ ರಾಜ್ಯೋತ್ಸವ/ ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲಾಗುತ್ತಿದೆ.

**ಕರ್ನಾಟಕ ಹೆಸರು :**

'ಕರ್ನಾಟಕ'. ಪದದ ಮೂಲದ ಬಗ್ಗೆ ಹಲವು ಅಭಿಪ್ರಾಯಗಳಿದ್ದರೂ ಸಾಮಾನ್ಯವಾಗಿ "ಕರು" ಮತ್ತು "ನಾಡು" ಸೇರಿ "ಎತ್ತರದ ಭೂಮಿ" ಎಂಬರ್ಥದ ಕರುನಾಡು ಪದದಿಂದ ಉಗಮವಾಗಿದೆ ಎನ್ನಲಾಗಿದೆ. 'ಕರು' ಎಂದರೆ ಕಪ್ಪು, 'ನಾಡು' ಎಂದರೆ ಪ್ರದೇಶ ಎಂದು ಅರ್ಥೈಸಿಕೊಂಡರೆ ಬಯಲು

ಸೀಮೆಯ ಕಂಡು ಕಪ್ಪು ಹತ್ತಿ ಮಣ್ಣಿನಿಂದಾಗಿ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಕೃಷ್ಣಾ ನದಿಯ ದಕ್ಷಿಣಕ್ಕೆ ಎರಡೂ ಕಡೆ ಜಲಾವೃತವಾದ ಪ್ರದೇಶವಾದ್ದರಿಂದ ಬ್ರಿಟಿಷರ ಕಾಲದಲ್ಲಿ ಕಾರ್ನಾಟಿಕ್ ಅಥವಾ ಕರ್ನಾಟಕ ಹೆಸರು ಬಳಕೆಗೆ ಬಂತು .

**ಕನ್ನಡ ಬಾವುಟ:**

ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಬಾವುಟವಿದೆ. ಕೆಂಪು ಮತ್ತು ಹಳದಿ ಕನ್ನಡ ಧ್ವಜಗಳು ರಾಜ್ಯೋತ್ಸವ ದಿನದಂದು ಕರ್ನಾಟಕ ರಾಜ್ಯಾದ್ಯಂತ ಮಹದಾನಂದ ಮತ್ತು ಚಟುವಟಿಕೆಯಿಂದ ಆಚರಿಸಲಾಗುತ್ತದೆ. ಕನ್ನಡಕ್ಕೊಂದು ಬಾವುಟ ಅವಶ್ಯಕತೆಯನ್ನು ಮನಗೊಂಡ ಕನ್ನಡದ ಹೋರಾಟಗಾರರಾದ ಎಂ.ರಾಮಮೂರ್ತಿಗಳು ಹಳದಿ ಹಾಗೂ ಕೆಂಪು ಬಣ್ಣ ಬಳಸಿ ಬಾವುಟವನ್ನು ಸಿದ್ದಪಡಿಸಿದರು. ಮೂಲತಃ ಹಳದಿ ಬಣ್ಣವು ಶಾಂತಿ, ಸೌಹಾರ್ದತೆ ಸೂಚಿಸಿದರೆ, ಕೆಂಪು ಬಣ್ಣ ಕ್ರಾಂತೀಯ ಸಂದೇಶ ನೀಡುತ್ತದೆ. ಕನ್ನಡಿಗರೂ ಶಾಂತಿಗೆ ಬದ್ಧ, ಯುದ್ದಕ್ಕೂ ಸಿದ್ದ ಎಂಬ ಸಂದೇಶವನ್ನು ನೀಡುತ್ತದೆ.

ಆರಂಭದಲ್ಲಿ ಕನ್ನಡ ಬಾವುಟ ಸಿದ್ಧಗೊಂಡಾಗ ಬಾವುಟದ ಮಧ್ಯೆ ಕರ್ನಾಟಕದ ಭೂಪಟ ಮತ್ತು ಅದರ ನಡುವಿನಲ್ಲಿ ಏಳು ಕವಲುಗಳುಳ್ಳ ತೆನೆಯ ಚಿತ್ರವಿತ್ತು. ಮುದ್ರಿಸಲು ಸ್ವಲ್ಪ ಕಷ್ಟವಾಗುತ್ತಿದ್ದರಿಂದ ಅದನ್ನು ತೆಗೆದು ಕೇವಲ ಹಳದಿ ಮತ್ತು ಕೆಂಪು ಬಣ್ಣವನ್ನು ಮಾತ್ರ ಉಳಿಸಿಕೊಳ್ಳಲಾಯಿತು.

**ರಾಜ್ಯೋತ್ಸವ ಆಚರಣೆ:**

ರಾಜ್ಯೋತ್ಸವವನ್ನು ಕರ್ನಾಟಕದಲ್ಲಿರುವ ಬಹುತೇಕ ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಧರ್ಮಬೇಧವಿಲ್ಲದೆ ಕನ್ನಡ ರಾಜ್ಯೋತ್ಸವ ದಿನವನ್ನು ಆಚರಿಸುತ್ತಾರೆ. ಹಾಗೂ ಸರ್ಕಾರ ಮೆರವಣಿಗೆ ಆಟೋ ರಿಕ್ಷಾಗಳು ಮತ್ತು ಇತರೆ ವಾಹನಗಳು ಕನ್ನಡ ಧ್ವಜದ ಬಣ್ಣಗಳಾದ ಕೆಂಪು ಮತ್ತು ಹಳದಿ ವರ್ಣಗಳ ಬಾವುಟದೊಂದಿಗೆ ಅಲಂಕರಿಸಲಾಗುತ್ತದೆ. ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವದ ದಿನ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಸಲ್ಲಿಸಿದ ಸಾಧಕರಿಗೆ ಪ್ರಶಸ್ತಿ ಪ್ರಕಟಪಡಿಸಲಾಗುತ್ತದೆ. ರಾಜ್ಯೋತ್ಸವದ ಆಚರಣೆಯ ಪ್ರಯುಕ್ತ ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗುತ್ತದೆ. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಮುಖ್ಯಮಂತ್ರಿ ಸಾಧಕರಿಗೆ ಈ ಪ್ರಶಸ್ತಿಯನ್ನು ವಿತರಿಸುತ್ತಾರೆ.

**ದೀಪಿಕಾ ಡಿ**
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

# ನಮ್ಮ ಕರ್ನಾಟಕ ಇತಿಹಾಸ



ಕರ್ನಾಟಕವು ಭೌಗೋಳಿಕವಾಗಿ ದಖ್ಖನ ಪ್ರಸ್ಥಭೂಮಿಯ ನೈರುತ್ಯದ ಬಹು ಭಾಗವನ್ನು ಹೊಂದಿದೆ.ಪಶ್ಚಿಮ ಕರಾವಳಿಯ ಒಂದು ಭಾಗವು ಕರ್ನಾಟಕಕ್ಕೆ ಸೇರಿದೆ.ಅದು 11.30 ನಿಂದ 18.45ಯ ಉತ್ತರ ಅಕ್ಷಾಂಶ ಮತ್ತು 74.12ನಿಂದ 78.30ಯ ಪೂರ್ವ ರೇಖಾಂಶದವರೆಗೆ ಹಬ್ಬಿದೆ. ಅದು ಉತ್ತರದಲ್ಲಿ ಮಹಾರಾಷ್ಟ್ರ, ದಕ್ಷಿಣದಲ್ಲಿ ಕೇರಳ, ತಮಿಳುನಾಡು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಗೋವಾ ಮತ್ತು ಪೂರ್ವದಲ್ಲಿ ಆಂದ್ರಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು ಒಟ್ಟು 1,91,791ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಉತ್ತರ–ದಕ್ಷಿಣವಾಗಿ 770ಕಿ.ಮೀ ಉದ್ದ ಹಾಗೂ ಪೂರ್ವ–ಪಶ್ಚಿಮವಾಗಿ 400 ಕಿ.ಮೀ ಅಗಲವಾಗಿದೆ. ಕರ್ನಾಟಕದಲ್ಲಿ 30 ಜಿಲ್ಲೆಗಳಿವೆ. ಇಲ್ಲಿನ ಬಹುಸಂಖ್ಯಾತ ಜನರು ಕನ್ನಡ ಭಾಷೆಯಾಡುತ್ತಾರೆ.

“ಕರ್ನಾಟ”ಎಂಬ ಸಂಸ್ಕೃತ ಪದದಿಂದ ಕರ್ನಾಟಕ ಎಂಬ ಕನ್ನಡ ಪದ ನಿಷ್ಪನ್ನವಾಗಿದೆ. ಅದರ ಉಗಮ ಮತ್ತು ವಿಕಾಸ ಅದರ ನಾಡು, ಜನಾಂಗ ಮತ್ತು ಭಾಷೆಗಳಿಂದಾಗಿದೆ. ಕರ್ನಾಟಕವನ್ನು ಬಹಳ ಹಿಂದೆಯೇ ‘ಕರ್ನಾಡು’ ಎಂಬ ದ್ರಾವಿಡ ಪದದಿಂದ ಕರೆಯಲಾಗುತ್ತಿತ್ತು. ಕರ್ನಾಡು (ಕರುನಾಡು) ಎಂದರೇ ಕಪ್ಪುಮಣ್ಣಿನನಾಡು ಎಂದು ಬಣ್ಣಿಸಲಾಗಿದೆ. ಕರುನಾಡು ಎಂದರೆ ಕರು+ನಾಡು. ಕರು ಎಂದರೆ ಎತ್ತರದ ನಾಡುಎಂದರ್ಥ ಮತ್ತೆ ಕೆಲವರು ಈ ನಾಡನ್ನು“ಕಮ್ಮಿತ್ತು ನಾಡು” ಅಂದರೆ ಸುಗಂಧ ಪರಿಮಳ ನೀಡುನ ನಾಡೆಂದು ಸಹ ಹೇಳಿದ್ದಾರೆ.

ನಮ್ಮ ಕರ್ನಾಟಕದಲ್ಲಿ ಹರಿಯುವ ಪ್ರಮುಖ ನದಿಗಳು ಕೃಷ್ಣ ನದಿ, ತುಂಗಭದ್ರಾ ನದಿ, ಕಾವೇರಿನದಿ ಗಳಾಗಿವೆ ಹಾಗಾಗಿ ಪ್ರಮುಖವಾಗಿ ಭತ್ತ, ಗೋಧಿ, ರಾಗಿ, ತೆಂಗು, ಅಡಕೆ, ಕಬ್ಬು, ನೆಲೆಗಡಲೆ, ರೇಷ್ಮೆ ಇವುಗಳು ಪ್ರಮುಖ ಬೆಳೆಗಳಾಗಿವೆ. ಅಲ್ಲದೆ, ಚಿನ್ನ, ಕಬ್ಬಿಣ, ಮ್ಯಾಂಗನೀಸ್, ಬೆಳ್ಳಿ, ಬಾಕ್ಸೈಟ್, ತಾಮ್ರ ಇವುಗಳು ಪ್ರಮುಖ ಖನಿಜಗಳಾಗಿದ್ದು, ಕರ್ನಾಟಕದ ಸಮೃದ್ದಿಯನ್ನು ಹೆಚ್ಚಿಸುತ್ತದೆ.

**ದ್ರಾಕ್ಷಾಯಿಣಿ ಕಾಗೇರ್**
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

# ಬುದ್ಧಿ ಹಾಗೂ ಅನುಭವ ಜೀವನದ ಎರಡು ಸೂತ್ರಗಳು

ಬುದ್ಧಿ ಹಾಗೂ ಅನುಭವಗಳು ಜೀವನದ ಎರಡು ಸೂತ್ರಗಳು ಇದರಲ್ಲಿ ಯಾವುದು ಹೆಚ್ಚಿನದು ಎಂದು ಕೇಳಿದರೆ 'ಅನುಭವ' ಎಂದೇ ಹೇಳಬೇಕಾಗುತ್ತದೆ. ಅನುಭವಕ್ಕೆ ತಿಳಿದದ್ದು ಬುದ್ಧಿಗೆ ಹೊಳೆದಿರುವುದಿಲ್ಲ ಆದರೆ, ಜೀವನದಲ್ಲಿ ಸರಿಯಾದ ಪರಿಣಾಮವನ್ನು ಕಂಡು ಪ್ರಗತಿಯನ್ನು ಸಾಧಿಸಬೇಕಾದರೆ ಬುದ್ಧಿ ಹಾಗೂ ಅನುಭವ ಇಲ್ಲದೇ ಹೋದರೆ ನಾವು ತಪ್ಪು ಮಾಡುತ್ತಲೇ ಹೋಗುತ್ತೇವೆ. ನಮ್ಮಲ್ಲಿ ಬುದ್ಧಿ ಇಲ್ಲದೆ ಹೊಸ ಹಾದಿ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ.

ನಮ್ಮ ಬದುಕಿನಲ್ಲಿ ನಮಗೆ ಫಲಿಸಿದ್ದು ಲಭಿಸಬೇಕಾದರೆ, ನಮ್ಮ ಬುದ್ಧಿಗೆ ಅನುಭವದ ಬೆಂಬಲ ಬೇಕೇಬೇಕು. ಅನುಭವ ಎನ್ನುವುದು ಸುಮ್ಮನೇ ಸಿಗಲಾರದು ಅದಕ್ಕೆ ಬಹಳಷ್ಟು ಪ್ರಯತ್ನ ಹಾಗೂ ಪರಿಶ್ರಮಬೇಕು, ಮಗುವು ನಡೆಯುವ ತನ್ನ ಪ್ರಯತ್ನದಲ್ಲಿ ತೊಡಗಿದಾಗ ಮಾತ್ರ ನಡೆಯುವ ಕ್ರೀಯೆಯನ್ನು ಕಲಿತುಕೊಳ್ಳಲು ಸಾಧ್ಯ. ಮಗು ತನ್ನ ಪ್ರಯತ್ನದಲ್ಲಿ ತೊಡಗಿದಾಗಲೆಲ್ಲಾ ಪಕ್ವತೆಯನ್ನು ಕಂಡುಕೊಳ್ಳುತ್ತದೆ. ಸಾಮಾನ್ಯವಾಗಿ ನಾವು ಗಣಿತ ವಿಷಯದಲ್ಲಿ ತಪ್ಪು ಮಾಡುತ್ತ ಹೋಗಿ ಕೊನೆಯಲ್ಲಿ ಪ್ರಾಯೋಗಿಕವಾದ ಅನುಭವವು ದೊರೆತು ಅದು ಅನುಭವವಾಗಿ ಮಾರ್ಪಟ್ಟು ನಾವು ಸರಿ ಉತ್ತರವನ್ನು ಪಡೆದುಕೊಳ್ಳುತ್ತೇವೆ.

ಮನುಷ್ಯನು ಕೇವಲ ಸಿದ್ಧಾಂತವನ್ನು ಮಾತ್ರ ಹಿಡಿದುಕೊಂಡು ಹೋಗಬಾರದು ಏಕೆಂದರೆ, ಸಿದ್ಧಾಂತವು ನಮ್ಮನ್ನು ತಪ್ಪು ಹಾದಿಗೆ ಕರೆದುಕೊಂಡು ಹೋಗುವ ಸಾಧ್ಯತೆಗಳು ಬಹಳಷ್ಟಿರುತ್ತವೆ. ಆದ್ದರಿಂದ, ನಾವು ಸಿದ್ಧಾಂತವನ್ನು ನಂಬಿದರೂ ಅನುಭವದ ಮಾರ್ಗದರ್ಶನವನ್ನು ಪಡೆಯಲೇಬೇಕು. ಈ ಅನುಭವವನ್ನು ನೀತಿಯಂತೆ ಒಬ್ಬರಿಂದ ಒಬ್ಬರಿಗೆ ಅದನ್ನು ವರ್ಗಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಲೆಯನ್ನಾಗಲಿ, ನೀತಿಯನ್ನಾಗಲಿ, ಅನುಭವವನ್ನಾಗಲೀ, ಸ್ವಪ್ರಯತ್ನದಿಂದಲೇ ಸಂಪಾದಿಸಬೇಕಾಗುತ್ತದೆ, ಅನುಭವಗಳು ಸಾಮಾನ್ಯವಾಗಿ ಜೀವನದ ಪ್ರಯೋಗಕ್ಕೆ ಒಳಪಟ್ಟಿರುತ್ತವೆ, ಆದ್ದರಿಂದಲೇ ಇವುಗಳನ್ನು ನಂಬುತ್ತೇವೆ.

ಅನುಭವವು ಅತ್ಯಮೂಲ್ಯವಾದುದು. ಶಾಲೆಗಳಲ್ಲಿ ಪಾಠವನ್ನು ಮೊದಲು ಹೇಳಿ ಪರೀಕ್ಷೆಯನ್ನು ಅನಂತರ ತೆಗೆದುಕೊಳ್ಳುತ್ತಾರೆ. ಆದರೆ, ಅನುಭವ ಶಾಲೆಯಲ್ಲಿ ಹಾಗೆ ಅಲ್ಲ, ಅಲ್ಲಿ ಪರೀಕ್ಷೆಯನ್ನು ಮೊದಲು ತೆಗೆದುಕೊಂಡು ಪಾಠವನ್ನು ಅನಂತರ ಹೇಳಿಕೊಡುತ್ತದೆ. ಅದಕ್ಕಾಗಿಯೇ ಹೇಳುವುದು ಬುದ್ಧಿ ಪರೀಕ್ಷೆಯಾದರೆ, ಅನುಭವ ಜೀವನಾನುಭವ ಎಂದು ಹೇಳುತ್ತಾರೆ.

**ಗಿರೀಶ್ ಕೆ.ಆರ್**
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

# ಜನಸಂಖ್ಯೆ ಶಾಪವಲ್ಲ! ಅದು ವರವಾಗಲಿ

ಭಾರತ ಈಗ ವಿಶ್ವದಲ್ಲೇ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಎರಡನೇ ರಾಷ್ಟ್ರ. ಆದರೇ ಚೀನಾವನ್ನು ಹಿಂದಿಕ್ಕಿ ಇನ್ನೆಂಟು ವರ್ಷಗಳಲ್ಲೇ ಭಾರತ ಜನಸಂಖ್ಯೆ ವಿಷಯದಲ್ಲಿ ಮೊದಲ ಸ್ಥಾನಕ್ಕೆ ತಲುಪಲಿದೆ ಎಂದು ವಿಶ್ವಸಂಸ್ಥೆಯ ವರದಿ ಹೇಳಿದೆ. ಇದು ಕಳವಳದ ವಿಷಯವೂ ಹೌದು. ಈಗಲೇ ಹೆಚ್ಚು ಜನಸಂಖ್ಯೆಯ ಭಾರದಿಂದ ಭಾರತ ಎದುರಿಸುತ್ತಿರುವ ಸಮಸ್ಯೆಗಳು ಒಂದೆರಡಲ್ಲ. ಆರೋಗ್ಯ, ವಸತಿ, ಕುಡಿಯುವ ನೀರು ಸೇರಿ ಮೂಲ ಸೌಕರ್ಯಗಳು ಕೋಟ್ಯಂತರ ಜನರ ಪಾಲಿಗೆ ಮರೀಚಿಕೆಯಾಗಿಯೇ ಉಳಿದಿದ್ದರೆ, ಮತ್ತೊಂದೆಡೆ ನಿರುದ್ಯೋಗ ಪ್ರಮಾಣ ಏರುತ್ತಿದೆ. ಹಾಗಾಗಿ, ದುಡಿಯುವ ಕೈಗಳು ಕೆಲಸವಿಲ್ಲದೆ ಮುಂದೇನು ಎಂಬ ಚಿಂತೆಯಲ್ಲಿ ಮುಳುಗಿವೆ. ಚೀನಾ ಜನಸಂಖ್ಯಾ ಸ್ಫೋಟ ತಪ್ಪಿಸಲು ಹಲವು ಕ್ರಮ ಕೈಗೊಂಡಿತು. ತೀರಾ ಇತ್ತೀಚಿನವರೆಗೂ ಆ ದೇಶದಲ್ಲಿ 'ಒಂದೇ ಮಗು ನೀತಿ' ಜಾರಿಯಲ್ಲಿತ್ತು. ಅದನ್ನು ಈಗ ಸ್ವಲ್ಪ ಸಡಿಲಿಸಲಾಗಿದ್ದು, ಇಬ್ಬರು ಮಕ್ಕಳನ್ನು ಹೊಂದಬಹುದಾಗಿದೆ. ಚೀನಾ ಹೊರ ರಾಷ್ಟ್ರಗಳಿಗೆ ತನ್ನ ಅಭಿವೃದ್ಧಿಯ ಮುಖವಷ್ಟೇ ಪರಿಚಯಿಸುತ್ತಿದ್ದು, ಅಲ್ಲೂ ಬಡತನ, ನಿರುದ್ಯೋಗ ವ್ಯಾಪಕ ಪ್ರಮಾಣದಲ್ಲಿ ತಾಂಡವವಾಡುತ್ತಿದೆ ಎಂಬುದು ರಹಸ್ಯವೇನಲ್ಲ.

ಭಾರತದಲ್ಲಿ ಜನಸಂಖ್ಯೆ ಹೆಚ್ಚುತ್ತ ಹೋದಂತೆ ಹಿರಿಯ ನಾಗರೀಕರ ಸಂಖ್ಯೆಯೂ ಹೆಚ್ಚಲಿದೆ. 2050ರ ವೇಳೆಗೆ ಜಗತ್ತಿನ ಆರು ಜನರಲ್ಲಿ ಒಬ್ಬರ ವಯೋಮಾನ 65 ವರ್ಷ ಮೀರಿದ್ದಾಗಿರಲಿದೆ. ಪ್ರಸಕ್ತ ಚೀನಾ 143 ಹಾಗೂ ಭಾರತ 137 ಕೋಟಿ ಜನಸಂಖ್ಯೆಯನ್ನು ಹೊಂದಿವೆ. ಈಗಾಗಲೇ ಭಾರತದ ಮಹಾನಗರಗಳು ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚು ತುಂಬಿ ತುಳುಕುತ್ತಿದ್ದು, ಹಲವು ಸಮಸ್ಯೆಗಳಿಗೆ ತುತ್ತಾಗಿವೆ. ಜೀವನಾವಕಾಶಗಳನ್ನು ಅರಿಸಿ ವಲಸೆ ಪ್ರಮಾಣವೂ ಹೆಚ್ಚುತ್ತಿದೆ. ಮತ್ತೊಂದೆಡೆ ಕೃಷಿ ರಂಗ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಪ್ರಮಾಣವೂ ಕಡಿಮೆಯಾಗುತ್ತಿದೆ. ವಾಸ್ತವ ಹೀಗಿರುವಾಗ, ಮುಂದಿನ ವರ್ಷಗಳಲ್ಲಿ ಜನಸಂಖ್ಯೆ ಮತ್ತಷ್ಟು ಹೆಚ್ಚಿದಲ್ಲಿ ಅದು ಹೊಸ ಸವಾಲುಗಳನ್ನು ತಂದೊಡ್ಡಲಿದೆ. ಆ ಸವಾಲುಗಳನ್ನು ಎದುರಿಸಲು ನಮ್ಮ ಸರ್ಕಾರಗಳು, ನೀತಿ ನಿರೂಪಕರು, ಸಾಮಾಜಿಕ ವಿಜ್ಞಾನಿಗಳು ಸಿದ್ಧವಾಗಿದ್ದಾರಾ ಎಂದು ಅವಲೋಕಿಸಿದರೆ ನಿರಾಶೆಯೇ ಆವರಿಸುತ್ತದೆ. ಮುಖ್ಯವಾಗಿ ಮೂಲ ಸೌಕರ್ಯಗಳ ಕೊರತೆ, ನೀರು, ಆಹಾರದ ಲಭ್ಯತೆ ದೊಡ್ಡ ಸವಾಲಾಗಿರಲಿದೆ. ಜನ ಜೀವನಕ್ಕೆ ಅಗತ್ಯ ಸೌಕರ್ಯಗಳು ಬೇಕಾಗುತ್ತವೆ. ಈ ನಿಟ್ಟಿನಲ್ಲಿ ಈಗಿನಿಂದಲೇ ಆಳುಗರು ಸಿದ್ಧತೆ ಮಾಡಿಕೊಳ್ಳಬೇಕು. ಅಲ್ಲದೆ, ಆ ನಿಟ್ಟಿನಲ್ಲಿ ಸೂಕ್ತ ಯೋಜನೆ ರೂಪಿಸಬೇಕಿದೆ. ದೂರದೃಷ್ಟಿಯ ಕಾರ್ಯಕ್ರಮಗಳು, ಯೋಜನೆಗಳು ಹಾಕಿಕೊಳ್ಳದಿದ್ದಲ್ಲಿ ಜನಸಂಖ್ಯಾ ಸ್ಫೋಟ ಶಾಪವಾಗಿ ಕಾಡುವುದು ದಿಟ. ಆದರೆ, ಅದನ್ನೇ ವ್ಯವಸ್ಥಿತವಾಗಿ ನಿಯೋಜಿಸಿ, ಸೌಕರ್ಯಗಳನ್ನು ಕಲ್ಪಿಸುವಲ್ಲಿ ಯಶಸ್ವಿಯಾದಲ್ಲಿ ದುಡಿಯುವ ವರ್ಗ ಹೆಚ್ಚಿ ಆರ್ಥಿಕತೆ ಸೇರಿ ಹಲವು ರಂಗಗಳು ಪುನಶ್ಚೇತನ ಕಂಡುಕೊಳ್ಳಲು ಸಾಧ್ಯ. ಹಾಗೆಯೇ, ಹಿರಿಯ ನಾಗರೀಕರ ಸಾಮಾಜಿಕ ಭದ್ರತೆ ಬಗ್ಗೆಯೂ ಚಿಂತನೆ ನಡೆಸಬೇಕಿದೆ. ವಿಶ್ವಸಂಸ್ಥೆಯ ವರದಿ ಜನಸಂಖ್ಯೆಗೆ

ಸಂಬಂಧಿಸಿ ಹಲವು ಮಹತ್ವದ ಸಂಗತಿಗಳನ್ನು ಅನಾವರಣಗೊಳಿಸಿದ್ದು, ಇದನ್ನು ಸಂಪೂರ್ಣವಾಗಿ ಅವಲೋಕಿಸಿ ಭವಿಷ್ಯದಲ್ಲಿ ಸಾಗಬೇಕಾದ ದಾರಿಯ ಬಗ್ಗೆ ನೀಲಿನಕ್ಷೆ ರೂಪಿಸಬೇಕಿದೆ. ನೈಸರ್ಗಿಕ ಸಂಪನ್ಮೂಲಗಳ ಬರಿದಾಗುವಿಕೆಯನ್ನು ತಡೆಯಬೇಕಿದೆ. ಅಂದಾಗಲೇ ಮುಂದಿನ ಪೀಳಿಗೆಗಳು ನೆಮ್ಮದಿಯ ಬದುಕನ್ನು ಕಂಡುಕೊಳ್ಳಲು ಸಾಧ್ಯ.

**ಲತಾ ಮಾಕನೂರ**
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

## ಭೈರಪ್ಪನವರ ಬಾಲ್ಯದಲ್ಲಿನ ಪ್ರಾಮಾಣಿಕತೆ

ಖ್ಯಾತಕಾದಂಬರಿಕಾರ ಎಸ್. ಎಲ್ ಭೈರಪ್ಪನವರ ಬಾಲ್ಯದಲ್ಲಿ ನಡೆದ ಒಂದು ಘಟನೆ. ಬಾಲ್ಯದಲ್ಲಿ ಬಡತನದ ಬದುಕು ಅವರದ್ದಾಗಿತ್ತು. ಒಂದು ಬಾರಿ ಪರೀಕ್ಷೆಗೆ ಶುಲ್ಕ ಕಟ್ಟಲು ಹಣವಿರಲಿಲ್ಲ. ಪರಿಚಯವಿದ್ದ ನ್ಯಾಯಾಧೀಶರ ಬಳಿಗೆ ಹೋಗಿ ಸಹಾಯ ಯಾಚಿಸಿದರು. ಅವರು ಸಾಲವಾಗಿ ಐವತ್ತು ರೂಪಾಯಿಯ ಚೆಕ್ ನೀಡಿದರು.

ಭೈರಪ್ಪನವರು ಬ್ಯಾಂಕಿಗೆ ಹೋಗಿ ಹಣ ಪಡೆಯಲು ಚೆಕ್ ನೀಡಿದಾಗ ಕ್ಯಾಶಿಯರ್ ೧೦ ರೂಪಾಯಿಗಳ ೫ ನೋಟುಗಳನ್ನು ನೀಡುವ ಬದಲು ೧೦೦ ರೂಪಾಯಿಗಳ ೫ ನೋಟುಗಳನ್ನು ನೀಡಿದರು. ಭೈರಪ್ಪನವರು  ಹಿಂತಿರುಗಿಕೊಡಲು ಹೋದಾಗ ಎಲ್ಲ ಸರಿಯಿದೆ ಹೋಗಯ್ಯ ಎಂದು ಕ್ಯಾಶಿಯರ್ ನಿರ್ಲಕ್ಷ್ಯದಿಂದ ಉತ್ತರಿಸಿದರು. ಆದರೂ ಭೈರಪ್ಪನವರು ಬ್ಯಾಂಕಿನ ಮ್ಯಾನೆಜರ್ ಬಳಿಗೆ ಹೋಗಿ ಹೆಚ್ಚಿನ ಹಣ ಹಿಂತಿರುಗಿಸಿದರು.

ಆ ದಿನ ಸಂಜೆ ಬ್ಯಾಂಕಿನ ಮ್ಯಾನೇಜರ್ ೫೦ ರೂಪಾಯಿ ಚೆಕ್ ಕೊಟ್ಟಿದ್ದ ನ್ಯಾಯಾಧೀಶರ ಮನೆಗೆ ಹೋದರು. ಎಲ್ಲಾ ವಿಷಯವನ್ನು ತಿಳಿಸಿ ಬಾಲಕನ ಪ್ರಾಮಾಣಿಕತನ ಮೆಚ್ಚಿ ಆತನಿಗೆ ಹಣದ ರೂಪದ ಬಹುಮಾನ ಕೊಡಲು ಬಂದಿದ್ದೇವೆ. ಆತನನ್ನು ಕರೆಸುತ್ತೀರಾ? ಎಂದರು. ನ್ಯಾಯಾಧೀಶರು ಪ್ರಾಮಾಣಿಕತನಕ್ಕೆ ಬಹುಮಾನ ನೀಡಿದರೆ ಆ ಪ್ರಾಮಾಣಿಕತನಕ್ಕೆ ಬೆಲೆ ಇಲ್ಲವಾಗುತ್ತೆ. ಎಂದು ಹೇಳಿ ಬ್ಯಾಂಕಿನ ಮ್ಯಾನೇಜರನ್ನು ಕಳುಹಿಸಿಕೊಟ್ಟರು.

ಅನಂತರ ನ್ಯಾಯಾಧೀಶರು ಬಾಲಕ ಭೈರಪ್ಪನನ್ನು  ಮನೆಗೆ ಕರೆಯಿಸಿ ತಲೆ ನೇವರಿಸಿ ನೋಡಪ್ಪಾ! ನೀನು ಮುಂದೆ ಜೀವನದಲ್ಲಿ ದೊಡ್ಡ ವ್ಯಕ್ತಿ ಆಗುವಿ ಎಂದು ಹಾರೈಸಿ ಕಳುಹಿಸಿದರು. ಭೈರಪ್ಪನವರ ಈ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಿದೆ.

**ಮಹಮದ್‌ಸಾಬ್**
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ವರನಟ ಡಾ. ರಾಜ್‌ಕುಮಾರ್‌ರವರ ನಟನೆಯೊಂದಿಗೆ ಮಾಡಿದ ಇತರ ಸಾಧನೆಗಳು

ಡಾ. ರಾಜ್‌ಕುಮಾರ್ ಹೆಸರಾಂತ ಚಲನಚಿತ್ರ ನಟರು. ಕರ್ನಾಟಕದ ಅತ್ಯಂತ ಜನಪ್ರಿಯ ವ್ಯಕ್ತಿಗಳಲ್ಲಿ ಪ್ರಮುಖರು. ಕೇವಲ ನಟರಾಗಿ ಮಾತ್ರವಲ್ಲದೇ ಹಿನ್ನೆಲೆ ಗಾಯಕರಾಗಿ, ಕನ್ನಡಪರ ಚಳುವಳಿಗಳಲ್ಲಿ ಭಾಗವಹಿಸಿ ಮೇರು ವ್ಯಕ್ತಿತ್ವದೊಂದಿಗೆ ಅನೇಕ ಬಿರುದಾವಳಿಗಳೊಂದಿಗೆ ಹೆಸರು ಮಾಡಿದ್ದಾರೆ.

**ಗಾಯಕರಾಗಿ ಡಾ. ರಾಜ್‌ಕುಮಾರ್ :**

ಕೇವಲ ನಟನೆಯಲ್ಲದೆ, ಅತ್ಯುತ್ತಮ ಗಾಯಕರೂ ಆಗಿದ್ದ ರಾಜ್ ಕನ್ನಡ ಗಾನಲೋಕಕ್ಕೂ ತಮ್ಮ ಅಪಾರ ಸೇವೆ ಸಲ್ಲಿಸಿದ್ದಾರೆ. 1974ರಲ್ಲಿ ಬಿಡುಗಡೆಯಾದ ಸಂಪತ್ತಿಗೆ ಸವಾಲ್ ಚಿತ್ರದ ಯಾರೇ ಕೂಗಾಡಲಿ, ಊರೇ ಹೋರಾಡಲಿ ಎಂಬ ಹಾಡಿನಿಂದ ಅವರು ಪೂರ್ಣ ಪ್ರಮಾಣದ ಗಾಯಕರಾಗಿ ಹೊರ ಹೊಮ್ಮಿದರು. ಇದಕ್ಕೂ ಮುಂಚೆ 1956ರಲ್ಲೇ ಓಹಿಲೇಶ್ವರ ಚಿತ್ರದಲ್ಲಿ "ಶರಣು ಶಂಭೋ" ಎಂಬ ಗೀತೆಯೊಂದನ್ನು ಹಾಗೂ ಮಹಿಷಾಸುರ ಮರ್ಧಿನಿ ಚಿತ್ರದಲ್ಲಿ ಎಸ್. ಜಾನಕಿಯವರೊಡನೆ "ತುಂಬಿತು ಮನವ ತಂದಿತು ಸುಖವ" ಎಂಬ ಯುಗಳ ಗೀತೆಯನ್ನು ಹಾಡಿದ್ದರು. ಈ ಮೂರು ಚಿತ್ರಗಳು ಜಿ.ಕೆ.ವೆಂಕಟೇಶ್ ಅವರ ಸಂಗೀತ ನಿರ್ದೇಶನವನ್ನು ಹೊಂದಿದ್ದವು.

ಜಿ.ಕೆ.ವೆಂಕಟೇಶ್ ಹಾಗೂ ಉಪೇಂದ್ರಕುಮಾರ್ ಸಂಗೀತದಲ್ಲಿ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. 1962ರಲ್ಲಿ, ದೇವಸುಂದರಿ ಚಿತ್ರದಲ್ಲಿ ಹಾಸ್ಯರತ್ನ ನರಸಿಂಹರಾಜು ಅವರ ಪಾತ್ರಕ್ಕೆ ಯುಗಳ ಗೀತೆಯೊಂದನ್ನೂ ಹಾಡಿದ್ದಾರೆ. ಡಾ. ರಾಜ್ ಅವರು ಬೇರೊಬ್ಬರ ಅಭಿನಯಕ್ಕೆ ಹಿನ್ನೆಲೆ ಗಾಯನ ಮಾಡಿದ ಮೊದಲ ಚಿತ್ರಗೀತೆಯಿದು. 1964ರಲ್ಲಿ ನವಕೋಟಿನಾರಾಯಣ (ಭಕ್ತ ಪುರಂದರದಾಸ) ಚಲನಚಿತ್ರದಲ್ಲಿ ಕೆಲವು ಕೀರ್ತನೆಗಳನ್ನು ಹಾಡಿದ್ದಾರೆ.

ಜೀವನ ಚೈತ್ರ ಚಿತ್ರದಲ್ಲಿನ ನಾದಮಯ ಈ ಲೋಕವೆಲ್ಲಾ ಹಾಡಿನ ಗಾಯನಕ್ಕೆ ರಾಷ್ಟ್ರ ಪ್ರಶಸ್ತಿಯನ್ನು ಪಡೆದರು. 2003ರಲ್ಲಿ ಬಿಡುಗಡೆಯಾದ 'ಅಭಿ' ಚಿತ್ರದ "ವಿಧಿ ಬರಹ ಎಂಥ ಘೋರ" ಹಾಗೂ ಅದೇ ವರ್ಷದ ಚಿಗುರಿದ ಕನಸು ಚಿತ್ರದ "ಬಂಧುವೇ ಓ ಬಂಧುವೇ" ಇವರು ಹಾಡಿದ ಇತ್ತೀಚಿನ ಚಿತ್ರಗೀತೆಗಳಾಗಿರುತ್ತವೆ.

ಚಿತ್ರಗೀತೆಗಳಷ್ಟೇ ಅಲ್ಲದೆ ಹಲವಾರು ಭಕ್ತಿಗೀತೆಗಳನ್ನು ಹಾಡಿದರು. ಕನ್ನಡವೇ ಸತ್ಯ, ಅನುರಾಗ, ಮಂಕುತಿಮ್ಮನ ಕಗ್ಗ – ರಾಜ್ ಕಂಠದಲ್ಲಿ ಮೂಡಿ ಬಂದ ಭಾವಗೀತೆ ಸಂಕಲನಗಳು.

ಹುಟ್ಟಿದ್ರೆ ಕನ್ನಡನಾಡ್ನಲ್ ಹುಟ್ಟಬೇಕು, ಮೆಟ್ಟಿದರೆ ಕನ್ನಡ ಮಣ್ಣನ್ ಮೆಟ್ಟಬೇಕು ಗೀತೆಯನ್ನು ಸಾಮಾನ್ಯವಾಗಿ ಹೋದೆಡೆಯಲ್ಲೆಲ್ಲಾ ಹಾಡುತ್ತಿದ್ದರು. ತಮ್ಮ 'ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರ', ವನ್ನು ದೆಹಲಿಯಲ್ಲಿ ಪಡೆದ ಬಳಿಕ, ಮುಂಬಯಿಗೆ ಭೇಟಿಕೊಟ್ಟಾಗ, 'ಕರ್ನಾಟಕ ಸಂಘ' ದ ರಂಗಮಂಚದ

ಮೇಲೆ, ಮೇಲಿನ ಗೀತೆಯನ್ನು ಅವರ ಮಕ್ಕಳ ಸಮೇತ ಕುಣಿದು–ಕುಪ್ಪಳಿಸಿ ಹಾಡಿದ ಸಡಗರ ಇನ್ನೂ ಮುಂಬಯಿ ನಗರದ, ಕನ್ನಡ ರಸಿಕರ ಮನದಲ್ಲಿ ಹಸಿರಾಗಿ ಉಳಿದಿದೆ.

ರಾಷ್ಟ್ರಕವಿ ಕುವೆಂಪು ರಚಿಸಿದ 'ಕನ್ನಡವೇ ಸತ್ಯ' ಹಾಡನ್ನು ಡಾ. ರಾಜಕುಮಾರ್ ಭಾವಗೀತೆಯ ಮೇರು ಕಲಾವಿದ ಡಾ. ಸಿ. ಅಶ್ವತ್ಥ್ ಅವರ ಸಂಗೀತ ನಿರ್ದೇಶನದಲ್ಲಿ ಹಾಡಿದ್ದಾರೆ. ಇದು ಮೈಸೂರು ಅನಂತಸ್ವಾಮಿಯವರ ಆವೃತ್ತಿಗಿಂತಲೂ ಭಾರೀ ಜನಪ್ರಿಯತೆ ಗಳಿಸಿತು.

**ಕನ್ನಡಪರ ಚಳುವಳಿಗಳಲ್ಲಿ ಡಾ. ರಾಜ್‌ಕುಮಾರ್ :**

ಗೋಕಾಕ್ ವರದಿಯು ಕನ್ನಡವನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಕನ್ನಡ ಭಾಷೆಗೆ ಕೊಡುವುದರ ಬಗ್ಗೆ ಸಿದ್ಧವಾಗಿತ್ತು. ಆದರೆ ಈ ವರದಿಯು ಜಾರಿಗೆ ಬಂದಿರಲಿಲ್ಲ. 1981ರಲ್ಲಿ ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ್ ಮುಂತಾದ ಸಾಹಿತಿಗಳು, ಕನ್ನಡ ವಿದ್ಯಾರ್ಥಿಗಳು, ಹಲವು ಸಂಘಸಂಸ್ಥೆಗಳು ಗೋಕಾಕ್ ವರದಿಯನ್ನು ಜಾರಿಗೊಳಿಸುವಂತೆ ಚಳುವಳಿಯನ್ನು ಪ್ರಾರಂಭ ಮಾಡಿದರು. ಇದೇ ಚಳುವಳಿಯು ಗೋಕಾಕ್ ಚಳುವಳಿ ಎಂದೇ ಹೆಸರಾಯಿತು.

ಚಳುವಳಿಯು ಪ್ರಾರಂಭಗೊಂಡು ಹಲವಾರು ದಿನಗಳು ಕಳೆದರೂ, ಜನಸಾಮಾನ್ಯರಿಂದ ಉತ್ಸಾಹದ ಪ್ರತಿಕ್ರಿಯೆ ಕಂಡುಬರಲಿಲ್ಲ. ಈ ಸಮಯದಲ್ಲಿ, ಡಾ. ರಾಜ್ ಅವರನ್ನು ಚಳುವಳಿಗೆ ಆಹ್ವಾನಿಸಿ, ಚಳುವಳಿಯ ಬಲವರ್ಧನೆ ಮಾಡಬೇಕೆಂದು ಕೋರಲಾಯಿತು. ಡಾ. ರಾಜ್ ನೇತೃತ್ವದಲ್ಲಿ ಕನ್ನಡ ಚಿತ್ರರಂಗ, ಗೋಕಾಕ್ ಚಳುವಳಿಗೆ ಸಂಪೂರ್ಣ ಸಹಕಾರ ನೀಡಲು ಪ್ರಕಟಿಸಿ, ರಾಜ್ಯಾದ್ಯಂತ ಪ್ರವಾಸ ಕೈಗೊಂಡಿತು.

ಹಲವಾರು ಸಭೆಗಳು, ಭಾಷಣಗಳು ಕರ್ನಾಟಕದ ಪ್ರಮುಖ ನಗರಗಳಲ್ಲಿ ಜರುಗಿದವು. ಕರ್ನಾಟಕದ ಜನತೆ ಚಳುವಳಿಗೆ ಹಿಂದೆಂದಿಗಿಂತಲೂ ಹೆಚ್ಚಿನ ಉತ್ಸಾಹದಿಂದ ಪ್ರತಿಕ್ರಿಯಿಸಿದರು, ಭಾಗವಹಿಸಿದರು. ಕನ್ನಡದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು, ಅಭಿಮಾನ ಬೆಳೆಸಲು, ಕನ್ನಡ ಭಾಷೆಗೆ ಸಿಗಬೇಕಾದ ಹಕ್ಕುಗಳು, ಸೌಲಭ್ಯಗಳನ್ನು ಆಗಿನ ಕರ್ನಾಟಕ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಲು, ಡಾ. ರಾಜ್ ಅವರ ಭಾಷಣಗಳು ಹಾಗೂ ಚಳುವಳಿಯ ನೇತೃತ್ವ ಸಹಾಯಕಾರಿಯಾದವು. ಗುಂಡೂರಾವ್ ನೇತೃತ್ವದ ಆಗಿನ ಕರ್ನಾಟಕ ಸರ್ಕಾರವು ಚಳುವಳಿಯ ತೀವ್ರತೆಗೆ ಸ್ಪಂದಿಸಿ, ಗೋಕಾಕ್ ವರದಿಯನ್ನು ಜಾರಿಗೊಳಿಸಿತು.

**ಡಾ. ರಾಜ್‌ಕುಮಾರ್‌ರವರಿಗೆ ಸಂದ ಪ್ರಶಸ್ತಿ, ಪುರಸ್ಕಾರಗಳು ಮತ್ತು ಬಿರುದುಗಳು :**

**ಪ್ರಶಸ್ತಿಗಳು**

1. ಪದ್ಮಭೂಷಣ (ಭಾರತ ಸರ್ಕಾರದಿಂದ)
2. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ (1995ರಲ್ಲಿ ಭಾರತ ಸರ್ಕಾರದಿಂದ)
3. ಕರ್ನಾಟಕ ರತ್ನ (ಕರ್ನಾಟಕ ಸರ್ಕಾರ)

4. ರಾಷ್ಟ್ರಪ್ರಶಸ್ತಿ (ಜೀವನ ಚೈತ್ರ ಚಿತ್ರದಲ್ಲಿನ 'ನಾದಮಯ ಈ ಲೋಕವೆಲ್ಲಾ' ಹಾಡಿನ ಗಾಯನಕ್ಕೆ)
5. ಅತ್ಯುತ್ತಮ ನಟ ಫಿಲ್ಮ್‌ಫೇರ್ ಪ್ರಶಸ್ತಿ (ಹತ್ತು ಬಾರಿ)
6. ಅತ್ಯುತ್ತಮ ನಟ ರಾಜ್ಯಪ್ರಶಸ್ತಿ (ಒಂಬತ್ತು ಬಾರಿ)
7. ಕೆಂಟಕಿ ಕರ್ನಲ್ (ಅಮೆರಿಕದ ಕೆಂಟಕಿ ರಾಜ್ಯದ ಗವರ್ನರ್ 1985ರಲ್ಲಿ ಬೆಂಗಳೂರಲ್ಲಿ ನೀಡಿದರು)
8. ನಾಡೋಜ ಪ್ರಶಸ್ತಿ (ಕನ್ನಡ ವಿಶ್ವವಿದ್ಯಾಲಯ, ಹಂಪಿ)
9. ಗುಬ್ಬಿ ವೀರಣ್ಣ ಪ್ರಶಸ್ತಿ (ಕರ್ನಾಟಕ ಸರ್ಕಾರ)
10. ಕಲಾ ಕೌಸ್ತುಭ (ವೃತ್ತಿ ರಂಗಭೂಮಿಗೆ ಸಲ್ಲಿಸಿದ ಸೇವೆಗೆ, ಕರ್ನಾಟಕ ಸರ್ಕಾರದಿಂದ)

**ಪದವಿಗಳು**

1. ಗೌರವ ಡಾಕ್ಟರೇಟ್(ಮೈಸೂರು ವಿಶ್ವವಿದ್ಯಾಲಯದಿಂದ)

**ಬಿರುದುಗಳು**

1. ನಟಸಾರ್ವಭೌಮ (100ನೆಯ ಚಿತ್ರದ ಸಂದರ್ಭದಲ್ಲಿ)
2. ಗಾನಗಂಧರ್ವ (ಅಭಿಮಾನಿ ಸಂಘಗಳಿಂದ)
3. ವರನಟ (ಪತ್ರಕರ್ತರು, ಅಭಿಮಾನಿಗಳು)
4. ಅಣ್ಣಾವ್ರು (ಅಭಿಮಾನಿಗಳಿಂದ)
5. ರಸಿಕರ ರಾಜ (ಅಭಿಮಾನಿಗಳಿಂದ)
6. ಕನ್ನಡದ ಕಣ್ಮಣಿ (ಅಭಿಮಾನಿಗಳಿಂದ)
7. ಮೇರು ನಟ (ಅಭಿಮಾನಿಗಳಿಂದ)

**ಶಿವಕುಮಾರ ಎಂ.**
ಚತುರ್ಥ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ಅನುಭವ ಎನ್ನುವುದು ಗುರುವಿಗೂ ಗುರುವಿದ್ದಂತೆ

ಜೀವನದಲ್ಲಿ ನಾವು ಏನಾದರೊಂದು ವಿಷಯವನ್ನು ಸದಾ ಕಲಿಯುತ್ತಲೇ ಇರುತ್ತೇವೆ ಹಾಗೂ ಇತರರಿಗೆ ಕಲಿಸುತ್ತಲೂ ಇರುತ್ತೇವೆ. ಇದೊಂದು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ನಡೆಯುತ್ತಿರುವ ನಿರಂತರವಾದ ಒಂದು ಪ್ರಕ್ರಿಯೆ. ಕಲಿಯಲು, ವೃತ್ತಿ ವಯಸ್ಸುಗಳ, ಅಧಿಕಾರ ಅಂತಸ್ತುಗಳ, ಸಂದರ್ಭ – ಸನ್ನವೇಶಗಳ ನಿರ್ಭಂಧಗಳಿಲ್ಲ. ಸಮಯದ ಇತಿಮಿತಿ ಇಲ್ಲ. ಒಟ್ಟಿನಲ್ಲಿ ಕಲಿತುಕೊಳ್ಳಬೇಕೆನ್ನುವ ಬಿಚ್ಚು ಮನಸ್ಸು, ವಿಶಾಲ ಹೃದಯ ಹಾಗೂ ಜಾಣತನ ಇರಬೇಕು, ಅಷ್ಟೇ. ಒಂದು ಮಗು, ತನ್ನ ಅಮ್ಮನಿಂದ ಸಾಕಷ್ಟು ವಿಷಯಗಳನ್ನು ಕಲಿತು ಕೊಂಡಿರುತ್ತಾಳೆ. ಓರ್ವ ರೋಗಿ ತನ್ನ ವೈದ್ಯನಿಂದ ಸೂಕ್ತ ಸಲಹೆ. ಸೂಚನೆಗಳನ್ನು ಪಡೆದಿರುತ್ತಾನೆ. ಆದರೆ ಸಮರ್ಥ ವೈದ್ಯ ತಾನು ನೀಡಿದ ಚಿಕಿತ್ಸೆಗೆ ರೋಗಿ ಸ್ಪಂದಿಸಿದ ರೀತಿಯಿಂದಲೂ, ಪಠ್ಯಪುಸ್ತಕದಲ್ಲಿ ಇಲ್ಲದ ಅನೇಕ ವಿಷಯಗಳನ್ನು ಕಲಿತುಕೊಂಡಿರುತ್ತಾನೆ. ಅಂತೆಯೇ, ಒಬ್ಬ ಶಿಕ್ಷಕನಿಂದ ವಿದ್ಯಾರ್ಥಿಗಳು ಪಾಠಗಳನ್ನು ಕಲಿಯುತ್ತಿರುತ್ತಾರೆ. ಆದರೆ ಬುದ್ದಿವಂತ ಗುರು ತನ್ನ ಶಿಷ್ಯರಿಂದಲೂ ತುಂಬಾ ವಿಚಾರಗಳನ್ನು ಕಲಿತುಕೊಂಡಿರುತ್ತಾನೆ. ಇದುವೇ 'ಅನುಭವ'ವೆಂದೆನಿಸುತ್ತದೆ.

ಜೀವನದಲ್ಲಿ ಕಲಿಯುವ ಮೂಲಗಳು ಎರಡು. ಅವುಗಳೆಂದರೆ ಒಂದು ಬಲ್ಲವರಿಂದ, ಇನ್ನೊಂದು ವೈಯುಕ್ತಿಕವಾಗಿ ಗಳಿಸಿದ ಸ್ವಾನುಭವದಿಂದ, ಬಲ್ಲವರಿಂದ ಕಲಿಯುವ ವಿಧಾನದಲ್ಲಿ ನಮಗಿಂತ ಹೆಚ್ಚು

ತಿಳಿದಿರುವ ಓರ್ವ ಗುರುವಿರುತ್ತಾನೆ. ಆದರೆ, ಯಾವುದೇ ಗುರುವಿನ ಸಹಾಯವಿಲ್ಲದೆ, ನಮಗೆ ನಾವೇ ಕಲಿತುಕೊಂಡರೆ, ಅದು ಸ್ವಾನುಭವವೆಂದೆನಿಸುತ್ತದೆ. ಇವೆರಡರ ಪೈಕಿ ಗುರುವಿಗೂ ಗುರುವಿನಂತಿರೋದು 'ಅನುಭವ'ವೆಂಬ ದೊಡ್ಡ ಗುರು. ಏಕೆಂದರೆ "ಎಂಬ ಮಾತಿನಂತೆ, ಸಾಮಾನ್ಯವಾಗಿ ಗುರುಗಳಾದವರು ಪಾಠಗಳನ್ನು ಒಡ್ಡಿ  ತದನಂತರವೇ ಮರೆಯಲಾರದ ಪಾಠಗಳನ್ನು ಎಂದಿಗೂ ಮರೆಯಲಾರರು. ಏಕೆಂದರೆ, ಅದರ ಹಿಂದೆ ಮರೆಯಲಾರದ ಪಾಠಗಳಿವೆ, ಘಟನೆಗಳಿವೆ. ಅನುಭವಗಳ ಹಿಂದೆ, ಬರೀ ಗೆಲವುಗಳೇ ಇರಬೇಕೆಂದಿಲ್ಲ. ಸೋಲುಗಳೂ ಇರಬಹುದು. ಸಿಹಿ ನೆನಪುಗಳು ಮಾತ್ರವಲ್ಲ ಕಹಿ ನೆನಪುಗಳೂ ಇರಬಹುದು. ಎಲ್ಲವೂ..... ಹಿತಕರವಾದ ವಿಷಯಗಳೇ ಆಗಿರಬೇಕೆಂದಿಲ್ಲ. ಅಹಿತಕರ ಘಟನೆಗಳೂ ನಡೆದು ಹೋಗಿರಬಹುದು. ಹಾಗೇ ನೋಡಿದರೆ, ಸೋಲುಗಳಿಂದ, ನೋವುಗಳಿಂದ ಕಲಿತ ಪಾಠ. ಗೆಲುವಿನಿಂದ ಕಲಿತ ಪಾಠಕ್ಕಿಂತ ಅಮೂಲ್ಯವಾದುದು. ಒಟ್ಟಿನಲ್ಲಿ ಅನುಭವಗಳೆಂದರೆ, ಅನಿರೀಕ್ಷಿತವಾಗಿ ಒದಗಿ ಬಂದ ಸನ್ನಿವೇಶಗಳಿಗೆ, ಸಂದರ್ಭಗಳಿಗೆ ಸ್ಪಂದಿಸಿ ಕಲಿತ ಶಾಶ್ವತ ಪಾಠಗಳು ; ನೆನಪುಗಳ ಬುತ್ತಿಗಳು. ಈ ಮಾತನ್ನು ಪುಷ್ಟೀಕರಿಸುವಂತೆ ಪ್ರಸಿದ್ಧ ಲೇಖಕ ಹಾಗೂ ಇತಿಹಾಸಕಾರನಾದ ಥಾಮಸ್ ಕಾರ್ಲೈಲ್ ಬರೆಯುತ್ತಾನೆ. 'ಅನುಭವವೇ ಅತ್ಯುತ್ತಮ ಶಿಕ್ಷಕ, ಆದರೆ, ಶಾಲಾ ಶುಲ್ಕ ಮಾತ್ರ ಅತ್ಯಂತ ದುಬಾರಿ' ಎಂಬುದಾಗಿದೆ.

ಯಾವುದೇ ಅಮೂಲ್ಯವಾದ ಅನುಭವಗಳಿಸಬೇಕಾದರೆ, ಮನುಷ್ಯ ಅದಕ್ಕಾಗಿ ದೀರ್ಘಕಾಲ ಶ್ರಮಿಸಬೇಕಾಗುತ್ತದೆ. ವರ್ಷಗಳನ್ನೇ ವ್ಯಯಿಸಬೇಕಾಗುತ್ತದೆ. ಅನೇಕ ಬಾರಿ ಜಾರಿ, ಕುಸಿದು ಬಿದ್ದು, ಮತ್ತೆ ಮೇಲೆದ್ದು ಪ್ರಯತ್ನಿಸಿದರೆ ಮಾತ್ರ ಉನ್ನತವಾದ ಗಿರಿಶಿಖರವನ್ನು ಏರಲು ಸಾಧ್ಯವಲ್ಲವೇ? ಅಂತೆಯೇ, ಅನೇಕ ಸಲ ಮುಳುಗಿ ಕೈ ಕಾಲು ಬಡಿದು, ನೀರು ಕುಡಿದು, ಮತ್ತೆ ಅವು ಮರುಕಳಿಸಿದಂತೆ ಈಜಿದರೆ ಮಾತ್ರ ಹೊಳೆಯನ್ನೋ ನದಿಯನ್ನೋ ದಾಟಬಹುದಲ್ಲವೇ? ಅದೇ ರೀತಿ, ಓದಿ ಬರೆದು, ಹರಿದು, ತಿದ್ದಿ, ತೀಡಿ, ತಪ್ಪುಗಳನ್ನು ಸರಿಪಡಿಸುತ್ತಾ ಮತ್ತೆ ಮತ್ತೆ ರಚಿಸಿದಾಗ ಮಾತ್ರ ಒಳ್ಳೆಯ ಕೃತಿಯ ರಚನೆಯಾದೀತಲ್ಲವೇ? ಅನುಭವದಿಂದ ಆಗುವ ಲಾಭ ಇದೆ.

ಮನುಷ್ಯ ಎಷ್ಟೇ ಬುದ್ಧಿವಂತನಾದರೂ, ವಿವೇಕಿಯಾಗಿದ್ದರೂ, ಜೀವನದಲ್ಲಿ ಒಂದಲ್ಲ ಒಂದು ರೀತಿಯ ತಪ್ಪುಗಳನ್ನು ಮಾಡದಿರೋಲ್ಲ. ತಪ್ಪುಗಳನ್ನು ಮಾಡದಿರೋಲ್ಲ. ತಪ್ಪುಗಳು ಪುನರಾವರ್ತನೆ ಆಗದಂತೆ ತಡೆಹಿಡಿಯುವಲ್ಲಿ ಹಾಗೂ ಸರಿದಾರಿಯಲ್ಲಿ ನಡೆಸುವಲ್ಲಿ ಅನುಭವಗಳು ನೆರವಾಗುತ್ತವೆ. ಅನುಭವಗಳು, ನವೀನ ಸಾಹಸಗಳಿಗೆ ಮುನ್ನುಡಿಯನ್ನೂ ಬರೆಯಬಹುದು. ನಿಜ ಜೀವನದಲ್ಲಿ ವ್ಯಕ್ತಿ ತಾನು ಎಷ್ಟೇ ಎತ್ತರಕ್ಕೇರಿದರೂ, ಸಮರ್ಥ, ಪರಿಣತನೆಂದುಕೊಂಡರೂ, ಹೆಜ್ಜೆ ಹೆಜ್ಜೆಗೂ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಕಲಿಯುತ್ತಲೇ ಇರಬೇಕಾಗುತ್ತದೆ. ಆಗ ಅನುಭವಗಳು ನೆರವಾಗುತ್ತವೆ. ಆದರೆ ಎಷ್ಟೋ ಬಾರಿ, ಅನುಭವ ಒಂದು ಪಾಠವಾಗಿ ತಮ್ಮ ಅರಿವಿಗೆ, ನೆರವಿಗೆ ಬಂದಾಗ ತಡವಾಗಿರುತ್ತದೆ.

ಕಾಲ ಮಿಂಚಿ ಹೋಗಿರುತ್ತೆ. ಈ ಅರ್ಥದಲ್ಲೇ ಅನುಭವವೆಂದರೆ, 'ತುಂಬಾ ತಡವಾಗಿ ಗಳಿಸಿದ ತಿಳಿವಳಿಕೆ' ಎಂಬುದಾಗಿಯೂ ವಿದ್ವಾಂಸರಿಂದ ವ್ಯಾಖ್ಯಾನಿಸಲಾಗಿದೆ.

"ಅನುಭವವಿಲ್ಲದೆ ಪಡೆದ ವಿದ್ಯೆಗಿಂತಲೂ, ವಿದ್ಯೆಯಿಲ್ಲದೆ ಪಡೆದ ಅನುಭವವೇ ಲೇಸು" ಎಂಬುದು ಅಮೇರಿಕದಲ್ಲಿ ಪ್ರಚಾರದಲ್ಲಿರುವ ಒಂದು ಗಾದೆ. ಔಪಚಾರಿಕವಾದ ಶಿಕ್ಷಣವು ಮನುಷ್ಯನಿಗೆ ಒಂದಷ್ಟು ಮಾಹಿತಿಯನ್ನಷ್ಟೇ ಒದಗಿಸಬಹುದು ಹಾಗೂ ಅವನ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಬಹುದು. ಆದರೆ, ಪ್ರಾಯೋಗಿಕವಾಗಿ ಏನನ್ನೇ ಮಾಡಬೇಕಾದರೂ, ಅನುಭವ ಬೇಕೇ ಬೇಕು. ನಿರಕ್ಷರಕುಕ್ಷಿಗಳು ಕೂಡಾ ತಾವು ಗಳಿಸಿದ ಅನುಭವದಿಂದಾಗಿ, ವಿದ್ಯಾವಂತರು ಮಾಡಲಾಗದ ಕೆಲಸಗಳನ್ನು ಸ್ವತಂತ್ರವಾಗಿ ಸಮರ್ಪಕವಾಗಿ ಮಾಡುತ್ತಿಲ್ಲವೇ? ಕೇವಲ ಅನುಭವದ ಆಧಾರದ ಮೇಲೆ, ಈ ಜಗತ್ತಿನಲ್ಲಿ ನಡೆಯುತ್ತಿರುವ ಕೆಲಸಗಳಿಗೆ ಎಣೆಯುಂಟೆ? ಕೊನೆಯುಂಟೆ? ಬೆಲೆ ಕಟ್ಟಲಾದೀತೇ? ಪಶುಪಕ್ಷಿಗಳ ಜೀವನದಲ್ಲಿ ಕೂಡಾ ಅನುಭವವೇ ಕೆಲಸ ಮಾಡುತ್ತಿರುತ್ತದೆ ಎಂಬುದನ್ನು ಬೇರೇ ಹೇಳಬೇಕಾಗಿಲ್ಲ. 'ವಿಶ್ವವಿದ್ಯಾಲಯಗಳ ಪರೀಕ್ಷೆಗಳನ್ನು ಪಾಸು ಮಾಡಿಕೊಳ್ಳಲು ಅನುಸರಿಸಬೇಕಾದ ಪಠ್ಯಕ್ರಮವೇ ಬೇರೇ. ಜೀವನವೆಂಬ ಪರೀಕ್ಷೆಯನ್ನು ಪಾಸು ಮಾಡಲು ತಿಳಿದಿರಬೇಕಾದ ಪಠ್ಯಕ್ರಮವೇ ಬೇರೆ. ಎಂಬ ಮಾತಿನಲ್ಲಿ ಎಷ್ಟೊಂದು ಅರ್ಥವಿದೆ! ಅನುಭವಗಳೇ ಜೀವನವನ್ನು ಎದುರಿಸಲು, ಜೀವನವೆಂಬ ಪರೀಕ್ಷೆಯನ್ನು ಪಾಸು ಮಾಡಲು ನೆರವಾಗುವ ಒಂದೊಂದು ಗುರುಗಳು. ಒಳ್ಳೆಯ ಮಾನವರಾಗಿ ಉತ್ತಮ ಜೀವನವನ್ನು ನಡೆಸಲು ಔಪಚಾರಿಕ ಶಿಕ್ಷಣವೇ ಬೇಕೆಂದಿಲ್ಲ. ಒಳ್ಳೆಯ ಸಂಸ್ಕಾರ ಮತ್ತು ಅನುಭವಗಳಿದ್ದರೆ ಸಾಕು.

**ನವೀನ್ ಕುಮಾರ ಎನ್.,**
ಚತುರ್ಥ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ಗೋಕಾಕ್ ಚಳುವಳಿ

ಭಾಷಾ ನೀತಿಯಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆಯ ಹಕ್ಕಿಗಾಗಿ 1980ರ ದಶಕದಲ್ಲಿ ನಡೆದ ಒಂದು ಚಳವಳಿ/ಆಂದೋಲನವೇ ಗೋಕಾಕ್ ಚಳವಳಿ ತ್ರಿಭಾಷಾ ಸೂತ್ರದಡಿಯಲ್ಲಿ ಕರ್ನಾಟಕದ ಶಾಲೆಗಳಲ್ಲಿ ಕನ್ನಡವನ್ನು ಮುಖ್ಯ ಭಾಷೆಯನ್ನಾಗಿ ಪರಿಗಣಿಸಬೇಕು ಎನ್ನವಂತಹ ಹಲವಾರು ಬೇಡಿಕೆಗಳನ್ನೊಳಗೊಂಡ ವರದಿಯೊಂದನ್ನು ಕನ್ನಡದ ಕವಿ ವಿ.ಕೃ ಗೋಕಾಕ್‌ರು ಸಿದ್ಧಪಡಿಸಿ ಸಲ್ಲಿಸಿದ್ದರು, ಆದ ಕಾರಣ ಚಳವಳಿಗೆ ಅವರದೇ ಹೆಸರು ಬಂದಿದೆ.

### ಹಿನ್ನೆಲೆ

ಕರ್ನಾಟಕ 1956 ರಿಂದಲೇ ಶಾಲಾ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿತ್ತು. 1967 ರಲ್ಲಿ ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಆಡಳಿತ ಭಾಷೆಗಳನ್ನಾಗಿ ಸಾಂವಿಧಾನಿಕ ತಿದ್ದುಪಡಿ ಮಾಡಿದರು. ಹಿಂದಿ ಪ್ರಾಬಲ್ಯವಿರದಿದ್ದ ಪ್ರದೇಶಗಳಲ್ಲಿ ಹಿಂದಿ

ಭಾಷೆಗೆ ವಿರೋಧ ವ್ಯಕ್ತವಾದ್ದರಿಂದ ಹಿಂದಿಯೊಡನೆ ಇಂಗ್ಲಿಷ್ ಭಾಷೆಯನ್ನೂ ಸೇರಿಸಲಾಯಿತು. ಇದು ಮುಂದುವರೆದು ಶಾಲಾ ಶಿಕ್ಷಣದಲ್ಲಿಯೂ ಇಂಗ್ಲಿಷ್ ಹಾಗು ಹಿಂದಿ ಕಡ್ಡಾಯವೆನ್ನುವಂತಾಯಿತು. ಆದರೆ ಕರ್ನಾಟಕದಲ್ಲಿ ಅಧೀಕೃತ ಭಾಷೆಯೇ ಇರದಿರುವುದು ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಅನುಷ್ಠಾನಕ್ಕೆ ಹಿನ್ನಡೆಯಾಗಲು ಮುಖ್ಯ ಕಾರಣವಾಯಿತು.

ಕನ್ನಡವನ್ನು ಕರ್ನಾಟಕದಲ್ಲಿ ಅಧೀಕೃತ ಭಾಷೆಯಾಗಿಯೂ ಹಾಗು ಆಡಳಿತ ಭಾಷೆಯಾಗಿಯೂ ಘೋಷಿಸದ ಹೊರತು ಶಾಲಾ ಶಿಕ್ಷಣದಲ್ಲಿ ಕನ್ನಡ ಕಡ್ಡಾಯ ಅನುಷ್ಠಾನ ಕಷ್ಟ ಸಾಧ್ಯವೆನ್ನುವುದು ಎಲ್ಲರಿಗೂ ತಿಳಿದ ವಿಚಾರವಾಗಿತ್ತು. ಆದ ಕಾರಣದಿಂದಲೇ ಕರ್ನಾಟಕದಲ್ಲಿ ಎಷ್ಟೋ ಶಾಲೆಗಳು ಕನ್ನಡ ಭಾಷೆಯೇ ಇಲ್ಲದಂತೆ ಸಂಸ್ಕೃತ ಮತ್ತಿತರ ಭಾಷೆಗಳನ್ನು ಕಲಿಸುತ್ತಿದ್ದವು. ಸಾಲದೆಂಬಂತೆ ಆ ಸಮಯದಲ್ಲಿ ಶಾಲಾ ಶಿಕ್ಷಣದಲ್ಲಿ ಸಂಸ್ಕೃತ ಎಲ್ಲ ಭಾಷೆಗಳಿಗಿಂತ ಹೆಚ್ಚಿನ ಬೇಡಿಕೆಯಲ್ಲಿದ್ದ ಭಾಷೆಯಾಗಿತ್ತು. ಎಷ್ಟೋ ಮಕ್ಕಳು ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಸಿಸದೆ ಶಾಲಾ ಶಿಕ್ಷಣವನ್ನು ಮುಗಿಸುತ್ತಿದ್ದರು. ಇವುಗಳಿಗೆಲ್ಲ ಇತಿಶ್ರೀ ಹಾಡಲು ಕನ್ನಡದ ಕವಿ ವಿ.ಕೃ ಗೋಕಾಕ್ ವಿಸ್ತೃತ ವರದಿಯೊಂದನ್ನು ಸಿದ್ಧಪಡಿಸಿದರು. ಈ ವರದಿಯ ಅನುಷ್ಠಾನಕ್ಕಾಗಿ ನಡೆದ ಕನ್ನಡ ನೆಲದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಆ ಚಳವಳಿಯೇ ಗೋಕಾಕ್ ಚಳವಳಿ. ಅತಿ ದೊಡ್ಡ ಮಟ್ಟದಲ್ಲಿ ನಡೆದ ಚಳವಳಿಯನ್ನು ಕನ್ನಡದ ರಾಜಕೀಯ ಪಕ್ಷಗಳು, ಕನ್ನಡ ಭೋದಕ ವರ್ಗದವರು, ವಿದ್ಯಾರ್ಥಿಗಳು, ಕವಿಗಳು, ನಾಟಕಕಾರರು,ಚಿತ್ರರಂಗದ ಗಣ್ಯರು, ವಿಮರ್ಶೆಕಾರರಾದಿಯಾಗಿ ಅನೇಕರು ಪ್ರೋತ್ಸಾಹಿಸಿದರು. ಹಲವಾರು ದಿನಗಳು ನಡೆದ ಬೃಹತ್ ಚಳವಳಿ ಸರ್ಕಾರವನ್ನು ಆಗ್ರಹಿಸುವುದರಲ್ಲಿ ಸಫಲವಾಯಿತು. ಅದರ ಫಲವಾಗಿ ಕರ್ನಾಟಕ ಸರ್ಕಾರ ಜುಲೈ 5, 1980 ರಲ್ಲಿ ಶಾಲಾ ಶಿಕ್ಷಣದ ಭಾಷಾ ನೀತಿ ಮರುಯೋಜನೆಗೆ ಸಮಿತಿಯೊಂದನ್ನು ರಚಿಸಿತು ಹಾಗು ವಿ.ಕೃ ಗೋಕಾಕರನ್ನೇ ಆ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿತು.

ಗೋಕಾಕ್ ವರದಿ ಕನ್ನಡ ಭಾಷೆಗೆ ಕರ್ನಾಟಕದಲ್ಲಿ ಪ್ರಥಮ ಭಾಷಾ ಸ್ಥಾನಮಾನ ಕೊಡುವ ವಿಚಾರಕ್ಕೆ ಕರ್ನಾಟಕ ಸರ್ಕಾರ ಸಮಿತಿಯೊಂದನ್ನು ರಚಿಸಿ ಆ ಸಮಿತಿಗೆ ಕರ್ನಾಟಕ ವಿಶ್ವ ವಿದ್ಯಾಲಯದ ಮಾಜಿ ಕುಲಪತಿಗಳು ಜ್ಞಾನಪೀಠ ಹಾಗು ಪದ್ಮಶ್ರೀ ಪ್ರಶಸ್ತಿ ಪಡೆದ ಹಿರಿಯ ಸಾಹಿತಿಯಾದ ಶ್ರೀ ವಿನಾಯಕ ಕೃಷ್ಣ ಗೋಕಾಕ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸುತ್ತದೆ. ಕನ್ನಡಕ್ಕೆ ಪ್ರಮುಖ ಸ್ಥಾನಮಾನ ಕೊಡುವುದರ ಜೊತೆಗೆ ಇನ್ನಿತರ ಭಾಷೆಗಳು ಎಂದರೆ ಕರ್ನಾಟಕ ರಾಜ್ಯದೊಳಗೆ ಚಾಲ್ತಿಯಲ್ಲಿದ್ದ ಭಾಷೆಗಳಾದ ಹಿಂದಿ, ಮರಾಠಿ, ತೆಲುಗು, ತಮಿಳು, ಇಂಗ್ಲಿಷ್ ಹಾಗು ಉರ್ದು ಭಾಷೆಗಳ ಸ್ಥಾನ ಮಾನವನ್ನು ನಿಗದಿಪಡಿಸಲು ಗೋಕಾಕ್ ಸಮಿತಿಯು ವಿಸ್ತೃತ ವರದಿ ಸಿದ್ಧಪಡಿಸುತ್ತದೆ.

**ಚಳವಳಿಯ ಸ್ವರೂಪ**

ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ ನಂತರವೂ ಸರ್ಕಾರದಿಂದ ಯಾವುದೇ ಸಾಂವಿಧಾನಿಕ ತಿದ್ದುಪಡಿಗಳಾಗಲಿ ಅಥವಾ ಅಧಿಸೂಚನೆಗಳಾಗಲಿ ಹೊರಡಲಿಲ್ಲ. ಅದೇ ಸಮಯಕ್ಕೆ

ಗೋಕಾಕ್ ವರದಿ ಜಾರಿಗೆ ಇತರ ಅನೇಕ ಕರ್ನಾಟಕದೊಳಗಿನ ಅಲ್ಪ ಸಂಖ್ಯಾತ ಭಾಷಿಗರಿಂದ ವಿರೋಧವೂ ವ್ಯಕ್ತವಾಗಿತ್ತು. ಇವೆಲ್ಲವುಗಳ ಪರಿಣಾಮ ಹಲವಾರು ಪ್ರತಿಭಟನೆಗಳು, ಆಗ್ರಹ ಜಾಥಾಗಳು ಕನ್ನಡ ಪರ ಸಂಘಟನೆಗಳಿಂದ ನಡೆದವು, ಆದಾಗ್ಯೂ ಅತಿ ದೊಡ್ಡ ಪ್ರಮಾಣದಲ್ಲಿ ಜನ ಮಾನಸ ತಲುಪಲು ಸಾಧ್ಯವಾಗದೆ ಚಳುವಳಿ ಸೊರಗಿತ್ತು. ಚಳುವಳಿಯನ್ನು ಬೃಹತ್ ಮಟ್ಟದಲ್ಲಿ ನಡೆಸಿ ಸರ್ಕಾರವನ್ನು ಸಮರ್ಪಕವಾಗಿ ಆಗ್ರಹಿಸಲು ನಿರ್ಧರಿಸಿದಾಗ ಚಳುವಳಿಯಲ್ಲಿ ಕಾಣಿಸಿಕೊಂಡದ್ದೇ ಕನ್ನಡ ಚಿತ್ರರಂಗ. ಅಲ್ಲಿಯವರೆವಿಗೂ ಎಲ್ಲಿಯೂ ಜನರೊಡನೆ ಅಷ್ಟಾಗಿ ಬೆರೆಯದ ಚಿತ್ರರಂಗ ಕನ್ನಡದ ವಿಚಾರವಾಗಿ ಬೀದಿಗಿಳಿದು ಹೋರಾಡಲು ಶುರು ಮಾಡಿದ್ದು ಕನ್ನಡದ ವರನಟ ಡಾ.ರಾಜ್ ಕುಮಾರ್ ಚಳುವಳಿಗೆ ಧುಮುಕಿದಾಗಲೇ.

## ಗೋಕಾಕ್ ಚಳವಳಿಯಲ್ಲಿ ಡಾ.ರಾಜ್ ಕುಮಾರ್

ಬರೀ ಕೆಲವು ಸಾಹಿತಿಗಳು ಹಾಗು ಕನ್ನಡ ಭೋದಕ ಸಿಬ್ಬಂದಿಗಳಿಂದ ನಡೆಯುತ್ತಿದ್ದ ಚಳವಳಿ ಅಷ್ಟಾಗಿ ಸುದ್ದಿಯೇನು ಮಾಡಿರಲಿಲ್ಲ. ಸರ್ಕಾರದೊಂದಿಗೆ ಪತ್ರಗಳ ಮುಖೇನ ಮಾತು ಕತೆ ನಡೆಯುತ್ತಿದ್ದರೂ ಚಳವಳಿಯ ಮೂಲ ಸ್ವರೂಪವೇನು ಎಂದು ಸಾಮಾನ್ಯ ಜನರಿಗೆ ಅರ್ಥವೇ ಆಗಿರಲಿಲ್ಲ. ಚಳವಳಿಯ ವಿಚಾರವಾಗಿ ಕೆಲವೇ ಕೆಲವರು ಕರಾರುವಕ್ಕಾದ ನಿಲುವು ಹೊಂದಿದ್ದರು, ಆದರೂ ಸಾಮಾನ್ಯ ಕನ್ನಡಿಗರಿಗೆ ವಿಚಾರ ತಿಳಿಯದ ಕಾರಣ ಚಳವಳಿ ವಿಫಲದ ಹಾದಿ ಹಿಡಿದಿತ್ತು. ಹೀಗಿರುವ ಚಳುವಳಿಗೆ ಉತ್ತಮ ರೂಪು ಕೊಡುವ, ಚಳುವಳಿಯ ಪ್ರಮಾಣವನ್ನು ಅಗಾಧವಾಗಿಸಬಲ್ಲ ವ್ಯಕ್ತಿತ್ವಕ್ಕಾಗಿ ಹುಡುಕಾಟ ಚರ್ಚೆಗಳು ಆರಂಭವಾದವು. ಆಗ ಕಣ್ಣಿಗೆ ಬಿದ್ದದ್ದೇ ಕನ್ನಡದ ಮೇರು ನಟ ಡಾ.ರಾಜ್ ಕುಮಾರ್. ರಾಜ್ ಕುಮಾರ್ ಚಿತ್ರರಂಗದ ವತಿಯಿಂದ ಹೋರಾಟಕ್ಕಿಳಿದರೆ ಇಡೀ ಚಿತ್ರರಂಗವನ್ನು ಚಳುವಳಿಗೆ ತರುವುದು ಬಹು ಸುಲಭವೆನ್ನುವ ವಿಚಾರ ಸಾಹಿತಿಗಳ ನಡುವೆ ಹರಿದಾಡಿತು.

ಆಗ ಮಾಧ್ಯಮ ಅಷ್ಟು ಪ್ರಬಲವಾಗಿರದಿದ್ದ ಕಾರಣ ಎಲ್ಲಾ ಕನ್ನಡಿಗರಿಗೆ ಚಳವಳಿ ನಡೆಯುತ್ತಿರುವ ವಿಷಯವೇ ತಿಳಿದಿರಲಿಲ್ಲ. ಡಾ.ರಾಜ್ ಕುಮಾರ್ ಅವರನ್ನು ಈ ಚಳವಳಿಗೆ ಕರೆತರಲು ಕವಿ ಪಾಟೀಲ್ ಪುಟ್ಟಪ್ಪನವರು ಮದ್ರಾಸ್(ಈಗಿನ ಚೆನ್ನೈ)ಗೆ ಹೊರಡುತ್ತಾರೆ. ಅಲ್ಲಿಯವರೆವಿಗೂ ಡಾ.ರಾಜ್ ಕುಮಾರ್ ಸಿನೆಮಾ ಸಂಬಂಧಿ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದರೆ ಹೊರತು ಸಿನಿಮೇತರ ವಿಚಾರಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ಉದ್ದೇಶಿಸಿ ಮಾತನಾಡಿದ ಅನುಭವವೇ ಇರಲಿಲ್ಲ. ಆದಾಗ್ಯೂ ಕನ್ನಡದ ವಿಚಾರವಾದ್ದರಿಂದ ಚಳವಳಿಯಲ್ಲಿ ಪಾಲ್ಗೊಳ್ಳಲು ಒಪ್ಪಿಕೊಳ್ಳುತ್ತಾರೆ.

ಅಲ್ಲದೆ ಕನ್ನಡ ಚಿತ್ರರಂಗದಲ್ಲಿದ್ದ ಬಹಳ ಉನ್ನತ ಸ್ಥಾನದಲ್ಲಿದ್ದ ಡಾ.ರಾಜ್ ಕುಮಾರ್ ಚಳವಳಿಗೆ ಇಳಿದಿದ್ದೇ ತಡ, ಇಡೀ ಕನ್ನಡ ಚಿತ್ರರಂಗ ಸ್ವಲ್ಪ ದಿನಗಳ ಮಟ್ಟಿಗೆ ಚಿತ್ರೀಕರಣ ಕಾರ್ಯಗಳನ್ನೆಲ್ಲ ನಿಲ್ಲಿಸಿ ಚಳವಳಿಯಲ್ಲಿ ಪಾಲ್ಗೊಂಡಿತು. ಡಾ.ರಾಜ್ ಕುಮಾರ್ ಅವರೊಂದಿಗೆ ಇನ್ನಿತರ ಹಿರಿಯ ಕಲಾವಿದರಾದ ಡಾ.ವಿಷ್ಣು ವರ್ಧನ್, ಅಂಬರೀಷ್, ಶಂಕರ್ ನಾಗ್, ಲೋಕೇಶ್, ಅನಂತ್ ನಾಗ್, ಜೈ ಜಗದೀಶ್ ಇನ್ನು

ಮುಂತಾದ ಕಲಾವಿದರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು ಸಕ್ರಿಯರಾಗಿ ಪಾಲ್ಗೊಂಡರು. ಡಾ.ರಾಜ್ ಚಳವಳಿಗೆ ಇಳಿದ ಸುದ್ದಿ ಕರ್ನಾಟಕದಾದ್ಯಂತ ಮಿಂಚಿನಂತೆ ಸಂಚರಿಸಿತು. ಕರ್ನಾಟಕದ ಬಹುತೇಕ ಜನರು ತಮ್ಮ ನೆಚ್ಚಿನ ನಟನನ್ನು ಹಿಂಬಾಲಿಸಿ ತಾವೂ ಚಳವಳಿಯಲ್ಲಿ ಪಾಲ್ಗೊಂಡರು. ಕರ್ನಾಟಕದ ಮನೆ ಮನೆಯಿಂದಲೂ ಜನರು ಹೊರಗೆ ಬಂದು ನಡೆಯುತ್ತಿದ್ದ ಚಳವಳಿಯನ್ನು ಅರಿತು ಸಕ್ರಿಯರಾಗಿ ಪಾಲ್ಗೊಂಡಿದ್ದೇ ಆಗ. ಡಾ.ರಾಜ್ ಚಿತ್ರರಂಗದ ತಮ್ಮ ಸಹಕಲಾವಿದರೊಂದಿಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಗೋಕಾಕ್ ವರದಿ ಜಾರಿಯನ್ನು ಸರ್ಕಾರಕ್ಕೆ ಆಗ್ರಹಿಸುತ್ತಿದ್ದರು. ಡಾ.ರಾಜ್ ನಾಯಕತ್ವದಲ್ಲಿ ನಡೆಯುತ್ತಿದ್ದ ಚಳವಳಿಯಲ್ಲಿ ಭಾಗವಹಿಸುತ್ತಿದ್ದ ಜನಗಳನ್ನು ನಿಯಂತ್ರಿಸುವುದು ಪೊಲೀಸ್ ಇಲಾಖೆಗೆ ಅತಿ ದೊಡ್ಡ ತಲೆ ನೋವಾಗಿ ಪರಿಣಮಿಸಿತು. ಪ್ರತೀ ದಿನವೂ ನಡೆಯುತ್ತಿದ್ದ ಚಳವಳಿಯನ್ನು, ಅದರ ಅಗಾಧ ಸ್ವರೂಪವನ್ನು ಗಮನಿಸಿದ ಕರ್ನಾಟಕ ಸರ್ಕಾರ ಕೊನೆಗೂ ಚಳವಳಿಗೆ ಪ್ರತಿಕ್ರಿಯಿಸಿತು.

**ಚಳುವಳಿಗೆ ಸರ್ಕಾರದ ಪ್ರತಿಕ್ರಿಯೆ**

ಅತೀ ದೊಡ್ಡ ಸ್ವರೂಪದಲ್ಲಿ ನಡೆದ ಚಳವಳಿಗೆ ಕರ್ನಾಟಕ ಸರ್ಕಾರ ಧನಾತ್ಮಕವಾಗಿ ಸ್ಪಂದಿಸಿತು. ಆಗಿನ ಕರ್ನಾಟಕದ ಮುಖ್ಯಮಂತ್ರಿಗಳಾದ ಆರ್. ಗುಂಡೂರಾವ್ ಚಳವಳಿಯ ಆಗಾಧತೆಯನ್ನು ಕಂಡು ಗೋಕಾಕ್ ಸಮಿತಿ ಸಲ್ಲಿಸಿದ್ದ ವರದಿಯನ್ನು ಪುರಸ್ಕರಿಸಿದರು. ವರದಿಯಲ್ಲಿ ಉಲ್ಲೇಖಿಸಿದ್ದ ಪ್ರಕಾರ ಕನ್ನಡ ಭಾಷೆಗೆ ವಿಶೇಷ ಸ್ಥಾನ ಮಾನಗಳ ಜೊತೆಗೆ ಮೊದಲ ಭಾಷೆಯ ಸ್ಥಾನವನ್ನು ಕೊಡಲಾಯಿತು.

**ವಿಜಯಕುಮಾರ**
ತೃತೀಯ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ಕಲ್ಲಂಗಡಿ ಹಣ್ಣಿನ ಉಪಯೋಗ

ಆಹಾ! ಕಲ್ಲಂಗಡಿ ಹಣ್ಣು ಎನ್ನುತ್ತಿದ್ದಂತೆ ಯಾರು ತಾನೇ ಸುಮ್ಮನಿರಲು ಸಾಧ್ಯ. ಮನಸ್ಸಿನಲ್ಲಿ ನೆನೆಯುತ್ತಿದ್ದಂತೇ ಆಸ್ವಾದಿಸುತ್ತೇವೆ. ಒಂದಾನೊಂದು ಕಾಲದಲ್ಲಿ ವರ್ಷದಲ್ಲಿ ಒಮ್ಮೆ ಮಾತ್ರ ಈ ಹಣ್ಣನ್ನು ನೋಡಬಹುದಿತ್ತು. ಆದರೆ ಈಗ ಕಾಲ ಬದಲಾದಂತೆ ವ್ಯವಸಾಯದ ವಿಧಾನ ಕೂಡ ಬದಲಾಗಿದೆ. ಹಾಗಾಗಿ ನಾವು ಯಾವಾಗ ಬೇಕೆಂದೆನಿಸಿದರು ಈ ಹಣ್ಣನ್ನು ಸವಿಯಬಹುದು. ಆದರೆ ನಮಗೆ ಬಲು ರುಚಿಯಾದ, ಸಿಹಿಯಾದ, ಗುಲಾಬಿ ಬಣ್ಣವಿರುವ ಬಾಯಲ್ಲಿಡುತ್ತಿದ್ದಂತೆ ಕರಗಿ ಹೋಗುವಂತಹ ಉತ್ತಮವಾದ ಹಣ್ಣು ಬೇಕಿದ್ದರೆ ಬೇಸಿಗೆಯವರೆಗೂ ಕಾಯಲೇಬೇಕು.

ಹಣ್ಣು ಎಂದ ತಕ್ಷಣ ರುಚಿಯೊಂದಿದ್ದರೆ ಸಾಕೇ? ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಆ ರುಚಿಯಾದ ಹಣ್ಣಿನ ಉಪಯುಕ್ತ ಗುಣಗಳನ್ನು ತಿಳಿದುಕೋಳ್ಳುವುದು ನಮ್ಮ ಕರ್ತವ್ಯವಲ್ಲವೇ? ಕಲ್ಲಂಗಡಿ ಹಣ್ಣು ಕುಕುರ್ಬಿಟೇಸಿ ಕುಟುಂಬಕ್ಕೆ ಸೇರಿದ್ದು ಇದರ ವೈಜ್ಞಾನಿಕ ಹೆಸರು ಸಿಟ್ರುಲಿಸ್ ಲನಾಟಸ್ & ಇದರ

ಉದ್ಭವ ಆಫ್ರಿಕಾದಲ್ಲಾಗಿದ್ದು ಮೊದಲ ಬಾರಿಗೆ ಈಜಿಪ್ಟ್‌ನಲ್ಲಿ ಬೆಳೆದುದ್ದಾಗಿ ಎಂದು ಚರಿತ್ರೆಗಳಲ್ಲಿ ಹೇಳಲಾಗಿದೆ. ಇದು ವಿಟಮಿನ ಬಿ6 ಅನ್ನು ಹೆಚ್ಚಾಗಿ ಹೊಂದಿದೆ. ಲೈಕೊಪೀನ್ ಎಂಬ ತುಂಬಾ ಮುಖ್ಯವಾದ ಆಂಟಿ–ಆಕ್ಸಿಡೆಂಟ್ ಈ ಹಣ್ಣಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದು ಕ್ಯಾನ್ಸರ್‌ನಂತಹ ರೋಗಗಳನ್ನು ನಿವಾರಣೆ ಮಾಡುವುದೆಂದು ಸಂಶೋಧನೆಗಳಿಂದ ದೃಢಪಟ್ಟಿದೆ.

ಕಲ್ಲಂಗಡಿ ಹಣ್ಣಿನಲ್ಲಿ ಸಿಟ್ರುಲಿನ್ ಎಂಬ ಅಮೈನೋ ಆಸಿಡ್ ಕೂಡ ಇದ್ದು ಈ ಹಣ್ಣನ್ನು ಸೇವಿಸಿದಾಗ ಅದರಲ್ಲಿರುವ ಸಿಟ್ರುಲಿನ್ ಶರೀರವನ್ನು ಸೇರಿ ಅರ್ಜಿನಿನ್ ಆಗಿ ಪರಿವರ್ತನೆಗೊಳ್ಳುತ್ತದೆ. ಹೀಗೆ ಕಡಿಮೆ ಮಾಡುವಲ್ಲಿ ತುಂಬಾ ಉಪಯುಕ್ತವೆಂದು ಸಂಶೋಧನೆಗಳಿಂದ ಗೊತ್ತಾಗಿದೆ. ಈ ಹಣ್ಣು ನಮ್ಮ ಬೇಸಿಗೆಯ ಬಾಯಾರಿಕೆಯನ್ನು ತಣಿಸುವುದಲ್ಲದೇ & ಡಯಾಬಿಟಿಸ್ ಬೊಜ್ಜಿನಂತಹ ರೋಗಗಳನ್ನು ಕಡಿಮೆಮಾಡುವುದಲ್ಲದೇ ಅಸ್ತಮಾ ಆರ್ಥ್ರೈಟಿಸ್. ಅಧಿಕ ರಕ್ತದೊತ್ತಡದಂತಹ ರೋಗಗಳಿಂದ ಬಳಲುತ್ತಿರುವವರು ಕೂಡ ತೆಗೆದುಕೊಳ್ಳಬಹುದಾಗಿದೆ.

**ಚೈತ್ರಾ ಬಿ ಕೆ**
ತೃತೀಯ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ತಿನಿಂದ 1915 ರಿಂದ ನಡೆಸಿಕೊಂಡು ಬರುತ್ತಿರುವ ದೊಡ್ಡ ಪ್ರಮಾಣದ ಕನ್ನಡ ಸಮ್ಮೇಳನ. ಕರ್ನಾಟಕದ ಏಕೀಕರಣವನ್ನು ಸಾಧಿಸುವುದು ಮತ್ತು ಕನ್ನಡನಾಡಿನ ಕನ್ನಡಿಗರ ಬದುಕಿನಲ್ಲಿ ಕನ್ನಡವು ಸಾರ್ವಭೌಮ ಸ್ಥಾನವನ್ನು ಪಡೆದುಕೊಳ್ಳಲು ಅಗತ್ಯವಾದ ಜನಜಾಗೃತಿಯ ಸಂಕಲ್ಪವನ್ನು ಮೂಡಿಸುವುದು ಈ ಸಮ್ಮೇಳನದ ಉದ್ದೇಶ. ಅವಿರತ ದುಡಿದ ಸಾಹಿತಿಗಳನ್ನು ಇದರ ಅಧ್ಯಕ್ಷತೆ ವಹಿಸಲು ಕೋರಿ ಗೌರವಿಸಲಾಗುತ್ತದೆ. ಈ ಹಿಂದೆ ಕನ್ನಡ ಸಾಹಿತ್ಯದ ಅನೇಕ ಗಣ್ಯರು, ಮಹಾಪುರುಷರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾರೆ. ಇದು ವರ್ಷಕ್ಕೊಮ್ಮೆ ಜರುಗುವುದು.

1914 "ದಿ ಮೈಸೂರು ಏಕಾನಾಮಿಕ್ ಕಾನ್ಫೆರೆನ್ಸ್" (ಮೈಸೂರು ಸಂಪದಭ್ಯದಯ ಸಮಾಜ) ಸಮ್ಮೇಳನದಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗೆ ಪೂರಕವಾಗಿ ಪರಿಷತ್ತನ್ನು ಸ್ಥಾಪಿಸುವ ವಿಚಾರದಲ್ಲಿ ರಾವ್ ಬಹದ್ದೂರ್, ಎಂ. ಶಾಮರಾವ್, ಕರ್ಪೂರ ಶ್ರೀನಿವಾಸರಾವ್ ಮತ್ತು ಪಿ.ಎಸ್. ಅಚ್ಯುತರಾವ್ ಅವರುಗಳನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು. ಈ ಉಪಸಮಿತಿಯು ಅಂದಿನ ವಿವಿಧ ಕನ್ನಡ ನಾಡುಗಳ ಪ್ರಾಜ್ಞರೊಡನೆ ಸಮಾಲೋಚಿಸಿ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿ, ಆ ಸಮ್ಮೇಳನಗಳಲ್ಲಿ ಕೆಲವು ಉದ್ದೇಶ ಸಾಧನ ಕ್ರಮಗಳನ್ನು ಚಿಂತಿಸುವ ಕುರಿತಾದ ಮಾರ್ಗದರ್ಶನ ಸೂತ್ರಗಳನ್ನು ರೂಪಿಸಿತು.

ಇದರಲ್ಲಿ ಮುಖ್ಯವಾಗಿ ತತ್ವಶಾಸ್ತ್ರ, ಪ್ರಕೃತಿ ವಿಜ್ಞಾನ, ಚರಿತ್ರೆ, ಸಾಹಿತ್ಯ ಮೊದಲಾದ ವಿಷಯಗಳಿಗೆ ಸಂಬಂಧಪಡುವ ಗ್ರಂಥಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಪ್ರೋತ್ಸಾಹಕೊಟ್ಟು ಪ್ರಚುರ ಪಡಿಸುವುದು. ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನು, ಕನ್ನಡ ದೇಶಗಳ ಚರಿತ್ರೆಗಳನ್ನೊಳಗೊಂಡ ಗ್ರಂಥಗಳನ್ನು ಸಂಗ್ರಹಿಸಿ, ಅದನ್ನು ಪರಿಷ್ಕರಿಸಿ ಪ್ರಕಟಿಸುವುದು. ಅಲ್ಲದೆ ಕನ್ನಡನಾಡಿನ ಪೂರ್ವಸ್ಥಿತಿಯನ್ನು ವಿಶದಗೊಳಿಸುವ ವಸ್ತುಗಳನ್ನು ಕೂಡಿಟ್ಟು, ಅವುಗಳನ್ನು ಕಾಪಾಡುವುದಕ್ಕಾಗಿ ವಸ್ತು ಸಂಗ್ರಹಾಲಯಗಳನ್ನು ಏರ್ಪಡಿಸುವುದು. ಕರ್ನಾಟಕ ಭಾಷಾ ಸಂಸ್ಕರಣ, ಕರ್ನಾಟಕ ಗ್ರಂಥಾಭಿವೃದ್ದಿಗಳನ್ನು ಕುರಿತು ಪಂಡಿತ ಯೋಗ್ಯವಾದ ಲೇಖನಗಳನ್ನೊಳಗೊಂಡ ಕನ್ನಡದ ಪತ್ರಿಕೆಗಳನ್ನು ಪ್ರಕಟಿಸುವುದು. ಇಂತಹ ಅನೇಕ ರೀತಿಯ ಉಪಯೋಗಗಳನ್ನು ಕನ್ನಡ ಸಾಹಿತ್ಯ ಸಮ್ಮೇಳನದಿಂದ ಪಡೆದುಕೊಳ್ಳಬಹುದಾಗಿದೆ. ಹಾಗೆಯೇ ಉತ್ತಮವಾದ ಕನ್ನಡ ಸಾಹಿತ್ಯ ಕಾರ್ಯಕ್ರಮ ಇದಾಗಿದೆ.

ಈವರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ 84 ಕನ್ನಡ ಸಾಹಿತ್ಯ ಸಮ್ಮೇಳನಗಳು ಪೂರ್ಣಗೊಂಡು ಮುಂದಿನ ಫೆಬ್ರುವರಿಯಲ್ಲಿ ಕಲ್ಬುರ್ಗಿಯಲ್ಲಿ 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕೈಗೊಳ್ಳಲು ಯೋಜಿಸಿ ಅದರ ಅಧ್ಯಕ್ಷತೆಯನ್ನು ಸಾಹಿತಿ ಹೆಚ್ ಎಸ್ ವೆಂಕಟೇಶ್ ಮೂರ್ತಿಯವರನ್ನು ಆಯ್ಕೆ ಮಾಡಲಾಗಿದೆ.

**ಕಾವ್ಯ ವಿ**
ತೃತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

## ಕನ್ನಡದ ಹಾಡುಗಬ್ಬಗಳು

ಕನಕದಾಸರ '**ಮೋಹನ ತರಂಗಿಣಿ**' ಮತ್ತು ರತ್ನಾಕರವರ್ಣಿ '**ಭರತೇಶವೈಭವ**' ಇವರಡೂ ಹಾಡುಗಳು ಷಟ್ಪದಿಗಳಲ್ಲಿ ರಚಿತವಾದ ರಾಘವಾಂಕ ಕುಮಾರವ್ಯಾಸರ ಕೃತಿಗಳು ಕೂಡ ಹಾಡುಗಬ್ಬಗಳೇ ಆಗಿವೆ. ಕಾವ್ಯ ಕೃತಿಗಳಲ್ಲಿ ಕೆಲವು ವಸ್ತುಕ ಇನ್ನು ಕೆಲವು ವರ್ಣಕ ಎಂಬ ಭೇದ ಓದುಗಬ್ಬ ಮತ್ತು ಹಾಡುಗಬ್ಬಗಳ ನಡುವಿನ ಭೇದಕ್ಕೆ ಸರಿಸಮಾನವಾಗಿದೆ. 'ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು ವಿರಳವಾದರು ಚಿಂತೆಯಿಲ್ಲ' ಎಂದು ರತ್ನಾಕರವರ್ಣಿ ತನ್ನ ವರ್ಣಕ ಕಾವ್ಯದಲ್ಲಿ ಲಕ್ಷಣಗಳ ಅಭಾವವನ್ನು ಸೂಚಿಸಿದ್ದಾನೆ, ಚಂಪೂಕಾವ್ಯಗಳ ನಿಯಮನಿಷ್ಠೆ ಬರಬರುತ್ತ ಮುಂದಿನ ಕಾವ್ಯಕೃತಿಗಳಲ್ಲಿ ಸಡಿಲಾಗುತ್ತ ಬರುತ್ತಿರುವುದನ್ನು ಹಳೆಗನ್ನಡ ಕಾವ್ಯದ ಇತಿಹಾಸದಲ್ಲಿ ಕಾಣಬಹುದಾಗಿದೆ. ಭಾಷೆ, ಛಂದಸ್ಸು, ವರ್ಣನಾಕ್ರಮ ಮೊದಲಾದವುಗಳಲ್ಲಿ ಪರಿವರ್ತನೆ ಕೃತಿಕಾರಾನ ಪ್ರಜ್ಞೆಯನ್ನು ಮಿರಿ ನಡೆದು ಬಂದಿದೆ. ಮುಖ್ಯವಾದ ಪರಿವರ್ತನೆಯೆಂದರೆ ಕಾವ್ಯದ ಗೇಯತೆ ಮತ್ತು ಅದರ ಪರಿಣಾಮವಾಗಿ ಕೃತಿಯ

ಆಕಾರದಲ್ಲಿ ಹುಟ್ಟಿ ಬಂದ ಮುಕ್ತತೆ ಎಂದು ಹೇಳಬಹುದು, ಚಂಪೂಕಾವ್ಯ ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ, ಅದಕ್ಕೊಂದು ನಿರ್ದಿಷ್ಟವೆನ್ನಬಹುದಾದ ಆಕಾರ ಅವಲಂಬಿಸಿರುತ್ತದೆ.

ಒಂದು ದೊಡ್ಡಕತೆಯನ್ನು ಪ್ರಮಾಣಬದ್ಧವಾದ ಕಾವ್ಯಕೃತಿಯನ್ನಾಗಿ ಮಾರ್ಪಡಿಸಿದ್ದಕ್ಕೆ ಪಂಪನ 'ವಿಕ್ರಮಾರ್ಜುನ ವಿಜಯ' ಒಂದು ಉತ್ಕೃಷ್ಟವಾದ ಉದಾಹರಣೆಯಾಗಿದ್ದರೆ. ಒಂದು ಸಣ್ಣಕತೆಯನ್ನು ಹಿಗ್ಗಿಸಿ ಆದರ ಪ್ರಮಾಣ ಕೆಡದಂತೆ ಕೃತಿಯನ್ನು ರಚಿಸಿದ್ದಕ್ಕೆ ನಾಗಚಂದ್ರನ 'ಮಲ್ಲಿನಾಥ ಪುರಣ' ಇನ್ನೊಂದು ಉದಾಹಾರಣೆಯಾಗಿದೆ. ಪಂಪನ 'ವಿಕ್ರಮಾರ್ಜುನ ವಿಜಯ' ನಾಗಚಂದ್ರನ 'ಮಲ್ಲಿನಾಥ ಪುರಾಣ' ಮತ್ತು ಜನ್ನನ 'ಯಶೋಧರ ಚರಿತೆ' ಈ ಮೂರು ಕಾವ್ಯಕೃತಿಗಳು ಕಾವ್ಯವಸ್ತುವಿಗೂ ಕೃತಿಯ ಆಕಾರಕ್ಕೂ ಇರುವ ಸಂಬಂಧವನ್ನು ಕುರಿತು ಯೋಚಿಸುವಂತೆ ಮಾಡುತ್ತದೆ. ಕೃತಿಯ ವಸ್ತು ಮತ್ತು ಕೃತಿಯ ಆಕಾರ ಇವುಗಳ ನಡುವಿನ ಸಂಬಂಧವೆಂದರೆ ಮಾತು ಮತ್ತು ಅರ್ಥಗಳು ಪರಸ್ಪರ ನಿಯಾಮಕ ತತ್ವಗಳಾಗಿವೆ. ಅರ್ಥ ಜೀವವಾದರೆ ಮಾತು ದೇಹವಾಗುತ್ತದೆ. ಜೀವ ಮತ್ತು ದೇಹಗಳ ಸಂಬಂಧ ಜೈನದರ್ಶನದಲ್ಲಿ ಒಂದು ನಿರ್ದಿಷ್ಟತೆಯನ್ನು ಪಡೆಯಿತು. ಮಾತು ಮತ್ತು ಅರ್ಥಗಳು ಪರಸ್ಪರ ನಿಯಾಮಕ ತತ್ವವಾಗುವುದಕ್ಕೆ ಇದೇ ಕಾರಣವೀರಬೇಕು, ಮಾತಿನಿಂದ ಅರ್ಥಕ್ಕೆ ಅಭಿವ್ಯಕ್ತಿ ಮಾತು ಅರ್ಥದಿಂದ ಮಾತಿಗೆ ಬೆಳೆಯುವ ಗುಣ ತಾನಾಗಿ ಬಂದು ಬಿಡುತ್ತದೆ. ಮಹಾಭಾರತದ ಪಿರಿದಾದ ಕತೆಗೆ ಪಂಪನ ಮಾತು ಒಂದು ನಿರ್ದಿಷ್ಟತೆಯನ್ನು ತಂದುಕೊಡುತ್ತದೆ. ಅಭಿವ್ಯಕ್ತಿಯಲ್ಲಿ ಪಂಪನ ಮಾತು ಮುಖ್ಯವಾದದ್ದು ಆದರಂತೆ ಪಂಪನ ಮಾತಿಗೆ ಮಹಾಭಾರತದ ಕತೆ ನಿಯಾಮಕ ತತ್ವವಾಗುತ್ತದೆ.

**ಸಂಗೀತ**
ತೃತೀಯ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

## ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆ

ದೇಶ ವಿದೇಶಗಳಲ್ಲಿರುವ ಭಾರತೀಯರು ತಂತ್ರಜ್ಞಾನ ಕ್ಷೇತ್ರದಲ್ಲಿ ಮಾಡುತ್ತಿರುವ ಸಾಧನೆ ಮತ್ತು ಸಮಾಜಕ್ಕೆ ನೀಡುತ್ತಿರುವ ಕೊಡುಗೆಯಲ್ಲಿ, ಕೆಲವುದರ ಪರಿಚಯವನ್ನು ಇಂದು ಮಾಡಿಕೊಳ್ಳೋಣ. ಭಾರತವೆಂದರೆ ಕಡುಬಡತನದ ಮತ್ತು ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಹಿಂದುಳಿದ ದೇಶ. ಇಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳು, ಸಾಧನೆಗಳು ಸಾಧ್ಯವಿಲ್ಲ ಎನ್ನುವ ಮನೋಭಾವವನ್ನು ಕೆಲವು ಭಾರತೀಯರೇ ಹೊಂದಿರುವುದು ಮತ್ತು ದೇಶ ವಿದೇಶಗಳಲ್ಲಿ ವಿವಿಧ ಮಾಧ್ಯಮಗಳ ಮೂಲಕ ತಮ್ಮ ಅಭಿಪ್ರಾಯವನ್ನು ಜನಸಾಮಾನ್ಯರ ಮೇಲೆ ಹೇರುತ್ತಿರುವುದು ವಿಷಾದನೀಯ.

**1) ವಿಶ್ವಾದಂತ್ಯ ಅಸ್ತಮಾ ಸಮಸ್ಯೆ ಎದುರಿಸುತ್ತಿರುವವರಿಗೆ ನೆರವಾದ ಡಾ. ಯೋಗಿ ಗೋಸ್ವಾಮಿ.**

ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಆಸ್ತಮಾ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ 2 ಕೋಟಿಗೂ ಅಧಿಕವಿದೆ.ವಿಶ್ವಾದಂತ್ಯ ಸುಮಾರು 20 ಕೋಟಿಗೂ ಹೆಚ್ಚು ಜನರು ಆಸ್ತಮಾ ಸಮಸ್ಯೆಯಿಂದ ಬಳಲುತ್ತಿದ್ದಾರೆ. ದೆಹಲಿ, ಬೀಜಿಂಗ್, ಬೆಂಗಳೂರು ಮೊದಲಾದ ಮಹಾನಗರಗಳಿಂದ ಹಿಡಿದು ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೂಡಾ ಹೆಚ್ಚಾಗುತ್ತಿರುವ ವಾಯುಮಾಲಿನ್ಯದಿಂದಾಗಿ, ಆಸ್ತಮಾ ಸಮಸ್ಯೆ ಎದುರಿಸುತ್ತಿರುವ ಮಕ್ಕಳು ಮತ್ತು ವಯಸ್ಕರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ವೈದ್ಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಅಸ್ತಮಾ ಸಮಸ್ಯೆ ಎದುರಿಸುತ್ತಿರುವವರಿಗೆ ಗಾಳಿಯನ್ನು ಶುದ್ಧೀಕರಿಸಿ ನೀಡುವುದಾಗಿ ಹೇಳುವ ಅನೇಕ ಏರ್ ಪ್ಯೂರಿಫೈಯರ್ಗಳು ವಿಶ್ವಾದಂತ್ಯ ಲಭ್ಯವಿದೆ.ಆದರೆ ಅವುಗಳ ಬಳಕೆಯಿಂದ, ನಿರೀಕ್ಷಿತ ಪ್ರಯೋಜನ ದೊರೆಯುತ್ತಿಲ್ಲ ಎಂದು ಹೇಳಲಾಗುತ್ತಿದೆ.

1990ರ ದಶಕದಲ್ಲಿ ಹೆಚ್ಚಿನ ಉದ್ಯೋಗವಕಾಶಗಳನ್ನು ಅರಿಸಿ, ಭಾರತದಿಂದ ಅಮೇರಿಕಾಗೆ ಡಾ.ಯೋಗಿ ಗೋಸ್ವಾಮಿ, ತಮ್ಮ ಕುಟುಂಬದ ಜೊತೆ ವಲಸೆ ಹೋಗಿದ್ದರು.ಸೌರಶಕ್ತಿ ಕ್ಷೇತ್ರದಲ್ಲಿ ಅವರಿಗಿದ್ದ ಕೌಶಲ್ಯ ಮತ್ತು ಅನುಭವಕ್ಕೆ ಉತ್ತಮ ಅವಕಾಶಗಳು ಅಮೇರಿಕಾದಲ್ಲಿ ದೊರೆತರೂ, ಅವರು ನಿರೀಕ್ಷಿಸದ ಸಮಸ್ಯೆಯೊಂದು ಎದುರಾಗಿತ್ತು.ಅವರ ಪುಟ್ಟ ಮಗು ದಿಲೀಪ್ನನ್ನು ಆಸ್ತಮಾ ಸಮಸ್ಯೆ ಇನ್ನಿಲ್ಲದಂತೆ ಕಾಡತೊಡಗಿತು.ಈ ಮಗುವಿಗೆ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸುವುದು ಸಾಮಾನ್ಯವಾಯಿತು. ಆಸ್ತಮಾ ಸಮಸ್ಯೆ ಎದುರಿಸುವವರಿಗೆ ನೆರವಾಗುತ್ತವೆ ಎಂದು ಹೇಳಲಾದ ಹಲವಾರು ರೀತಿಯ ಏರ್ ಪ್ಯೂರಿಫೈಯರ್ಗಳನ್ನು ಡಾ.ಯೋಗಿ ಗೋಸ್ವಾಮಿ ಖರೀದಿಸಿ, ಬಳಸತೊಡಗಿದರೂ, ಮಗುವಿಗೆ ಏನೂ ಪ್ರಯೋಜನವಾಗಲಿಲ್ಲ. ಆಗ ಈ ಏರ್ ಪ್ಯೂರಿಫೈಯರ್ಗಳಿಂದ ತಮ್ಮ ಮಗುವಿಗೆ ಏಕೆ ಪ್ರಯೋಜನವಾಗುತ್ತಿಲ್ಲ ಎಂದು ತಿಳಿದುಕೊಳ್ಳಲು ಡಾ.ಯೋಗಿ ಗೋಸ್ವಾಮಿ ಮುಂದಾದರು. ಇಂತಹ ಅನೇಕ ಏರ್ ಫಿಲ್ಟರ್‌ಗಳಲ್ಲಿ 1940ರ ದಶಕದಲ್ಲಿ ಅಭಿವೃದ್ಧಿಯಾದ ಹೆಚ್ಇಪಿಎ ತಂತ್ರಜ್ಞಾನವನ್ನು ಬಳಸುತ್ತಿರುವುದನ್ನು ಡಾ. ಗೋಸ್ವಾಮಿ ಅರಿತುಕೊಂಡರು. ಗಾಳಿಯಲ್ಲಿರುವ ಮಾಲಿನ್ಯಕಾರಕ ಕಣಗಳಲ್ಲಿ ಅಧಿಕ ಸಂಖ್ಯೆಯನ್ನು ಈ ಪ್ಯೂರಿಫೈಯರ್ಗಳು ಸರೆಹಿಡಿಯುತ್ತಿದ್ದರೂ, ಈ ಕಣಗಳನ್ನು ಪೂರ್ಣವಾಗಿ ನಾಶಪಡಿಸುತ್ತಿರಲಿಲ್ಲ. ಹೀಗಾಗಿ ಆಸ್ತಮಾ ಸಮಸ್ಯೆ ಎದುರಿಸುವವರಿಗೆ ಈ ಪ್ಯೂರಿಫೈಯರ್ಗಳಿಂದ ನಿರೀಕ್ಷಿತ ಪ್ರಯೋಜನವಾಗುತ್ತಿಲ್ಲವೆಂದು ಡಾ.ಗೋಸ್ವಾಮಿ ಗಮನಿಸಿದರು.

20 ವರ್ಷಗಳ ಕಾಲ ನಿರಂತರವಾಗಿ ಡಾ.ಗೋಸ್ವಾಮಿ ಮಾಡಿದ ಸಂಶೋಧನೆ ಮತ್ತು ಅಭಿವೃದ್ಧಿಯ ಕೆಲಸದ ಫಲವಾಗಿ ಪಿಇಸಿಓ (ಫೋಟೋ ಎಲ್ಕಟ್ರೋಕೆಮಿಕಲ್ ಆಕ್ಸಿಡೇಷನ್) ಎನ್ನುವ ಅಧುನಿಕ ತಂತ್ರಜ್ಞಾನದ ಆವಿಷ್ಕಾರವಾಗಿದೆ. ಈ ತಂತ್ರಜ್ಞಾನದ ಪೇಟೆಂಟ್ ಪಡೆದಿರುವ ಡಾ.ಗೋಸ್ವಾಮಿ, ಈ ತಂತ್ರಜ್ಞಾನವನ್ನು ಬಳಸಿ ಮಾಲಿಕ್ಯೂಲ್ ಹೆಸರಿನ ಏರ್ ಪ್ಯೂರಿಫೈಯರ್ ಉಪಕರಣವನ್ನು ಉತ್ಪಾದನೆ

ಮಾಡಿ, ಮಾರಾಟ ಮಾಡುತ್ತಿದ್ದಾರೆ.ನ್ಯಾನೋ ಕಣಗಳ ಲೇಪನ ಮಾಡಿರುವ ಫಿಲ್ಟರ್ ಮೆಂಬ್ರೇನ್ ಮೇಲೆ ಬೆಳಕಿನ ಕಿರಣಗಳನ್ನು ಹಾಯಿಸುವ ತಂತ್ರಜ್ಞಾನವನ್ನು ಡಾ.ಗೋಸ್ವಾಮಿ ಬಳಸುತ್ತಾರೆ.ಇದರಿಂದಾಗಿ ಮಾಲಿಕ್ಯೂಲ್ ಏರ್ ಪ್ಯೂರಿಫೈಯರ್ ಉಪಕರಣದ ಮೂಲಕ ಪ್ರವಹಿಸುವ ಗಾಳಿಯಲ್ಲಿರುವ ಮಾಲಿನ್ಯಕಾರಕ ಕಣಗಳನ್ನು ನಾಶ ಪಡಿಸುವುದು ಸಾಧ್ಯವಾಗುತ್ತದೆ. ಸಾಂಪ್ರದಾಯಿಕ **ಹೆಚ್**ಇಪಿಎ ತಂತ್ರಜ್ಞಾನ ಆಧಾರಿತ ಏರ್ ಪ್ಯೂರಿಫೈಯರ್ ಉಪಕರಣಗಳಿಗಿಂತ 1000 ಪಟ್ಟು ಚಿಕ್ಕದಾದ ವಾಯು ಮಾಲಿನ್ಯ ಕಣಗಳನ್ನು ಡಾ.ಗೋಸ್ವಾಮಿಯವರು ಅಭಿವೃದ್ಧಿಪಡಿಸಿರುವ ಮಾಲಿಕ್ಯೂಲ್ ಏರ್ ಪ್ಯೂರಿಫೈಯರ್ ಸೆರೆಹಿಡಿದು, ನಾಶ ಮಾಡುತ್ತಿರುವುದು ಸಾಬೀತಾಗಿದೆ.

ಅಮೇರಿಕಾದ ದಕ್ಷಿಣ ಫ್ಲಾರಿಡಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿರುವ ಡಾ.ಯೋಗಿ ಗೋಸ್ವಾಮಿಯವರು ಅಭಿವೃದ್ಧಿ ಪಡಿಸಿರುವ ಮಾಲಿಕ್ಯೂರ್ ಏರ್ ಪ್ಯೂರಿಫೈಯರ್ ಉಪಕರಣವನ್ನು ವಿಶ್ವವಿಖ್ಯಾತ ಟೈಮ್ಸ್ ನಿಯತಾಲಿಕೆಯು, ವರ್ಷ 2017ರ 25 ಶ್ರೇಷ್ಠ ಆವಿಷ್ಕಾರಗಳಲ್ಲಿ ಒಂದು ಎಂದು ಗುರುತಿಸಿ ಗೌರವಿಸಿದೆ. ತಮ್ಮ ಮಗುವಿಗೆ ಪ್ರಯೋಜನವಾದ ಈ ಏರ್ ಪ್ಯೂರಿಫೈಯರ್ ವಿಶ್ವಾದಂತ್ಯ ಆಸ್ತಮಾ ಸಮಸ್ಯೆ ಎದುರಿಸುತ್ತಿರುವವರಿಗೆ ದೊರೆಯ ಬೇಕು ಮತ್ತು ಅವರಿಗೂ ಪ್ರಯೋಜನವಾಗ ಬೇಕು ಎನ್ನುವ ಉದ್ದೇಶದಿಂದ ಡಾ.ಯೋಗಿ ಗೋಸ್ವಾಮಿ ದಂಪತಿ ಕೆಲಸ ಮಾಡುತ್ತಿದ್ದಾರೆ. ಭಾರತದ ಡಾ.ಗೋಸ್ವಾಮಿಯವರ ಈ ತಂತ್ರಜ್ಞಾನದ ಕೊಡುಗೆ ವಿಶ್ವಾದಂತ್ಯ ಆಸ್ತಮಾ ಸಮಸ್ಯೆ ಎದುರಿಸುತ್ತಿರುವ ಕೋಟ್ಯಾಂತರ ಜನರಿಗೆ ಹೊಸ ಆಶಾಕಿರಣವನ್ನು ಮೂಡಿಸಿದೆ ಎನ್ನುವುದು ಭಾರತೀಯರೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವಾಗಿದೆ.

**2) ಭಾರತದಲ್ಲಿ ವಾಯು ಮಾಲಿನ್ಯ ಕಡಿಮೆ ಮಾಡಲು ಮುಂದಾದ ಐಐಟಿ–ಮುಂಬೈನ ಯುವ ಪ್ರೊಪೆಸರ್ ಡಾ.ವಿಕ್ರಮ್ ವಿಶಾಲ್**.

2014ರಲ್ಲಿ ನೆಡೆದ ಅಧ್ಯಯನವೊಂದರ ಪ್ರಕಾರ ಪ್ರತಿ ವರ್ಷ 260 ಕೋಟಿ ಟನ್ಗಳಷ್ಟು ಕಾರ್ಬನ್ ಡೈಯಾಕ್ಸೈಡ್ ಉತ್ಪತ್ತಿ ಮಾಡುವ ಭಾರತ.ಈ ರೀತಿ ಬೃಹತ್ ಪ್ರಮಾಣದ ಇಂಗಾಲ ಡೈಯಾಕ್ಸೈಡ್ ಮಾಲಿನ್ಯ ಉಂಟು ಮಾಡುವ ವಿಶ್ವದ ಪ್ರಮುಖ ರಾಷ್ಟ್ರಗಳಲ್ಲಿ 4ನೆ ಸ್ಥಾನಗಳಿಸಿದ ಕುಖ್ಯಾತಿಯನ್ನು ಪಡೆಯಿತು. ವರ್ಷ 2016ರಲ್ಲಿ ನೆಡೆದ ಮತ್ತೊಂದು ಅಧ್ಯಯನದಲ್ಲಿ ವಿಶ್ವದಲ್ಲಿ ಹೆಚ್ಚಾಗುತ್ತಿರುವ ಕಾರ್ಬನ್ ಡೈಯಾಕ್ಸೈಡ್ ಮಾಲಿನ್ಯಕ್ಕೆ ಅತ್ಯಧಿಕ ಕೊಡುಗೆಯನ್ನು ನೀಡುವ ದೇಶ ಭಾರತವಾಗಲಿದೆ ಎಂದು ಎಚ್ಚರಿಸಲಾಗಿದೆ.

ದೇಶಾದಂತ್ಯ ಹೆಚ್ಚಾಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಭಾರತ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.ಈ ನಿಟ್ಟಿನಲ್ಲಿ ಡಾ.ವಿಕ್ರಮ ವಿಶಾಲ್, ತಮ್ಮ ಮುಂಬೈ ಐಐಟಿಯ

ಪ್ರಯೋಗಾಲಯದಲ್ಲಿ ಮಾಡಿರುವ ಸಂಶೋಧನೆ ಕ್ರಾಂತಿಕಾರಕ ಕೊಡುಗೆಯನ್ನು ನೀಡಲು ಸಾಧ್ಯವಿದೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಉದ್ಯಮಗಳು ಮೊದಲಾದ ಮೂಲಗಳಿಂದ ಉತ್ಪತ್ತಿಯಾಗುವ ಕಾರ್ಬನ್ ಡೈಯಾಕ್ಸೈಡ್, ಸುಮಾರು 100 ವರ್ಷಗಳ ಕಾಲ ವಾಯು ಮಂಡಲದಲ್ಲಿರುತ್ತದೆ ಎನ್ನುವ ಅಭಿಪ್ರಾಯ ಸರಿಯಲ್ಲ. ನೆಲ, ಜಲ ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾಗುವ ಕಾರ್ಬನ್ ಡೈಯಾಕ್ಸೈಡ್, ಸಾವಿರಾರು ವರ್ಷಗಳ ಕಾಲ ಸಮಸ್ಯೆಯನ್ನುಂಟು ಮಾಡಬಲ್ಲದು ಎಂದು ಡಾ.ವಿಶಾಲ್ ವಿವರಿಸುತ್ತಾರೆ. ವಾತಾವರಣದಲ್ಲಿ ಮಾಲಿನ್ಯವುಂಟು ಮಾಡುತ್ತಿರುವ ಕಾರ್ಬನ್ ಡೈಯಾಕ್ಸೈಡ್ನ್ನು ಸೂಕ್ತ ಒತ್ತಡದಲ್ಲಿ, ನಮ್ಮ ದೇಶದಲ್ಲಿರುವ ಕಲ್ಲಿದ್ದಲು ಗಣಿಗಳಲ್ಲಿ ಆಳವಾದ ಪ್ರದೇಶದಲ್ಲಿ ಪಂಪ್ ಮಾಡಿದಾಗ, ಮೀಥೇನ್ ಉತ್ಪಾದನೆಯಾಗುತ್ತದೆ. ಈ ಮೀಥೇನ್ನ್ನು ಸಂಗ್ರಹಿಸಿ, ನಮ್ಮ ದೇಶದ ಇಂಧನ ಅಗತ್ಯಗಳಿಗೆ ಬಳಸಬಹುದು ಎನ್ನುವುದು ಡಾ.ವಿಶಾಲ್ ಮಾಡಿರುವ ಸಂಶೋಧನೆಯ ಸಾರಾಂಶವಾಗಿದೆ.

ಸಾಂಪ್ರದಾಯಿಕ ಪದ್ಧತಿಯಲ್ಲಿ ಶೇಕಡಾ 40ರಷ್ಟು ಮೀಥೇನ್ ಮಾತ್ರ ಪಡೆಯಲು ಸಾಧ್ಯವಾದರೆ, ಡಾ.ವಿಶಾಲ್ರ ವಿಧಾನದಲ್ಲಿ ಶೇಕಡಾ 70ರಿಂದ 75ರಷ್ಟು ಮೀಥೇನ್ ಪಡೆಯಲು ಸಾಧ್ಯವಿದೆ ಎನ್ನಲಾಗಿದೆ. ವಿಶ್ವಾದಂತ್ಯ ಕಾರ್ಬನ್ ಡೈಯಾಕ್ಸೈಡ್ ಮಾಲಿನ್ಯ ಉಂಟಾಗಲು ಪ್ರಮುಖ ಕೊಡುಗೆ ನೀಡುವ ದೇಶ ಭಾರತವೆನ್ನುವ ಕುಖ್ಯಾತಿಯಿಂದ ಪಾರಾಗಲು ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಇಂಧನದ ಅಗತ್ಯವನ್ನು ಭಾಗಶಃವಾದರೂ ಪೂರೈಸಲು ಮೀಥೇನ್ ಪಡೆಯಲು ಸಾಧ್ಯವಿದೆ ಎಂದು ಪ್ರತಿಪಾದಿಸುವ ಡಾ.ವಿಕ್ರಮ್ ವಿಶಾಲ್ರವರ ಸಂಶೋಧನೆಯನ್ನು ಗುರುತಿಸಿ, ದೇಶದ ಪ್ರತಿಷ್ಠಿತ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ವರ್ಷ 2017ರ ಯುವ ವಿಜ್ಞಾನಿ ಪದಕವನ್ನು ಡಾ. ವಿಶಾಲ್ಗೆ ನೀಡಿ ಗೌರವಿಸಿದೆ.

**3) ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದ ಹಳ್ಳಿಗೆ ನೆರವಾದ ಶ್ರೀ ಅಜಯ ಕುಮಾರ**

ಬೇಸಿಗೆಯಲ್ಲಿ ತೀವ್ರ ಕುಡಿಯುವ ನೀರಿನ ಅಭಾವ ಎದುರಿಸುವ ಸಾವಿರಾರು ಹಳ್ಳಿಗಳು ಭಾರತದಲ್ಲಿವೆ.ಕೇರಳದ ಕೊಟ್ಟಾಯಂ ಜಿಲ್ಲೆಯ ಪಲ್ಲಿಕತ್ತೋಡು ಹೆಸರಿನ ಹಳ್ಳಿಯಲ್ಲಿರುವ 40 ಕುಟುಂಬಗಳ ಜನ ಕೂಡಾ ಇಂತಹ ಕುಡಿಯುವ ನೀರಿನ ತೀವ್ರ ಕೊರತೆಯನ್ನು ಎದುರಿಸುತ್ತಿದ್ದರು.ಹೀಗಾಗಿ ಹೆಚ್ಚು ಹಣ ಕೊಟ್ಟು ಪ್ರತಿವಾರವು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುವುದು ಈ ಹಳ್ಳಿಯ ಜನರಿಗೆ ಅನಿವಾರ್ಯವಾಗಿತ್ತು.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಗ್ರಾಮಸ್ಥರಲ್ಲಿ ಒಬ್ಬರಾದ ಶ್ರೀ ಅಜಯ ಕುಮಾರ ಒಂದು ಯೋಜನೆಯನ್ನು ರೂಪಿಸಿದರು.ಇದರಂತೆ, ಕುಡಿಯುವ ನೀರಿಗಾಗಿ ಒಂದು ಭಾವಿ ಮತ್ತು ಪಂಪ್ಹೌಸ್ ನಿರ್ಮಿಸಲು ಸ್ಥಳೀಯರೊಬ್ಬರು ಭೂಮಿ ನೀಡಿದರು.ಭಾವಿ ಮತ್ತು ಪಂಪ್ಸೆಟ್, ಪಂಪ್ಹೌಸ್ ನಿರ್ಮಾಣಕ್ಕಾಗಿ ಗ್ರಾಮದ ಪ್ರತಿಯೊಂದು ಕುಟುಂಬಕ್ಕೆ ನಾಲ್ವತ್ತು ಸಾವಿರ ರೂಪಾಯಿನಂತೆ ದೇಣಿಗೆ ಸಂಗ್ರಹಿಸಲಾಯಿತು.

ಪಂಪ್‌ಹೌಸ್‌ನಲ್ಲಿರುವ ಮೋಟರ್‌ಗಳ ಚಲನೆಯನ್ನು ನಿಯಂತ್ರಿಸಲು ಸೂಕ್ತವಾಗುವಂತೆ ಮೊಬೈಲ್ ಫೋನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಕ್ಕೆ ತರಲಾಗಿದೆ.ಗ್ರಾಮದಲ್ಲಿರುವ ಯಾವುದೇ ಮನೆಯವರಿಗೆ ನೀರು ಬೇಕಾದಾಗ, ಅವರು ತಮ್ಮಲ್ಲಿರುವ ಮೊಬೈಲ್ ಫೋನ್ನಿಂದ ಪಂಪ್‌ಹೌಸ್‌ನಲ್ಲಿ ಅಳವಡಿಸಲಾಗಿರುವ ಮೊಬೈಲ್ ಫೋನ್‌ಗೆ ಮಿಸ್ಡ್ ಕಾಲ್ ಕರೆ ಮಾಡುತ್ತಾರೆ.ಆಗ ಪಂಪ್‌ಹೌಸ್‌ನಲ್ಲಿರುವ ಮೋಟರ್ ಕೆಲಸ ಮಾಡಲು ಪ್ರಾರಂಭಿಸುತ್ತದೆ ಮತ್ತು ಭಾವಿಯಿಂದ ನೀರು ಪಂಪ್ ಮಾಡಿ, ಆ ಮನೆಯವರ ನೀರಿನ ಅಗತ್ಯವನ್ನು ಪೂರೈಸುತ್ತದೆ.ತಮಗೆ ಅಗತ್ಯವಿರುವಷ್ಟು ನೀರು ದೊರೆತ ನಂತರ, ಆ ಮನೆಯವರು ತಮ್ಮ ಮೊಬೈಲ್ ಫೋನ್ ಬಳಸಿ ಮತ್ತೊಮ್ಮೆ ಪಂಪ್‌ಹೌಸ್‌ನಲ್ಲಿರುವ ಮೊಬೈಲ್ ಫೋನ್‌ಗೆ ಮಿಸ್ಡ್ ಕಾಲ್ ಕರೆ ಮಾಡುತ್ತಾರೆ.ಆಗ ಮೋಟರ್ ಕೆಲಸ ಮಾಡುವುದನ್ನು ನಿಲ್ಲಿಸುತ್ತದೆ.

ಸುಮಾರು 3 ಕಿಲೋಮೀಟರ್ ಸುತ್ತಳತೆಯಲ್ಲಿರುವ ಜನರಿಗೆ ಈ ಮೊಬೈಲ್ ಫೋನ್ ಆಧಾರಿತ ಪಂಪ್ ಹೌಸ್ ನಿರ್ವಹಣೆಯಿಂದ ಅನುಕೂಲವಾಗುತ್ತಿದೆ.ಭಾವಿಯ ನೀರು ಪಂಪ್ ಮಾಡಲೆಂದು ಪ್ರತ್ಯೇಕ ಸಿಬ್ಬಂದಿ ನೇಮಿಸುವುದು ತಪ್ಪಿದೆ. ಯಾವ ಮನೆಯವರು ಯಾವ ದಿನ ಭಾವಿಯಿಂದ ಎಷ್ಟು ನೀರು ಬಳಸಿದರು ಎಂದು ಲೆಕ್ಕ ಮಾಡುವುದು ಸುಲಭವಾಗಿದೆ ಮತ್ತು ನೀರು ಪೋಲಾಗುವುದಿಲ್ಲ. ಪಲ್ಲಿಕತ್ತೋಡು ಗ್ರಾಮದಲ್ಲಿ ಯಶಸ್ವಿಯಾಗಿರುವ ಈ ಯೋಜನೆಯನ್ನು ಈ ರೀತಿ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಬೇರೆ ಗ್ರಾಮಗಳು ಅನುಷ್ಠಾನಕ್ಕೆ ತರಲು ಚಿಂತನೆ ನಡೆಸಿವೆ.

**4) ಮಹಾನಗರಗಳಲ್ಲಿ ಅಪಾರ್ಟ್ಮೆಂಟ್ ಸಮುಚ್ಛಯಗಳಲ್ಲಿ ನೀರಿನ ಉಳಿತಾಯಕ್ಕೆ ಕಾರಣವಾದ ಐಓಟಿ**

ವಿಶ್ವದೆಲ್ಲಡೆ, ಶುದ್ಧ ಕುಡಿಯುವ ನೀರಿನ ಕೊರತೆ ಹೆಚ್ಚಾಗುತ್ತಿದೆ.ಕಾವೇರಿ, ಕೃಷ್ಣೆ, ಮಹಾದಾಯಿ ಜಲವಿವಾದಗಳು ಲಕ್ಷಾಂತರ ಜನ ಕನ್ನಡಿಗರ ಮೇಲೆ ಪರಿಣಾಮ ಬೀರುತ್ತಿವೆ.ಇನ್ನು ಮಲಿನವಾದ ನೀರನ್ನು ಬಳಸುವುದು ಅನಿವಾರ್ಯವಾದ ಪ್ರದೇಶಗಳಲ್ಲಿರುವ ಜನತೆ, ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಆತಂಕದ ವಿಷಯವಾಗಿದೆ. ನೀರು ಸಂರಕ್ಷಣೆ ಮಾಡಿ, ನೀರು ಪೋಲು ಮಾಡಬೇಡಿ ಎಂದು ಜನಜಾಗೃತಿ ಮೂಡಿಸಲು ಪ್ರಯತ್ನಗಳು ನಡೆದಿವೆಯಾದರೂ ನೀರಿನ ಸಮರ್ಪಕ ಬಳಕೆ ಎಲ್ಲಾ ಕಡೆಯಲ್ಲೂ ಆಗುತ್ತಿಲ್ಲ. ನಗರದ ಜಲಮಂಡಳಿ ಕುಡಿಯುವ ನೀರು ಪೂರೈಸಿದರೆ ಅದನ್ನು ಮನೆ ಮತ್ತು ವಾಹನಗಳನ್ನು ತೊಳೆಯಲು ಬಳಸುವ ಸುಶಿಕ್ಷಿತರ ಸಂಖ್ಯೆ ಕಡಿಮೆ ಇಲ್ಲ..

ಮಹಾನಗರ ಪ್ರದೇಶಗಳಲ್ಲಿ ನೂರಾರು ಅಪಾರ್ಟ್ಮೆಂಟ್‌ಗಳಿರುವ ಬೃಹತ್ ವಸತಿ ಸಮುಚ್ಛಯದಲ್ಲಿರುವ ಜನರ ಕುಡಿಯುವ ನೀರಿನ ನಿರ್ವಹಣೆಗೆಂದು ಐಓಟಿ ಆಧಾರಿತ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ನೀರು ಪೋಲಾಗುವುದನ್ನು ತಪ್ಪಿಸಲು ಯಶಸ್ವಿಯಾಗಿರುವ ಈ ತಂತ್ರಜ್ಞಾನವನ್ನು ನೀರು ಹೆಚ್ಚಾಗಿ ಬಳಸುವ ಆಸ್ಪತ್ರೆಗಳು, ಹೋಟಲ್ಲುಗಳು, ರಿಸಾರ್ಟ್‌ಗಳು ಮತ್ತು ಉದ್ಯಮಗಳು ಕೂಡಾ ಬಳಸಿಕೊಳ್ಳಲು ಆಸಕ್ತಿ ತೋರಿಸುತ್ತಿವೆ.

ಸಾಮಾನ್ಯವಾಗಿ ಬೃಹತ್ ವಸತಿ ಸಮುಚ್ಚಯಗಳಲ್ಲಿ ಒಂದು ಅಪಾರ್ಟ್ಮೆಂಟ್ನವರು ನೀರು ಪೂರೈಕೆಗೆಂದು ತಿಂಗಳಿಗೆ ಇಷ್ಟು ಹಣ ನೀಡಬೇಕು ಎಂದು ನಿಗದಿ ಪಡಿಸಲಾಗುತ್ತದೆ. ಆದರೆ ಈ ವ್ಯವಸ್ಥೆಯಲ್ಲಿ ಪ್ರತಿದಿನ ಯಾವ ಅಪಾರ್ಟ್ಮೆಂಟ್ನವರು ಹೆಚ್ಚು ನೀರು ಬಳಸಿದರು, ಯಾರು ಕಡಿಮೆ ನೀರು ಬಳಸಿದರು, ಎಲ್ಲಿ ನೀರು ಪೋಲಾಗುತ್ತಿದೆ ಎನ್ನುವ ವಿವರಗಳು ದೊರೆಯುವುದಿಲ್ಲ. ಹೀಗಾಗಿ ನೀರಿನ ಮಿತವ್ಯಯ ಮಾಡಿದ ಅಪಾರ್ಟ್ಮೆಂಟ್ನ ಜನರು, ನೀರಿನ ಅಪವ್ಯಯ ಮಾಡಿದ ಅಪಾರ್ಟ್ಮೆಂಟಿನ ಜನರು ನೀಡಿದಷ್ಟೇ ಮಾಸಿಕ ನೀರಿನ ಶುಲ್ಕ ನೀಡುವುದು ಅನಿವಾರ್ಯವಾಗುತ್ತಿದೆ. ನೂರಾರು ಅಪಾರ್ಟ್ಮೆಂಟ್ಗಳು ಇರುವ ಬೃಹತ್ ವಸತಿ ಸಮುಚ್ಚಯಗಳಲ್ಲಿ ಪ್ರತಿಯೊಂದು ಅಪಾರ್ಟಾಮೆಂಟ್ಗೆ ನೀರಿನ ಬಳಕೆಯ ಮೀಟರ್ ಅಳವಡಿಸುವುದು, ಪ್ರತಿ ತಿಂಗಳು ಈ ನೀರಿನ ಮೀಟರ್ ನೋಡಿ ಎಷ್ಟು ನೀರು ಖರ್ಚಾಗಿದೆ ಎಂದು ತಿಳಿದು ಲೆಕ್ಕ ಮಾಡುವುದು ಸುಲಭದ ವಿಷಯವಲ್ಲ. ಮೊದಲು, ಪ್ರತಿಯೊಂದು ಅಪಾರ್ಟ್ಮೆಂಟ್ಗೆ ನೀರು ಸರಬರಾಜು ಮಾಡುವ ನೀರಿನ ಕೊಳವೆಗೆ ವಿಶೇಷವಾದ ಸೆನ್ಸರ್ (ಸೂಕ್ಷ್ಮ ಗ್ರಾಹಕ) ಉಪಕರಣಗಳನ್ನು ಅಳವಡಿಸಲಾಗುತ್ತದೆ. ನೀರಿನ ಕೊಳವೆಯಲ್ಲಿ ನೀರು ಹರಿಯುವಾಗ ಸಕ್ರೀಯಗೊಳ್ಳುವ ಈ ಸೆನ್ಸರ್‌ಗಳು ಅಪಾರ್ಟ್ಮೆಂಟ್ಗೆ ದಿನದ ಯಾವ ಹೊತ್ತಿನಲ್ಲಿ ಎಷ್ಟು ಪ್ರಮಾಣದ ನೀರು ಪೂರೈಕೆಯಾಗಿದೆ ಎನ್ನುವ ಮಾಹಿತಿಯನ್ನು ಗ್ರಹಿಸಿ, ವೈರ್ಲೆಸ್ ಇಂಟರ್ನೆಟ್ ಮೂಲಕ ಕೇಂದ್ರ ಕಂಪ್ಯೂಟರ್ಗೆ ಕಳುಹಿಸುತ್ತವೆ. ಇದರಿಂದಾಗಿ ಪ್ರತಿದಿನ ಯಾವ ಅಪಾರ್ಟ್ಮೆಂಟ್ಗೆ ಎಷ್ಟು ನೀರು ಪೂರೈಕೆಯಾಗಿದೆ ಎನ್ನುವ ನಿಖರವಾದ ಲೆಕ್ಕ ಸಿಗುತ್ತದೆ ಮತ್ತು ಪ್ರತಿ ತಿಂಗಳು ಎಷ್ಟು ನೀರು ಬಳಕೆಯಾಗಿದೆ ಎನ್ನುವುದರ ಆಧಾರದ ಮೇಲೆ ಅಪಾರ್ಟ್ಮೆಂಟ್ನವರು ಮಾಸಿಕ ನೀರಿನ ಶುಲ್ಕ ಪಾವತಿಸುತ್ತಾರೆ.

ಈ ತಂತ್ರಜ್ಞಾನ ಆಧಾರಿತ ನೀರು ನಿರ್ವಹಣೆ ವ್ಯವಸ್ಥೆಯನ್ನು ಭಾರತದ ವಿವಿಧ ನಗರಗಳಲ್ಲಿರುವ ಸುಮಾರು 5000 ಅಪಾರ್ಟ್ಮೆಂಟ್ಗಳು ಮತ್ತು ಮನೆಗಳಲ್ಲಿ ಅಳವಡಿಸಲಾಗಿದೆ. ಈ ವ್ಯವಸ್ಥೆ ಅಳವಡಿಸಿದ ನಂತರ ಪ್ರತಿಯೊಂದು ಅಪಾರ್ಟ್ಮೆಂಟ್ ಪ್ರತಿ ತಿಂಗಳು ಬಳಸುವ ನೀರಿನಲ್ಲಿ ಶೇಕಡಾ 30ರಷ್ಟು ಕಡಿಮೆಯಾಗಿದೆ ಎನ್ನಲಾಗಿದೆ.

**ನಳಿನಾ ಬಿ. ಹೆಚ್**
ಚತುರ್ಥ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

# ಬ್ರಾಹ್ಮಿ– ಪ್ರಾಕೃತವನ್ನು ಹಿಮ್ಮೆಟ್ಟಿಸಿದ ಸಂಸ್ಕೃತ ಕನ್ನಡ

ಆರಂಭಕಾಲೀನ ಸಹಸ್ರಮಾನದ ಆರಂಭದಲ್ಲಿ ಅಂದರೆ ಕ್ರಿಸ್ತ ಶಕೆಯ ಆರಂಭದಲ್ಲಿ ಕೆಳಗಿನ ದಕ್ಷಿಣದಲ್ಲಿ ಶಾತವಾಹನರ ಯುಗ ಆರಂಭವಾಯಿತು. ಆಗ ತಮ್ಮ ಕಾರ್ಯಸಾಧನೆಗಳನ್ನು ಮತ್ತು ಪೂರ್ವೇತಿಹಾಸಗಳನ್ನು ಬರೆದಿಡುವ ಕಾಯಕಕ್ಕೆ ಲಿಪಿಕಾರರ ಅವಶ್ಯಕತೆ ಮನಗಂಡರು. ಆಗ ಪುನಃ ಲಿಪಿಕಾರರನ್ನು ಗುರುತಿಸುವ ಕೆಲಸದ ಆರಂಭವಾಯ್ತು. ಆದರೆ ಆ ಕಾಲದಲ್ಲಿ ಅಶೋಕನದ್ದೆನ್ನುವ ಶಾಸನಗಳು ಮತ್ತು ಇತರ ರಾಜರುಗಳ ಶಾಸನಗಳು ಬ್ರಾಹ್ಮೀ ಲಿಪಿಯನ್ನು ಬಳಸಿಕೊಂಡಿದ್ದವು ಮತ್ತು ಗ್ರಾಮೀಣ ಸೊಗಡನ್ನು ಪ್ರತಿನಿಧಿಸುವ ಪ್ರಾಕೃತವನ್ನು ಆಯ್ದುಕೊಂಡಿದ್ದವು. ಆದರೆ ದಕ್ಷಿಣದಲ್ಲಿ ಶಾತವಾಹನರು ಕ್ರಿಸ್ತ ಶಕ 2ನೇ ಶತಮಾನದ ಅಂತ್ಯದಿಂದ ಮೂರನೇ ಶತಮಾನಗಳಲ್ಲಿ ಸಂಸ್ಕೃತ ಭಾಷೆ ಮತ್ತು ಲಿಪಿಯನ್ನು ಬ್ರಾಹ್ಮಿಯಲ್ಲಿ ಬರೆಯಲಾರಂಭಿಸಿದರು ಇದಾದ ಕೆಲವೇ ಸಮಯಗಳಲ್ಲಿ ಕನ್ನಡ ಭಾಷೆಯ ಶಾಸನಗಳು ಒಂದೊಂದಾಗಿ ಇತಿಹಾಸದ ಪುಟದಲ್ಲಿ ಖಾತೆ ತೆರೆಯಲಾರಂಭಿಸಿದವು. ಆದರೆ ಅನಿವಾರ್ಯತೆಯೋ ಅಥವಾ ಆಗಿನ್ನೂ ಲಿಪಿಯ ಟಿಸಿಲು ಸರಿಯಾಗಿ ಒಡೆದಿರಲಿಲ್ಲವೋ ಲಿಪಿಯನ್ನು ಬ್ರಾಹ್ಮಿ ಆವರಿಸಿತ್ತು. ಅಥವಾ ಲಿಪಿಯ ವಿಕಾಸದ ಹಂತದ ಕನ್ನಡ ಕ್ರಮೇಣ ಉಪಕ್ರಮಿಸುತ್ತಿತ್ತು.

ಉತ್ತರದ ಮೌರ್ಯರ ಸಾಮ್ರಾಜ್ಯದ ಅಳಿವಿನ ನಂತರ ದಕ್ಷಿಣದಲ್ಲಿ ಕ್ರಮೇಣ ಶಾತವಾಹನರ ಪ್ರಾಬಲ್ಯ ಅಧಿಕಗೊಂಡಿತು. ಒಂದೊಮ್ಮೆ ಮೌರ್ಯರೇ ಆಮೇಲೆಯೂ ಪ್ರಬಲರಾಗಿದ್ದರೆ ದಕ್ಷಿಣದ ಲಿಪಿಯ ಇತಿಹಾಸ ಮೊಟಕುಗೊಳ್ಳುತ್ತಿತ್ತು. ಆದರೆ ಶಾತವಾಹನರು ಅದಕ್ಕೆ ವ್ಯತಿರಿಕ್ತವಾಗಿ ಶಿಲ್ಪಿಗಳ, ಕಲಾಕಾರರ ಒಂದು ವರ್ಗವನ್ನೆ ಬೆಳೆಸತೊಡಗಿದರು ಇದು ಕೇವಲ ಲಿಪಿಯ ಇತಿಹಾಸ ಮಾತ್ರವಲ್ಲ ದಕ್ಷಿಣದಲ್ಲಿ ಕಲೆಯ ಸಾಮ್ರಾಜ್ಯವನ್ನು ಹುಟ್ಟುಹಾಕಿದರು ಎನ್ನ ಬಹುದು. ಬೌದ್ಧ ಧರ್ಮವನ್ನೆ ಆಯ್ದು ಕೊಂಡಿದ್ದರೂ ಸಹ ಇಡೀ ದೇಶದಾದ್ಯಂತ ಅತೀ ಕಡಿಮೆ ಅವಧಿಯಲ್ಲಿ ಕಲಾವರ್ಗ ಒಂದನ್ನು ಬೆಳೆಸಿದರು ಹಾಗೆಯೇ ವಿಸ್ತರಿಸಿದರು. ಮುಖ್ಯವಾಗಿ ದಕ್ಷಿಣದ ಭಾಗವನ್ನು ಒಂದುಗೂಡಿಸುವಲ್ಲಿ ಶ್ರಮಿಸಿದರು. ಇದರಿಂದಾಗಿ ಪೂರ್ವ ಪಶ್ಚಿಮದ ಕರಾವಳಿಗಳ ಮಧ್ಯದ ಪ್ರದೇಶವನ್ನು ಒಂದುಗೂಡಿಸುವಲ್ಲಿ ಹೆಚ್ಚು ಒತ್ತು ಕೊಟ್ಟದ್ದರ ಪರಿಣಾಮ ಅದಕ್ಕೂ ಕೆಳಗಿನ ತಮಿಳುನಾಡಿಗಿಂತ ಮೊದಲು ತಮಿಳಿನ ಲಿಪಿಗಿಂತ ಮೊದಲು ಕನ್ನಡ ಖಾತೆ ತೆರೆಯಿತು. ಉಳಿದೆಲ್ಲಾ ಭಾಗಕ್ಕಿಂತ ಮೊದಲು ಲಿಪಿಯ ಸಂಸ್ಕೃತಿಯ ಅಡಿಯಲ್ಲಿ ದಾಖಲಾಯಿತು. ಬುದ್ಧನ ಜಾತಕ ಕಥೆಗಳು, ವಿನಯ ಮತ್ತು ಸೂತ್ರವೇ ಮೊದಲಾದ ಬೌದ್ಧ ಸಾಹಿತ್ಯವನ್ನು ಕರಗತ ಮಾಡಿಕೊಂಡಿದ್ದ ಶಿಲ್ಪಗಳು ಹೊಸ ಹೊಸ ಬಗೆಯ ವಿನ್ಯಾಸಗಳನ್ನೂ ಹೊಸ ಬಗೆಯ ಕೆಲಸಗಳನ್ನು ತಿಳಿದವರಾಗಿದ್ದರಿಂದ ಇವರನ್ನು ನವಕರ್ಮಿಗಳು ಎನ್ನುವುದಾಗಿ ಕರೆಯಲಾಗಿತ್ತು. ಮೌರ್ಯೋತ್ತರ ಕಾಲದ ಕುಷಾನರ ರಾವಲ್ಪಿಂಡಿ, ಪೇಶಾವರ, ತಕ್ಷಶಿಲಾ ಶಾಸನಗಳಲ್ಲಿ ಇವರ ಉಲ್ಲೇಖ ಕಾಣಸಿಗುತ್ತದೆ. ಇವರು ಸಂಘಾರಾಮ ಸ್ತೂಪ ವಿಹಾರಗಳನ್ನು ಮಾಡಿ ವಿನ್ಯಾಸಗೊಳಿಸಿದ್ದರು. ಇವರಲ್ಲಿ ಸಂಘಮಿತ್ರನೆನ್ನುವವನು ಸ್ತೂಪ ನಿರ್ಮಿಸುತ್ತಿದ್ದ, ಬುರಿತನೆನ್ನುವವ ಶಿಲ್ಪಿ ಹಾಗೂ ಶಾಸನಗಳನ್ನು

ಬರೆಯುತ್ತಿದ್ದ. ತಾಮ್ರ ಪಟವನ್ನು ರೋಹಿಣೀಪುತ್ರ ಬರೆದ. ನವಕರ್ಮಿಗಳಂತೆ, ಸುತ್ತಾಂತಿಕ, ಮುಂತಾದವರೂ ಇದ್ದರು.

ಕರ್ನಾಟಕದ ಸನ್ನತಿಯ ಕನಗನಹಳ್ಳಿಯಲ್ಲಿ ಅನೇಕ ತುಂಡು ಶಾಸನಗಳು ದೊರೆತದ್ದು ಇದರ ರಚಕರು ಅಥವಾ ಲಿಪಿಕರು ಹಿಮಾಲಯ ಮೂಲದ ಮಹಿನತ ಮತ್ತು ಮಲಗಿ ನವಕರ್ಮಿಗಳು ಮಾಡಿದ್ದು, ಶಿಲಾ ಫಲಕಗಳಲ್ಲಿ ದಾಯಕಮ್ಮನ ಮಗನಾದ ಆಯಮಲ(ಆರ್ಯಮಲ್ಲ) ನೆನ್ನುವ ನವಕರ್ಮಿಯ ಹೆಸರನ್ನು ಸೂಚಿಸುತ್ತವೆ. ಹೀಗೆ ಅನೇಕ ರೀತಿಯ ಹೆಸರುಗಳು ಉಲ್ಲೇಖಗೊಂಡಿದ್ದು ಇಂತವುಗಳು ದಕ್ಷಿಣದ ಅನೇಕ ಶಾಸನಗಳಲ್ಲಿ ಪುನರಾವರ್ತನೆಯಾಗಿರುವುದು ಗೋಚರಿಸುತ್ತವೆ. ಹೀಗೇ ದಕ್ಷಿಣದಲ್ಲಿ ಸುಮಾರು ಮೂರನೇ ಶತಮಾನದ ಅಂತ್ಯದ ತನಕವೂ ಬ್ರಾಹ್ಮಿ ಪ್ರಾಕೃತದ ಸ್ವಾಮಿತ್ವ ಕಾಣ ಸಿಗುತ್ತವೆ.

ಕ್ರಿ.ಶ 2ನೇ ಶತಮಾನದ ಅಂತ್ಯ ಮತ್ತು ಮೂರನೇ ಶತಮಾನದ ಆರಂಭದ ಕಾಲದಲ್ಲಿ ಶಾತವಾಹನ ದೊರೆ ಪುಳುಮಾವಿಯು ಕಲಾ ಇತಿಹಾಸಕ್ಕೆ ಒಂದು ನಾಂದಿ ಹಾಡಿದನು. ವಾಸ್ತುಶಿಲ್ಪ ಮತ್ತು ಕಲೆಯ ಆಯಾಮಗಳನ್ನು ಬಲ್ಲಂತಹ ಓರ್ವ ಶಿಲ್ಪಿಯನ್ನು ಬಳಸಿಕೊಂಡು ತನ್ನ ಪೂರ್ವಜರ ಸ್ಮರಣೆಗಾಗಿ ಚಂಡೇಶಿವ ಮಹಾದೇವನ ದೇವಾಲಯವನ್ನು ನಿರ್ಮಿಸಿದ್ದು ಕನ್ನಡದ ನೆಲದಲ್ಲಿ, ಮತ್ತು ಕನ್ನಡದ ನೆಲದಲ್ಲಿ ದೇವಾಲಯ ವಾಸ್ತುವಿಗೆ ಪ್ರಥಮ ಉದಾಹರಣೆ ಇದು ಇರಬಹುದು. ಅಲ್ಲಿ ವರ್ಧಕಿ ಅಥವಾ ವಡ್ಡಗಿ–ಬಡಗಿಯನ್ನು ಬಳಸಿಕೊಂಡುದರ ಬಗ್ಗೆ ಶಾಸನದಲ್ಲಿಯೂ ಉಲ್ಲೇಖಿಸಿರುವುದರಿಂದ ಬಡಗಿ ಶಬ್ದವೊಂದರ ವ್ಯುತ್ಪತ್ತಿಯೂ ಆಗಲೇ ಆಗಿತ್ತು ಎಂದು ಗುರುತಿಸಬಹುದು. ಇದು ಕರ್ನಾಟಕದ ಇತಿಹಾಸದಲ್ಲಿ ಪ್ರಾಕೃತ ಭಾಷೆಯಲ್ಲಿನ ಶಿವಾಲಯದ ಮೊದಲ ಉಲ್ಲೇಖ ಇದಾಗಿದ್ದು. ಆಮೇಲಿನ ಉಲ್ಲೇಖಗಳೆಲ್ಲಾ ಸಂಸ್ಕೃತದಲ್ಲಿ ಅಥವಾ ಕನ್ನಡದಲ್ಲಾಗಿವೆ. ಆದರೆ ಅದಾಗಲೇ ಸಂಸ್ಕೃತದಲ್ಲಿ ಬರೆಯಲ್ಪಟ್ಟ ನಾಗಾರ್ಜುನಕೊಂಡದ ಶಾಸನಕ್ಕಿಂತಲೂ ಮೊದಲೇ ನಿರ್ಗುಂದದ ಶಿವಾಲಯ ನಿರ್ಮಾಣವಾಗಿದ್ದು. ಇದರ ರಚನೆಯ ಬಗ್ಗೆ ಅಷ್ಟಾಗಿ ತಿಳಿಯದೇ ಇರುವುದು ಸೋಜಿಗವೆನ್ನಿಸುತ್ತದೆ. ಆದರೆ ಆ ಕಾಲಕ್ಕಾಗಲೇ ಶಿಲಾ ದೇಗುಲ ನಿರ್ಮಾಣ ಮತ್ತು ಶಾಸನಗಳನ್ನು ಖಂಡರಿಸಲು ನೈಪುಣ್ಯತೆಯನ್ನು ಪಡೆದಿದ್ದರು.

ಪಲ್ಲವ ದೊರೆ ಶಿವ ಸ್ಕಂದವರ್ಮನ ಒಂದು ತಾಮ್ರಪಟ ಶಾಸನವು ಪ್ರಾಕೃತ ಭಾಷೆಯಲ್ಲಿದ್ದು ಇಲ್ಲಿ ಬ್ರಾಹ್ಮಿ ಲಿಪಿಯು ತನ್ನ ತನವನ್ನು ಸಡಿಲಿಸಿ ದಕ್ಷಿಣದ ಲಿಪಿಗೆ ಹತ್ತಿರವಾಗಿದ್ದು ಪ್ರಾಕೃತಭಾಷೆಯಲ್ಲಿರುವ ಅತ್ಯಂತ ದೀರ್ಘಶಾಸನವೆನ್ನುವ ಹೆಗ್ಗಳಿಕೆ ಹೊಂದಿದೆ. ಈ ಶಾಸನದ ಅಂತ್ಯವನ್ನು ಗಮನಿಸಿದರೆ ಶಾಸನದ ಇತಿಹಾಸದಲ್ಲಿ ದಕ್ಷಿಣಕ್ಕೆ ಬ್ರಾಹ್ಮಣರ ಸೇರ್ಪಡೆಯನ್ನು ಸೂಚಿಸುತ್ತದೆ. ಕೋಲಿವಾಲದ ಭೋಜಕ ಭಟ್ಟ ಶಮ್ಮನು ತನ್ನ ಹಸ್ತದಿಂದಲೇ ಬರೆದಿದ್ದು ಗೋ ಮತ್ತು ಬ್ರಾಹ್ಮಣರನ್ನು ವಂದಿಸಿದ್ದಲ್ಲದೇ ರಹಸ್ಯಾಧಿಕನಾಗಿದ್ದನ್ನು ಪ್ರತಿಧ್ವನಿಸುತ್ತದೆ. ಈ ಬ್ರಾಹ್ಮಣ ಸಮುದಾಯವು ಮೊದ ಮೊದಲು ಕ್ರಿ. ಶ 2–3 ನೇ ಶತಮಾನದಲ್ಲಿ ಪ್ರಚಲಿತವಿದ್ದ ಸ್ಥಳೀಯ ಭಾಷೆ ಮತ್ತು ಲಿಪಿಗಳನ್ನು ಬಳಸಿಕೊಂಡು ಕರ್ನಾಟಕದ

ನೆಲದಲ್ಲಿ ನೆಲೆ ನಿಂತು ಇಲ್ಲಿಯೇ ಮುಂದೆ ವ್ಯಾವಹಾರಿಕದಿಂದ ಸಾಹಿತ್ಯಿಕ ನೆಲೆಯನ್ನು ಬಳಸಿಕೊಂಡ ಬಗ್ಗೆ ಅನೇಕ ಕಡೆ ಉದಾಹರಣೆಗಳು ದೊರಕುತ್ತವೆ. ವಲಸಿಗರಿಂದ ಬರೆಯಲ್ಪಟ್ಟ ಶಾಸನಗಳೆಲ್ಲಾ ಮುಂದಕ್ಕೆ ಸ್ಥಳೀಯ ಕನ್ನಡವನ್ನು ಲಿಪಿಯಾಗಿಸಿಯೂ ಸಂಸ್ಕೃತ ವನ್ನು ಮಾಧ್ಯಮದ ಭಾಷೆಯನ್ನಾಗಿಯೂ ಬಳಸಿಕೊಂಡರು. ಆದರೆ ಗಾಂಧಾರದ ಖರೋಷ್ಠಿ ಪಂಡಿತ ಚಪಡ ಅಶೋಕನ ಶಾಸನಗಳನ್ನು ಬ್ರಾಹ್ಮಿ ಮತ್ತು ಪ್ರಾಕೃತದಲ್ಲಿ ಬರೆದಂತೆ ಮುಂದಕ್ಕೆ ಯಾರೂ ಶುದ್ಧ ಪ್ರಾಕೃತವನ್ನು ಮಾತ್ರ ಬಳಸಿ ಬರೆದಂತೆ ಕಾಣಿಸುತ್ತಿಲ್ಲ. ಅಂದರೆ ಒಂದೋ ಮುಂದೆ ಪ್ರಾಕೃತದ ಪ್ರಭಾವ ಕಡಿಮೆ ಆಗಿ ಸಂಸ್ಕೃತ ಆ ಭಾಗವನ್ನು ಕ್ರಮೇಣ ಆವರಿಸಿತು. ಅಥವಾ ಸಾಮಾನ್ಯ ಜನರಲ್ಲೂ ಸಂಸ್ಕೃತದ ಒಲವು ಹೆಚ್ಚಾಗಿರಬಹುದು. ಅದಕ್ಕೆ ಉದಾಹರಣೆ ಎಂದರೆ ಪಲ್ಲವ ಶಿವಸ್ಕಂದವರ್ಮನ ಹಿರೇಹಡಗಲೀ ಶಾಸನ. ಚಪಡನಂತೆ ಇಲ್ಲಿ ಇದನ್ನು ಭಟ್ಟ ಶಮ್ಮ ಅಥವಾ ಭಟ್ಟಶರ್ಮ ಬರೆದಿದ್ದಾನೆ ಆದರೆ ಈ ಶಾಸನದಲ್ಲಿ ಪ್ರಾಕೃಅತದ ಜೊತೆಗೆ ಸಂಸ್ಕೃತವನ್ನೂ ತೂರಿಸಿರುವುದು ಕಾಣಸಿಗುತ್ತದೆ. ಚಪಡ ಪ್ರಾಕೃತದಿಂದ ಪ್ರಭಾವಿತನಾಗಿದ್ದರೆ ಇಲ್ಲಿ ಭಟ್ಟ ಶರ್ಮ ಸಂಸ್ಕೃತದಿಂದ ಪ್ರಭಾವಿತನಾಗಿದ್ದ ಆದುದರಿಂದ ಉಭಯ ಭಾಷೆಗಳಲ್ಲೂ ಹಿಡಿತ ಸಾಧಿಸಿದ್ದರೂ ಸಹ ಕೆಲವೊಮ್ಮೆ ಒಂದು ಭಾಷೆಯಲ್ಲಿ ಇನ್ನೊಂದು ಭಾಷೆಯ ಪ್ರಯೋಗ ಸಾಮಾನ್ಯ ಮತ್ತು ಅನಿವಾರ್ಯವೆನ್ನಿಸುತ್ತದೆ. ಆದರೆ ಚಪಡನ ಕಾಲದಲ್ಲಿ ಬ್ರಾಹ್ಮಣ್ಯದ ಕುರುಹಗಳಿಲ್ಲ. ಇಲ್ಲಿ ಹಿರೇ ಹಡಗಲಿಯ ಶಾಸನದಲ್ಲಿ 'ಸ್ವಸ್ತಿ ಗೋ ಬ್ರಾಹ್ಮಣ ಲೇಖಕ ವಾಚಕ ಶ್ರೋತ್ರಿಭ್ಯಃ' ಎಂದು ಗೋವುಗಳು ಮತ್ತು ಬ್ರಾಹ್ಮಣರ ಜೊತೆಗೆ ಲೇಖಕ ವಾಚಕ ಮತ್ತು ಶ್ರೋತ್ರೀಯರನ್ನೂ ಸಹ ಸ್ಮರಿಸಿಕೊಂಡು ಶುಭಕೋರಿದ್ದಾನೆ.

ಕದಂಬರಾಜನ ಮೂರನೇ ಶತಮಾನದ ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯ ಕಲ್ಲೇಶ್ವರ ದೇವಾಲಯದಲ್ಲಿನ ಶಿಲಾಶಾಸನ ಪ್ರಾಕೃತ ಮತ್ತು ಕೊನೆಯ ಹಂತದ ಬ್ರಾಹ್ಮಿ ಲಿಪಿಯಲ್ಲಿ ಖಂಡರಿಸಲಾಗಿದೆ. ಇಲ್ಲಿಯ ತನಕ ಸ್ವರಾಕ್ಷರಗಳನ್ನು ಬಳಸಲಾಗಿದ್ದರೂ ಸಹ "ಋಕಾರದ ಬಳಕೆ ಇದೇ ಮೊದಲ ಸಲ ಎನ್ನ ಬಹುದಾಗಿದೆ. "ಬ್ರಹ್ಮ ದೆಜ್ಜಂ ಸೇ ಕದಂಬೇಸು ಋಧಮಾತೇ ವಿಸಸತ್ತು" ಎನ್ನುವ ಸಾಲು ಲಿಪಿಯ ಅಧ್ಯಯನದ ದೃಷ್ಟಿಯಿಂದ ಮಹತ್ವ ಪಡೆದುಕೊಳ್ಳುತ್ತದೆ. ಹಾಗೆಯೇ ಲಿಪಿಕಾರನ ಬಗ್ಗೆ "ಲಿಖಾಪಿತಂ" ಎನ್ನುವುದಾಗಿ ಹೇಳಿದ್ದರೂ ಬರೆದವನನ್ನು ವಿಶ್ವಕಮ್ಮಾ ಎಂದು ಹೇಳಿಕೊಂಡಿದ್ದಾನೆ. ನಾಲ್ಕನೆಯ ಸಾಲಿನಲ್ಲಿ ಸ್ಪಷ್ಟವಾಗಿ "ಉಕ್ತಂ ಖಣ್ಡೊ ವಿಶ್ವಕಮ್ಮಾ" ಎನ್ನುವುದು ದಕ್ಷಿಣದಲ್ಲಿನ ಪ್ರಾಕೃತ ಭಾಷೆಯಲ್ಲಿನ ಮೊತ್ತ ಮೊದಲ ವಿಶ್ವಕರ್ಮನ ಉಲ್ಲೇಖ ಎನ್ನುವುದಾಗಿ ಪರಿಗಣಿಸ ಬಹುದು. ಪ್ರಾಕೃತದ ಮತ್ತು ಬೌದ್ಧ ಸ್ತೂಪ ನಿರ್ಮಾಣಕಾರರಾದ ನವಕರ್ಮಿಗಳ ದೀರ್ಘ ಉಲ್ಲೇಖದ ನಂತರದ ಈ ಉಲ್ಲೇಖ ಮಹತ್ವ ಪಡೆಯುತ್ತದೆ. ಮುಂದೆ ವಿಶ್ವಕರ್ಮರೇ ನವಕರ್ಮಿಗಳ ಸ್ಥಾನ ಪಡೆದುಕೊಳ್ಳುತ್ತಾರೆ. ಆದರೆ ಇದೇ ಶಾಸನದ ಕೊನೆಗೆ "ನಾಗದತ್ತೇನ" ಎನ್ನುವ ಅಂಶವೂ ಬರುವುದು. ನಾಗದತ್ತನಿಂದ ಈ ಶಿಲಾಲೇಖವು

ಯೋಗ್ಯ ಶೈಲಿಯಲ್ಲಿ ಬರೆಯಲ್ಪಟ್ಟಿತು ಎನ್ನಲಾಗುತ್ತಿದೆ. ಆದರೆ ಈ ಶಾಸನವನ್ನು ಮೊದಲಾರ್ಧ ಚುಟು ಶಾತಕರ್ಣಿ ಬರೆಸಿದ್ದು ಆ ನಂತರದ್ದು ಶಿವಸ್ಕಂದವರ್ಮ ಬರೆಸಿದ ಎನ್ನುವ ಅಭಿಪ್ರಾಯಗಳಿವೆ.

'ಸಜಯತಕಸ ಅಚರಿಯಸ(ದ)ಮೊರಕಸ ಸಿಸೇನಟಕೇನ ನಾಗೋ ಕತೋ' ಇದು ಬನವಾಸಿಯ ವಿಸ್ಣುಕಡ ಸತಕನ್ನಿಯ ನಾಗ ಶಾಸನದ ವಾಕ್ಯ. ಇದು ಸಜಯತ ಎನ್ನುವುದು ಸಂಸ್ಕೃತದ ಸಂಜಯಂತಿಯನ್ನು ಸೂಚಿಸುತ್ತಿದ್ದು ಅದು ಆಗಿನ ವೈಜಯಂತೀ ಈಗಿನ ಬನವಾಸಿಯನ್ನು ಹೆಸರಿಸುತ್ತದೆ. ನಾಗ ಶಿಲ್ಪವನ್ನು ಮಾಡಿದವನನ್ನು ಆಚಾರಿ ಎನ್ನುವುದಾಗಿ ಉಲ್ಲಖಿಸಿದ್ದು ಆಚಾರ್ಯ ಪದದ ಉಲ್ಲೇಖದ ಪ್ರಥಮ ಮಾಹಿತಿ ದೊರೆಯುತ್ತದೆ. ಆಚಾರ್ಯ ಎನ್ನುವ ಪದ ಸರ್ವೇ ಸಾಮಾನ್ಯವಾಗಿದ್ದರೂ ಶಾಸನವೊಂದರಲ್ಲಿ ಸಾತಕರ್ಣಿಗಳ ಕಾಲದಲ್ಲಿ ಪ್ರಥಮ ಎನ್ನಬಹುದಾಗಿದೆ. ಆದರೆ ಈ ಮೊದಲು ಬೌದ್ಧ ಶಾಸನಗಳಲ್ಲಿ 'ಆಚಾರ್ಯ' ಪದ ಬಳಕೆ ಆಗಿದ್ದರೂ ಸಹ ಅದು ಬಹಳ ವಿರಳ. ನಾಗ ಶಿಲ್ಪವೊಂದರಲ್ಲಿ ಇದನ್ನು ಪ್ರಥಮ ಎನ್ನಬಹುದಾಗಿದೆ. ಇದರ ನಂತರದ ಕದಂಬರ ಕಾಲಕ್ಕಾಗಲೇ ಪ್ರಾಕೃತ ಈ ನೆಲದಿಂದ ನೇಪಥ್ಯಕ್ಕೆ ಸರಿದು ಆ ಜಾಗವನ್ನು ಸಂಸ್ಕೃತ ಮತ್ತು ಸ್ಥಳೀಯ ಕನ್ನಡ ಆಕ್ರಮಿಸಿಕೊಂಡಾಗಿತ್ತು. ಹೀಗೆ ಕನ್ನಡದ ನೆಲದಲ್ಲಿ ಕನ್ನಡತನ ತನ್ನ ಅಸ್ತಿತ್ವವನ್ನು ಹುಡುಕುತ್ತಿತ್ತು.

**ಅಶ್ವಿನಿ ಹೆಚ್.**
ಚತುರ್ಥ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

**ನೆನಪು ನೆನಪು ಸಿಹಿ ನೆನಪು**

ಮರಳಿ ಬಾ

ಬಾಲ್ಯದ ನೆನಪೇ
ಬಣ್ಣದ ಕನಸಾಗಿ......
ಮರಳಿಸು....
ಹೋಸ ಚೇತನವಾ
ಬದುಕಿಗೆ ಬೆಳಕಾಗಿ.......
ಜೀವನವೆಂಬ ಗಾಯನದಲ್ಲಿ
ಗಾಯನವೆಂಬ ಭಾವನೆಯಲ್ಲಿ
ಕನಸುಗಳೆಂಬ ಕಲ್ಪನೆ ಚೆಲ್ಲಿ
ಬಿತ್ತಿ ಬೆಳೆದೆನು ಅನುರಾಗದ ಬಳ್ಳಿ
ಮನಸಿನೊಳಗಿನ ಕನಸುಗಳ್ಳೆಲ್ಲವು
ನನಸಾಗುವುದೇ ಹೇಳು
ಬದುಕಿನೊಳಗಿನ ಬವಣೆಗಳೆಲ್ಲವೂ
ಕೊನೆಯಾಗುವುದೇ ಬಾಳು
ಹುಟ್ಟು ಸಾವು ಎರಡರ ನಡುವೆ
ಮೂರು ದಿನದ ಬಾಳಿನಲ್ಲಿ
ನಮ್ಮ ಮನದೊಳು
ನೂರು ಕನಸುಗಳ ಹೊತ್ತು
ಸಾವಿರ ಬಯಕೆಗಳ ಬಿತ್ತಿ
ಸಾಗುತಿದೆ ಬದುಕು
ಏಳು ಬೀಳಿನ ಬಾಳಿನಲಿ
ಏಳಿಗೆ ಒಂದೇ ನಿಮಗಿರಲಿ
ಎಂದೆಂದೂ ನಿಮ್ಮ ಮುಖದಲ್ಲಿ
ನಗುವಿರಲಿ
ಆ ನಗುವಿನಲಿ ನನ್ನ ನೆನಪಿರಲಿ

**ಸಂಗೀತ**
ತೃತೀಯ ಸೆಮಿಸ್ಟರ್, ಪ್ರಶಿಕ್ಷಣಾರ್ಥಿ.

******************

# ೨೦೧೮ – ೨೦೧೯ ಭಾಷಾ ಸಂಘದ ವಾರ್ಷಿಕ ಚಟುವಟಿಕೆಗಳು



















# ನಾಡಗೀತೆ



ಜಯ್ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

ಜಯ್ ಸುಂದರ ನದಿವನಗಳ ನಾಡೆ
ಜಯಹೇ ರಸಋಷಿಗಳ ಬೀಡೆ
ಭೂದೇವಿಯ ಮುಕುಟದ ನವಮಣಿಯೇ
ಗಂಧದ ಚಂದದ ಹೊನ್ನಿನ ಗಣಿಯೇ
ರಾಘವ ಮಧುಸೂಧನರವತರಿಸಿದ ॥ಭಾರತ॥

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸಿರಿನ ಗಿರಿಗಳ ಸಾಲೇ
ನಿನ್ನಯ ಕೊರಳಿನ ಮಾಲೆ
ಕಪಿಲ ಪಂತಜಲಿ ಗೌತಮ ಜಿನನುತ ॥ಭಾರತ॥

ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ ॥ಭಾರತ॥

ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

– ರಾಷ್ಟ್ರಕವಿ ಕುವೆಂಪು